ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 19 ಸೋಮವಾರ 2026

ಮೈಸೂರು ಮಿತ್ರ 46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 271 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ವಿಬಿ ಜಿ ರಾಮ್ ಜಿ ವಿರುದ್ಧ ಹೋರಾಟಕ್ಕೆ ಸಾಥ್ ನೀಡಿ

● ಜನತೆಗೆ ಸಿಎಂ ಸಿದ್ದರಾಮಯ್ಯ ಕರೆ ● ವರುಣ ವ್ಯಾಪ್ತಿಯಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

ತಿ.ನರಸೀಪುರ, ಜ.18– ವಿಬಿ ಜಿ ರಾಮ್ ಜಿ ಯೋಜನೆ ರದ್ದಾಗಿ, ಮನ್ರೇಗಾ ಯೋಜನೆ ಮರು ಜಾರಿಗೆ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಳ್ಳಲಾಗಿರುವ ಹೋರಾಟಕ್ಕೆ ರಾಜ್ಯದ ಜನತೆ ಸಾಥ್ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಮೈಸೂರು ವತಿಯಿಂದ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಟಿ.ನರಸೀಪುರ ತಾಲೂಕಿನ ಕುಪ್ಯಾ ಗ್ರಾಮದಲ್ಲಿ 323.04 ಕೋಟಿ ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

2005ರಲ್ಲಿ ಮನಮೋಹನ್ ಸಿಂಗ್ ಪ್ರಧಾನಿಗಳಾಗಿದ್ದಾಗ ಮನ್ರೇಗಾ ಯೋಜನೆಯನ್ನು ಜಾರಿ ಮಾಡಿದ್ದರು. ಕೆಲಸದ ಹಕ್ಕನ್ನು ಕೊಟ್ಟರು. ಆದರೆ ಕೇಂದ್ರ ಸರ್ಕಾರ ಯೋಜನೆಯ ಹೆಸರನ್ನು ರದ್ದು ಮಾಡುವ ಮೂಲಕ ಬಡವರ ಹಕ್ಕನ್ನು ಕಿತ್ತುಕೊಳ್ಳಲು ಹೊರಟಿದೆ ಎಂದು ಗಂಭೀರ ಆರೋಪ ಮಾಡಿದರು. ಬಿಜೆಪಿಯವರು ಬಡವರು, ಹೆಣ್ಣು ಮಕ್ಕಳು, ಕಾರ್ಮಿಕರಿಗೆ ಕೆಲಸ ಕೊಡಲು ಬಿಡುತ್ತಿಲ್ಲ. ಕಾಂಗ್ರೆಸ್ ಸರ್ಕಾರ, ನೀವು ಯಾವಾಗ ಕೇಳಿದರೂ ಉದ್ಯೋಗ ಕೊಡುವ ಕಾಯಿದೆಯನ್ನು ಜಾರಿ ಮಾಡಿತ್ತು. ಈಗ ಕೇಂದ್ರ ಸರ್ಕಾರ ಯಾರಿಗೆ ಕೆಲಸ ನೀಡಬೇಕು ಎಂಬುದನ್ನು ತೀರ್ಮಾನಿಸಲಿದೆ. ವಿಬಿ ಜಿ ರಾಮ್ ಜಿ ರದ್ದಾಗಬೇಕು. ಜನರನ್ನು ತಪ್ಪು ದಾರಿಗೆ ಎಳೆಯಲು ವಿಬಿ–ರಾಮ್–ಜಿ ತಂದಿದ್ದಾರೆ. ಎಲ್ಲರೂ ಚಳುವಳಿಗೆ ತಯಾರಾಗಿ ಯೋಜನೆ ರದ್ದಾಗುವವರೆಗೂ ಉಗ್ರವಾದ ಹೋರಾಟ ಮಾಡಬೇಕು ಎಂದು ಕರೆ ನೀಡಿದರು. ವರುಣಾ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗಾಗಿ ಮೂರು ಬಾರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 2024ರಲ್ಲಿ 501 ಕೋಟಿ ರೂ. ವೆಚ್ಚದ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ, 2025ರಲ್ಲಿ 1108 ಕೋಟಿ ರೂ. ವೆಚ್ಚದ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಹಾಗೂ ಇಂದು 323 ಕೋಟಿ ಸೇರಿದಂತೆ ಒಟ್ಟು 1,932 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ವರುಣಾ ವಿಧಾನಸಭಾ ಕ್ಷೇತ್ರ ಒಂದರಲ್ಲೇ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳಿಗಾಗಿ 115000 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಇದರ ಜೊತೆಗೆ ಅಭಿವೃದ್ಧಿ ಕಾಮಗಾರಿ ಗಳಿಗೂ ಸಹ ಒತ್ತು ನೀಡಲಾಗುತ್ತಿದೆ. ಮೈಸೂರು ಜಿಲ್ಲೆ ಒಂದರಲ್ಲೇ 10 ಸಾವಿರ ಕೋಟಿ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು ಜಿಲ್ಲೆಯ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದೇನೆ ಎಂದರು.

ತಪ್ಪು ತಿಳಿಯಬೇಡಿ: ಕೆಲಸದ ಒತ್ತಡದ ನಡುವೆ ಕ್ಷೇತ್ರಕ್ಕೆ ಹೆಚ್ಚಾಗಿ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ, ಆದರೆ ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ, ಈ ಭಾಗಕ್ಕೆ ಯತೀಂದ್ರ ■ 6ನೇ ಪುಟಕ್ಕೆ



ಕುಪ್ಯ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ, ಉದ್ಘಾಟನೆ ವೇಳೆ ತಮ್ಮ ಬಳಿ ಹೂವಿನ ಟ್ರೇ ಹಿಡಿದು ಬಂದ ಬಾಲಕಿಗೆ ಸಿಎಂ ಸಿದ್ದರಾಮಯ್ಯ ಹೂಮಳೆ ಸುರಿಸಿ, ಆಶೀರ್ವದಿಸಿದರು.

ಬಿಗ್‌ಬಾಸ್ ಸೀಸನ್–12ರ ವಿನ್ನರ್ ಗಿಲ್ಲಿನಟ



ಬೆಂಗಳೂರು, ಜ.18– ಕಿಚ್ಚ ಸುದೀಪ್ ನಿರೂಪಣೆಯ ಬಿಗ್‌ಬಾಸ್ ಸೀಸನ್ 12ರ ವಿನ್ನರ್ ಆಗಿ ನಟರಾಜ್ ಅಲಿಯಾಸ್ ಗಿಲ್ಲಿನಟ ಹೊರ ಹೊಮ್ಮಿದ್ದಾರೆ. ಅವರು ಆಕರ್ಷಕ ಬಿಗ್‌ಬಾಸ್ ಟ್ರೋಫಿಯೊಂದಿಗೆ 50 ಲಕ್ಷ ರೂ. ಹಾಗೂ ಮಾರುತಿ ವಿಕ್ಟೋರಸ್ ಕಾರನ್ನು ತಮ್ಮದಾಗಿಸಿಕೊಂಡಿದ್ದಾರೆ. ರಕ್ಷಿತಾ ಶೆಟ್ಟಿ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ.

2025ರ ಸೆಪ್ಟೆಂಬರ್ 28ರಂದು ಆರಂಭವಾದ ಬಿಗ್‌ಬಾಸ್ ಸೀಸನ್ 12ರ ಸ್ಪರ್ಧಿಗಳಾಗಿ ಕಾಂಕ್ರೋಚ್ ಸುಧೀರ್, ಕಾವ್ಯ ಶೈವ, ಸತೀಶ್ ಕ್ಯಾಡ್‌ಬಾಮ್ಸ್, ಗಿಲ್ಲಿನಟ, ಜಾನ್ಹವಿ, ಧನುಷ್ ಗೌಡ, ಚಂದ್ರಪ್ರಭಾ, ಮಂಜು ಭಾಷಿಣಿ, ರಕ್ಷಿತಾ ಶೆಟ್ಟಿ, ಅಭಿಷೇಕ್ ಶ್ರೀಕಾಂತ್, ಮಲ್ಲಮ್ಮ, ಎಸ್. ಅಶ್ವಿನಿ, ಧ್ರುವಂತ್, ಕರಿಬಸಪ್ಪ, ರಾಶಿಕ ಶೆಟ್ಟಿ, ಮಾಳು ನಿಪ್ಪಾಳ್, ಸ್ಪಂದನಾ ಸೋಮಣ್ಣ, ಅಶ್ವಿನಿ ಗೌಡ, ■ 6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಕ್ಷೇತ್ರದಲ್ಲಿ ಮಹಿಳಾ ಅಧಿಕಾರಿಗೆ ಧಮ್ಕಿ ಪ್ರಕರಣದ ಹಿನ್ನೆಲೆ

ಗುಡಮಾದನಹಳ್ಳಿಯಲ್ಲಿ 30 ಎಕರೆ ಸರ್ಕಾರಿ ಭೂಮಿ ಒತ್ತುವರಿ ತೆರವು



ಒತ್ತುವರಿಯಾದ ಸರ್ಕಾರಿ ಭೂಮಿಯನ್ನು ತಹಶೀಲ್ದಾರ್ ಮಹೇಶ್‌ಕುಮಾರ್ ಪೊಲೀಸರ ಭದ್ರತೆಯಲ್ಲಿ ವಶಕ್ಕೆ ಪಡೆದರು.

ಮೈಸೂರು, ಜ. 18 (ಆರ್‌ಕೆ, ಎಂಕೆ)– ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿದ್ದ ಮೈಸೂರು ತಾಲೂಕು, ವರುಣಾ ಹೋಬಳಿಯ ಗುಡಮಾದನಹಳ್ಳಿ ಗ್ರಾಮದ ಬಳಿಯ 50 ಕೋಟಿ ಮೌಲ್ಯದ 30 ಎಕರೆ ಜಮೀನನ್ನು ತಹಶೀಲ್ದಾರ್ ಮಹೇಶ್ ಕುಮಾರ್ ಹಾಗೂ ಅಧಿಕಾರಿಗಳ ತಂಡ ತೆರವುಗೊಳಿಸಿದೆ.

ನಿಮ್ಹಾನ್ಸ್ ಮಾದರಿಯ ಆಸ್ಪತ್ರೆ ನಿರ್ಮಾಣದ ಉದ್ದೇಶಕ್ಕಾಗಿ ಈ ಭೂಮಿ ಮಂಜೂರು ಮಾಡಿದ್ದು, ಸರ್ಕಾರದ ನಿರ್ದೇಶನದಂತೆ ತಹಶೀಲ್ದಾರ್, ಗುಡಮಾದನಹಳ್ಳಿ ಸರ್ವೇ ನಂಬರ್‌ಗಳಿಗೆ ಒಳಪಟ್ಟ ಸರ್ಕಾರಿ ಜಮೀನನ್ನು ಪರಿಶೀಲಿಸಲೆಂದು ವರುಣಾ ಕ್ಷೇತ್ರದ ಗ್ರಾಮಾಡಳಿತಾಧಿಕಾರಿ ಭವ್ಯ ಹಾಗೂ ಇತರರನ್ನು ಕಳುಹಿಸಿದ್ದ ವೇಳೆ ಅಲ್ಲಿ 18 ಮಂದಿ ಸದರಿ ಭೂಮಿಯನ್ನು ಒತ್ತುವರಿ ಮಾಡಿ, ಅಕ್ರಮವಾಗಿ ಸ್ವಾಧೀನಾನುಭವದಲ್ಲಿರುವುದು ಕಂಡು ಬಂದಿತು.

ಭವ್ಯ ಹಾಗೂ ಜೊತೆಯಲ್ಲಿದ್ದ ಸಹಾಯಕ ನವೀನ್ ಕುಮಾರ್ ಅವರು ಸ್ಥಳ ಪರಿಶೀಲನೆ ಮಾಡಲು ಮುಂದಾದಾಗ ಗ್ರಾಮದ ಪುಟ್ಟಸ್ವಾಮಿ ಎಂಬುವರು ಅಡ್ಡಿಪಡಿಸಿದ್ದಲ್ಲದೇ ಅವಾಚ್ಯ ಶಬ್ದಗಳಿಂದ ನಿಂದಿಸಿ, ಭವ್ಯ ಅವರಿಗೆ ಜೀವ ಬೆದರಿಕೆ ಒಡ್ಡಿದ್ದರು. ಈ ಸಂಬಂಧ ಪುಟ್ಟಸ್ವಾಮಿ ವಿರುದ್ಧ 2025 ರ ಡಿ.31 ರಂದೇ ಎಫ್‌ಐಆರ್ ■ 6ನೇ ಪುಟಕ್ಕೆ

ಮತ್ತೆರಡು ಹುಲಿ ಮರಿಗಳ ಸೆರೆ





ನಾಲ್ಕರಲ್ಲಿ ಇನ್ನೊಂದು ಮರಿಗೆ ಶೋಧ

ಚಾಮರಾಜನಗರ, ಜ.18(ಎಂಟಿವೈ, ಎಸ್‌ಎಸ್)– ತಾಯಿ ಹುಲಿ ಸೆರೆಯಿಂದ ತಬ್ಬಲಿಯಾಗಿದ್ದ ನಾಲ್ಕು ಮರಿಗಳಲ್ಲಿ ಮತ್ತೆರಡನ್ನು ಅರಣ್ಯ ಸಿಬ್ಬಂದಿ ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ಮತ್ತೊಂದು ಮರಿಗೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆದಿದೆ. ಚಾಮರಾಜನಗರ ಜಿಲ್ಲೆಯ ಹರವೇ ಹೋಬಳಿಯ ನಂಜೇದೇವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ■ 6ನೇ ಪುಟಕ್ಕೆ

ಮೈಸೂರು–ಕುಶಾಲನಗರ ರೈಲ್ವೆ ಯೋಜನೆ ಸ್ಥಗಿತ

ಲಾಭದಾಯಕವಲ್ಲದ ಹಿನ್ನೆಲೆಯಲ್ಲಿ ಈ ನಿರ್ಧಾರ

ಮೈಸೂರು, ಜ.18(ಬಿಸಿಟಿ, ಎಜಿ, ಬಿಎಲ್‌ಯು)– ಬಹುನಿರೀಕ್ಷಿತ ಮೈಸೂರು– ಕುಶಾಲನಗರ ರೈಲ್ವೆ ಮಾರ್ಗ ಯೋಜನೆಯನ್ನು ಕೇಂದ್ರ ರೈಲ್ವೆ ಸಚಿವಾಲಯ ತಡೆ ಹಿಡಿದಿದೆ.



ಮುದಿತ್ ಮಿತ್ತಲ್

ಮೈಸೂರು–ಕುಶಾಲನಗರ ನಡುವಿನ 87.2 ಕಿ.ಮೀ ಉದ್ದದ ಹೊಸ ರೈಲು ಮಾರ್ಗ ಯೋಜನೆಯನ್ನು, ಅನುಮೋದನೆಗೊಂಡ 7 ವರ್ಷಗಳ ಬಳಿಕ ತಡೆ ಹಿಡಿದಿರುವುದು ಸಾರ್ವಜನಿಕರಲ್ಲಿ ಬೇಸರ ತರಿಸಿದೆ. ನೈರುತ್ಯ ರೈಲ್ವೆ ಮೈಸೂರು ವಿಭಾಗದ ರೈಲ್ವೆ ವ್ಯವಸ್ಥಾಪಕ(ಡಿಆರ್‌ಎಂ) ಮುದಿತ್ ಮಿತ್ತಲ್ ಅವರು 'ಮೈಸೂರು ಮಿತ್ರ'ನಿಗೆ ಈ ವಿಷಯ ಖಚಿತಪಡಿಸಿದ್ದು, ಪ್ರಯಾಣಿಕರ ಮಿತ ಸಂಚಾರ ಸಾಧ್ಯತೆ ಹಾಗೂ ನಿರೀಕ್ಷಿತ ಆದಾಯ ಅಸಾಧ್ಯತೆ ಕಾರಣಕ್ಕೆ ರೈಲ್ವೆ ಸಚಿವಾಲಯವು ಈ ಯೋಜನೆಯನ್ನು ತಡೆ ಹಿಡಿದಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕೇಂದ್ರ ರೈಲ್ವೆ ಸಚಿವಾಲಯವು 2019ರ ಫೆಬ್ರವರಿ 27ರಂದು ಈ ಯೋಜನೆಗೆ ಅನುಮೋದನೆ ನೀಡಿ, 1,854.62 ಕೋಟಿ ಅಂದಾಜು ಮೊತ್ತವನ್ನು ಬಿಡುಗಡೆ ಮಾಡಿತ್ತು. ಅಲ್ಲದೆ 2022–23ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಗಾಗಿ ಸಾವಿರ ಕೋಟಿ ಅನುದಾನವನ್ನು ಮೀಸಲಿಡಲಾಗಿತ್ತು. ಈ ನಡುವೆ 2020ರ ಅಕ್ಟೋಬರ್‌ನಲ್ಲಿ ನೈರುತ್ಯ ರೈಲ್ವೆ ನಿರ್ಮಾಣ ವಿಭಾಗದ ಮುಖ್ಯ ಆಡಳಿತಾಧಿಕಾರಿ, ಮೈಸೂರು (ಬೆಳಗೊಳ)–ಕುಶಾಲನಗರ ನಡುವೆ ಹೊಸ ರೈಲ್ವೆ ಬ್ರಾಡ್ ಗೇಜ್ ಮಾರ್ಗಕ್ಕೆ ಅಂತಿಮ ಸ್ಥಳ ಸಮೀಕ್ಷೆಗಾಗಿ ಆದೇಶ ನೀಡಿದ್ದರು. ನಂತರ 1.26 ಕೋಟಿ ವೆಚ್ಚದಲ್ಲಿ ಅಂತಿಮ ಸ್ಥಳ ಸಮೀಕ್ಷೆಯ ಗುತ್ತಿಗೆಯನ್ನು ಬೆಂಗಳೂರು ಮೂಲದ ಸಂಸ್ಥೆಗೆ 2021ರ ಆಗಸ್ಟ್ ನಲ್ಲಿ ವಹಿಸಲಾಗಿತ್ತು. ಇದಾದ ಬಳಿಕ ಭೂಸ್ವಾಧೀನ,

ರೈಲು ಹಳಿ ಜೋಡಣೆ, ಮ್ಯಾಪಿಂಗ್, ಅಂತಿಮ ಭೂ ಸಮತಟ್ಟು ಸಮೀಕ್ಷೆ ಸೇರಿದಂತೆ ಯೋಜನೆ ಸಂಬಂಧಿತ ಹಲವು ಪ್ರಕ್ರಿಯೆಗಳು ಆರಂಭಗೊಂಡಿದ್ದವು.

ಈ ಪ್ರಸ್ತಾವಿತ ರೈಲು ಮಾರ್ಗವು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದಿಂದ ಆರಂಭವಾಗಿ, ಕೊಡಗು ಜಿಲ್ಲೆಯ ಕುಶಾಲನಗರ ಸಮೀಪದ ಕೊಪ್ಪದಲ್ಲಿ ಅಂತ್ಯಗೊಳ್ಳಬೇಕಾಗಿತ್ತು. ಇಲವಾಲ, ಬಿಳಿಕೆರೆ, ಉದ್ದೂರು, ಹುಣಸೂರು, ಸತ್ತೆಗಾಲ, ಪಿರಿಯಾಪಟ್ಟಣ ಹಾಗೂ ದೊಡ್ಡಹೊನ್ನೂರು ಮಾರ್ಗವಾಗಿ ಈ ಯೋಜನೆ ■ 6ನೇ ಪುಟಕ್ಕೆ

ಮೈಸೂರು ಭಾಗದ ಜೆಡಿಎಸ್ ನಾಯಕರೊಂದಿಗೆ ಹೆಚ್.ಡಿ.ದೇವೇಗೌಡರ ಮಹತ್ವದ ಸಭೆ

ಚಾಮುಂಡೇಶ್ವರಿಯಲ್ಲಿ ಸಾ.ರಾ.ಮಹೇಶ್, ಚಾಮರಾಜದಲ್ಲಿ ನಿಖಿಲ್ ಕುಮಾರಸ್ವಾಮಿ ಕಣಕ್ಕಿಳಿಸಲು ರಣತಂತ್ರ

■ ಸಾ.ರಾ.ಮಹೇಶ್‌ಗೆ ಜೆಡಿಎಸ್ ಸಾರಥ್ಯ ಚಿಂತನೆ ■ ಹೆಚ್.ಡಿ.ಕೋಟೆಗೆ ಕೃಷ್ಣ ನಾಯಕ್, ಕೆ.ಆರ್.ನಗರಕ್ಕೆ ಪರ್ಯಾಯ ಅಭ್ಯರ್ಥಿ ಬಗ್ಗೆಯೂ ಚರ್ಚೆ

ಮೈಸೂರು, ಜ.18(ಬಿಎಲ್‌ಯು)– ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ವರ್ಷಗಳಿರುವಾಗಲೇ ಜೆಡಿಎಸ್ ಅಂಗಳದಲ್ಲಿ ಚಟುವಟಿಕೆ ಗರಿಗೆದರಿದ್ದು, ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಿಂದ ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಚಾಮರಾಜ ಕ್ಷೇತ್ರದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಲು ರಣತಂತ್ರ ಹೆಣೆಯಲಾಗುತ್ತಿದೆ.

ಬೆಂಗಳೂರು ಪದ್ಮನಾಭನಗರದ ನಿವಾಸದಲ್ಲಿ ಜೆಡಿಎಸ್ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮೈಸೂರು ಭಾಗದ ಜೆಡಿಎಸ್ ಶಾಸಕರು, ಮಾಜಿ ಶಾಸಕರು ಹಾಗೂ ಪ್ರಮುಖ ಮುಖಂಡರೊಂದಿಗೆ ಭಾನುವಾರ ಮಹತ್ವದ ಸಭೆ ನಡೆಸಿ, ಜಿಲ್ಲೆಯ ರಾಜಕೀಯ ವಿದ್ಯಮಾನ ಕುರಿತು ಚರ್ಚೆ ನಡೆಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜೆಡಿಎಸ್ ಹಿರಿಯ ನಾಯಕ ಜಿ.ಟಿ.ದೇವೇಗೌಡರು ಪಕ್ಷದ ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡಿರುವುದರಿಂದ ಜಿಲ್ಲೆಯಲ್ಲಿ ಪಕ್ಷ ಸಂಘಟನೆ, ಸ್ಥಳೀಯ ಸಂಸ್ಥೆ ಚುನಾವಣೆ, ವಿಧಾನಸಭಾ ಚುನಾವಣೆ ಸಿದ್ಧತೆ, ಪರ್ಯಾಯ ನಾಯಕತ್ವ ಸೇರಿದಂತೆ ಅನೇಕ ಮಹತ್ವದ ವಿಚಾರಗಳ ಬಗ್ಗೆ ಹೆಚ್.ಡಿ. ದೇವೇಗೌಡರು ಮುಖಂಡರ ■ 6ನೇ ಪುಟಕ್ಕೆ



ಬೆಂಗಳೂರಿನ ಪದ್ಮನಾಭನಗರದ ನಿವಾಸದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗಿರುವ ಮೈಸೂರು ಭಾಗದ ಜೆಡಿಎಸ್ ಮುಖಂಡರು.

ವರಿಷ್ಠರು ಸೂಚಿಸಿದರೆ ಚಾಮುಂಡೇಶ್ವರಿಯಿಂದ ಸ್ಪರ್ಧಿಸುವೆ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಬೇಕೆಂಬ ಇಚ್ಛೆ ನನಗಿಲ್ಲ. ಕೆ.ಆರ್.ನಗರದ ಜನತೆ ನನ್ನನ್ನು ಗೆಲ್ಲಿಸಿ, ಮಂತ್ರಿ ಮಾಡಿದ್ದಾರೆ. ಅಲ್ಲೇ ಸ್ಪರ್ಧೆ ಮಾಡಬೇಕೆನ್ನುವುದು ನನ್ನ ನಿರ್ಧಾರ. ಆದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವಂತೆ ಬಹಳಷ್ಟು ಕಾರ್ಯಕರ್ತರು ಹಾಗೂ ಮುಖಂಡರು ಒತ್ತಡ ತರುತ್ತಿದ್ದಾರೆ. ಒಂದು ವೇಳೆ ಚಾಮುಂಡೇಶ್ವರಿ ಕ್ಷೇತ್ರದಲ್ಲೆ ಸ್ಪರ್ಧೆ ಮಾಡುವಂತೆ ಹೈಕಮಾಂಡ್ ಸೂಚನೆ ನೀಡಿದರೆ ಅದನ್ನು ಪಾಲಿಸುತ್ತೇನೆ. ಜೆಡಿಎಸ್ ಯುವ ಘಟಕದ ಅಧ್ಯಕ್ಷರಾಗಿ ಪಕ್ಷ ಸಂಘಟಿಸುತ್ತಿರುವ ನಿಖಿಲ್ ಕುಮಾರಸ್ವಾಮಿ ಅವರನ್ನು ಚಾಮರಾಜ ಕ್ಷೇತ್ರದಿಂದ ಕಣಕ್ಕಿಳಿಸುವಂತೆ ಕಾರ್ಯಕರ್ತರಿಂದ ಒತ್ತಡ ಬಂದಿದೆ. ಈ ಬಗ್ಗೆಯೂ ವರಿಷ್ಠರು ನಿರ್ಧರಿಸಲಿದ್ದಾರೆ. -ಸಾ.ರಾ.ಮಹೇಶ್

ಮೈಸೂರು ಮಿತ್ರ

ಸೋಮವಾರ 19 ಜನವರಿ 2026

ಮುಡಾ ಮಾಜಿ ಅಧ್ಯಕ್ಷ ರಾಜೀವ್ ತನಿಖೆಗೆ ಸರ್ಕಾರ ಸಮ್ಮತಿ

ಕಾನೂನು ಇಲಾಖೆ ಪ್ರಸ್ತಾವನೆಗೆ ಸಚಿವ ಸಂಪುಟ ಅಸ್ತು

ಮೈಸೂರು, ಜ.18(ಬಿಎಲ್‌ಯು)– ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ಅಕ್ರಮಗಳ ಸಂಬಂಧ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತನಿಖೆ ನಡೆಸಲು ರಾಜ್ಯ ಸರ್ಕಾರ ಸಮ್ಮತಿ ಸೂಚಿಸಿದೆ.



ಹೆಚ್.ವಿ.ರಾಜೀವ್

ರಾಜೀವ್ ಅವರ ವಿರುದ್ಧ ತನಿಖೆ ಅಗತ್ಯವಿರುವ ಹಿನ್ನೆಲೆಯಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಮೈಸೂರು ಲೋಕಾಯುಕ್ತ ಪೊಲೀಸರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ರಾಜೀವ್ ಅವರ ತನಿಖೆ ನಡೆಸಲು ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ಸೂಚಿಸಿತ್ತು. ತರುವಾಯ ಕಾನೂನು ಇಲಾಖೆ ರಾಜ್ಯ ಸಚಿವ ಸಂಪುಟದ ಮುಂದೆ ಈ ವಿಚಾರವನ್ನು ಮಂಡಿಸಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯ ಸಚಿವ ಸಂಪುಟ ಸಭೆಯು ಹೆಚ್.ವಿ. ರಾಜೀವ್ ತನಿಖೆಗೆ ಅಸ್ತು ಎಂದಿದೆ. ಈ ಸಂಬಂಧ ಲೋಕಾಯುಕ್ತ ಪೊಲೀಸರು ರಾಜೀವ್ ಅವರನ್ನು ತನಿಖೆಗೊಳಪಡಿಸುವ ಸಾಧ್ಯತೆ ಇದೆ.

ಅದು ಪ್ರಾಧಿಕಾರ ಸಭೆಯ ತೀರ್ಮಾನವೇ ಹೊರತು, ನನ್ನ ವೈಯಕ್ತಿಕ ನಿರ್ಧಾರವಲ್ಲ

"ಪ್ರತಿಯೊಂದು ವಿಚಾರಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕೈಗೊಳ್ಳಲಾಗಿದೆಯೇ ಹೊರತು, ವೈಯಕ್ತಿಕವಾಗಿ ನಾನು ಯಾವುದೇ ನಿರ್ಧಾರ ಮಾಡಿಲ್ಲ. ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ರೆಕಾರ್ಡ್ ಆಗಿದೆ. ಪಾರದರ್ಶಕವಾಗಿದೆ. ಇದರಲ್ಲಿ ನಾನು ಯಾವುದೇ ಅಕ್ರಮ ಎಸಗಿಲ್ಲ. ನಾನು ಎಕ್ಸಿಕ್ಯೂಟಿವ್ ಪೋಸ್ಟ್‌ನಲ್ಲಿ ಇರಲಿಲ್ಲ. ನಾನು ಅಧ್ಯಕ್ಷನಾಗಿದ್ದೆ ಅಷ್ಟೆ. ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಎಕ್ಸಿಕ್ಯೂಟಿವ್ ಪೋಸ್ಟ್‌ನಲ್ಲಿ ಇದ್ದ ಅಧಿಕಾರಿಗಳು ಅನುಷ್ಠಾನ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಸಭೆಯ ತೀರ್ಮಾನಗಳನ್ನು ಅನುಷ್ಠಾನ ಮಾಡುವಾಗ ಅಧಿಕಾರಿಗಳು ಕಾನೂನಾತ್ಮಕ ಅಂಶಗಳನ್ನು ಗಮನಿಸಬೇಕಿತ್ತು. ಏನಾದರೂ ತಪ್ಪಾಗಿದ್ದರೆ ಅದಕ್ಕೆ ಅಧಿಕಾರಿಗಳು ಹೊಣೆಗಾರರಾಗುತ್ತಾರೆಯೇ ಹೊರತು ನಾನಲ್ಲ. ಈ ಕಾರಣದಿಂದ ತನಿಖೆಗೆ ಸರ್ಕಾರ ಅನುಮತಿ ನೀಡಿರುವುದು ಅಷ್ಟಾಗಿ ಮಹತ್ವದ ವಿಚಾರವಾಗುವುದಿಲ್ಲ. ಒಂದು ವೇಳೆ ನನ್ನನ್ನು ತನಿಖೆಗೊಳಪಡಿಸಿದರೆ ಇದೇ ಸ್ಪಷ್ಟನೆಯನ್ನು ನೀಡುತ್ತೇನೆ. –ಹೆಚ್.ವಿ.ರಾಜೀವ್

ಸರ್ಕಾರಿ ಶಾಲೆ ಮುಚ್ಚುವುದ ವಿರೋಧಿಸಿ ಇಮ್ಮಾವು ಗ್ರಾಮಸ್ಥರ ಪ್ರತಿಭಟನೆ



ಇಮ್ಮಾವು ಹುಂಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಸರ್ಕಾರ ಮುಚ್ಚುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು, ಪೋಷಕರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಜ.18(ಜಿಎ)–ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಇಮ್ಮಾವು ಹುಂಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಸರ್ಕಾರ ಮುಚ್ಚುತ್ತಿದೆ ಎಂದು ಆರೋಪಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಇಮ್ಮಾವು ಶಾಲೆ ಮುಂದೆ ಪ್ರತಿಭಟನೆ ನಡೆಸಿದರು

ಇಮ್ಮಾವು ಸರ್ಕಾರಿ ಶಾಲೆಯನ್ನು ಹೊರಳವಾಡಿ ಶಾಲೆಗೆ ವಿಲೀನಗೊಳಿಸಲಾಗುತ್ತಿದೆ. ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಪ್ರಾಥಮಿಕ ಶಿಕ್ಷಣವು ಒಂದು ಕಿಲೋ ಮೀಟರ್ ವ್ಯಾಪ್ತಿಯ ಒಳಗೆ ಇರಬೇಕು ಎಂಬುದು ನಿಯಮ. ಇದಕ್ಕೆ ವಿರುದ್ಧವಾಗಿ ಸರ್ಕಾರವು ಈ ಶಾಲೆಯನ್ನು ಮುಚ್ಚಿ ಹೊರಳವಾಡಿ ಶಾಲೆಗೆ ವಿಲೀನ ಮಾಡುತ್ತಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಇತ್ತೀಚಿಗೆ ಹೊರಡಿಸಲಾದ ಸರ್ಕಾರದ ಹೊಸ ಆದೇಶವು ಕೌಶಲ್ಯಾಧಾರಿತ ಶಿಕ್ಷಣವನ್ನು ನೀಡುವ ಮೂಲಕ ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ದೀಪ ಮತ್ತು ಹಣತೆ ಮಾಡಲು, ಅಡಿಕೆ ಕಾಯಿ ಬಿಡಿಸಲು, ಇತ್ಯಾದಿ ತರಬೇತಿ ನೀಡುತ್ತಾ ಸರ್ಕಾರಿ ಶಾಲೆ ಮಕ್ಕಳನ್ನು ಉನ್ನತ ಶಿಕ್ಷಣದಿಂದ ದೂರ ಉಳಿಯುವಂತೆ ಹಾಗೂ ಬಡ ಕುಟುಂಬದ ಮಕ್ಕಳನ್ನು ಬಾಲ ಕಾರ್ಮಿಕರಾಗಿಸುವ ಸಂಚನ್ನು ಕಾನೂನಾತ್ಮಕವಾಗಿಯೇ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಮೂಲಕ ಅನುಷ್ಠಾನಕ್ಕೆ ತರುತ್ತಿರುವುದು ವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮಸ್ಥರಾದ ಶಿವಣ್ಣ ಮಾತನಾಡಿ, ನಮ್ಮ ಊರಿನ ಸರ್ಕಾರಿ ಶಾಲೆ ಮುಚ್ಚಿದರೆ ನಾವು ಸತ್ತಂತೆ. ಒಂದು ವೇಳೆ ಸರ್ಕಾರಿ ಶಾಲೆ ಮುಚ್ಚಿದರೆ ಸರ್ಕಾರ ನಮ್ಮನ್ನು ಎದುರಿಸಬೇಕಾಗುತ್ತದೆ. ನಮ್ಮ ಊರಿನಲ್ಲಿ ಶೇ.99ರಷ್ಟು ದುಡಿಯುವ ಜನರು ಇದ್ದಾರೆ, ಸರ್ಕಾರಿ ಶಾಲೆ ಮುಚ್ಚಿದರೆ ನಮ್ಮ ಪರಿಸ್ಥಿತಿ ಏನು ಎಂದು ಆತಂಕ ವ್ಯಕ್ತಪಡಿಸಿದರು.

ಮತ್ತೊಬ್ಬ ಗ್ರಾಮಸ್ಥರಾದ ರಾಜಣ್ಣ ಮಾತನಾಡಿ, ಗ್ರಾಮದಲ್ಲಿರುವ ಸರ್ಕಾರಿ ಶಾಲೆಗಳನ್ನು ಮುಚ್ಚಿ ವಿಲೀನ ಮಾಡುವ ಕ್ರಮ ಸರಿಯಲ್ಲ. ಹಳ್ಳಿಯಲ್ಲಿರುವ ಶಾಲೆಗಳಿಗೆ ಮಕ್ಕಳು ನೇರವಾಗಿ ಹೋಗಿ ಮನೆಗೆ ಬರುತ್ತಾರೆ. ಈ ವ್ಯವಸ್ಥೆಯನ್ನು ಬದಲಾಯಿಸಿ ಕರ್ನಾಟಕ ಪಬ್ಲಿಕ್ ಶಾಲೆ ಹೆಸರಿನಲ್ಲಿ ಶಾಲೆಗಳನ್ನು ಮುಚ್ಚುವುದು ಖಂಡನೀಯ ಎಂದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದ್ರಿಕಾ, ದಿಶಾ, ನಂದೀಶ್, ಅಭಿಷೇಕ್, ದೀಕ್ಷಾ, ವಿಕಾಸ್, ಹೆಚ್.ಎಂ. ಬಸವರಾಜು ಹಾಗೂ ಗ್ರಾಮಸ್ಥರಾದ ಚಿನ್ನಯ್ಯ, ಮಹದೇವ, ಜಯಲಕ್ಷ್ಮಿ, ಸುಮಾ, ಮಂಜು, ಶ್ರೀನಿವಾಸ, ದೇವರಾಜ, ಮಹೇಂದ್ರ, ಸ್ವಾಮಿ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

ಸಬ್ಬನಹಳ್ಳಿ ಶಾಲೆಯಲ್ಲಿ ಸುಗ್ಗಿ ಹಬ್ಬ, ಮಕ್ಕಳ ಸಂತೆ

ಮೈಸೂರು, ಜ.18(ಜಿಎ)–ಶಾಲೆಗಳ ಭೇಟಿಯ ಅಭಿಯಾನದ ಅಂಗವಾಗಿ ವಿಧಾನಪರಿಷತ್ ಸದಸ್ಯರಾದ ಕೆ.ವಿವೇಕಾನಂದ ಅವರು ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಸಬ್ಬನಹಳ್ಳಿ ಗ್ರಾಮದ ಶಾಲೆಯ ಸುಗ್ಗಿ ಹಬ್ಬ ಮತ್ತು ಮಕ್ಕಳ ಸಂತೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತೀಯ ಪರಂಪರೆ ಮತ್ತು ಸಂಸ್ಕೃತಿ ಬಿಂಬಿಸುವಂತೆ ಸುಗ್ಗಿ ಹಬ್ಬ ಮತ್ತು ಮಕ್ಕಳ ಸಂತೆ ಏರ್ಪಡಿಸಲಾಗಿರುವುದು ನನಗೆ ನನ್ನ ಬಾಲ್ಯದ ಜೀವನ ನೆನಪಿಗೆ ಬರುತ್ತದೆ. ಈ ರೀತಿಯ ಸಂಸ್ಕೃತಿಯನ್ನು ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ರೂಡಿಸಿಕೊಂಡು ಈ ದೇಶದ ಸತ್ಪ್ರಜೆಯಾಗಿ ಬಾಳಿ ಎಂದು ಅಲ್ಲಿಯ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕ ವರ್ಗಕ್ಕೆ ಶುಭ ಕೋರಿದರು.




ಸಬ್ಬನಹಳ್ಳಿ ಶಾಲೆಯ ಸುಗ್ಗಿ ಹಬ್ಬ, ಮಕ್ಕಳ ಸಂತೆಯಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಭಾಗವಹಿಸಿ ಮಕ್ಕಳಿಗೆ ಶುಭ ಕೋರಿದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಜಯಂತ್ಯುತ್ಸವ



ಪ್ರತಾಪ್ ಸಿಂಹ ಅಭಿಮಾನಿ ಬಳಗದ ವತಿಯಿಂದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 83ನೇ ಜಯಂತ್ಯುತ್ಸವವನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 23ರ ರಮಾವಿಲಾಸ ರಸ್ತೆಯಲ್ಲಿ ಆಚರಿಸಿ, ಸಾರ್ವಜನಿಕರಿಗೆ ಸಿಹಿ ಮತ್ತು ಮಜ್ಜಿಗೆ ವಿತರಿಸಲಾಯಿತು. ಉದ್ಯಮಿ ಹಾಗೂ ಮೈಗ್ರಾಪ ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್, ಮುಖಂಡರಾದ ನಾಗರಾಜ್, ಶಿವಣ್ಣ, ಮಹೇಶ್, ಉಮೇಶ್, ಒಕ್ಕಲಿಗರ ಸಂಘದ ಗಿರೀಶ್ ಗೌಡ, ನಿರ್ದೇಶಕರಾದ ಚೇತನ್‌ಗೌಡ, ಎಂ.ಎನ್.ರಾಜು, ಕಾರ್ಯಕ್ರಮದ ಆಯೋಜಕರಾದ ಆರ್.ಪರಮೇಶ್ ಗೌಡ, ಸಂದೇಶ್, ಉಮೇಶ್, ಬೆಳಕು ಮಂಜು, ನಜರ್‌ಬಾದ್ ಅಭಿ, ಕಿರಣ್, ಚಂದನ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ಹೆಬ್ಬಾಳದ ಅಂಬರೀಶ್ ರಸ್ತೆಯ ಡಿ.ಮಾದೇಗೌಡ ವೃತ್ತದಲ್ಲಿ ರವಿ ಸ್ನೇಹ ಬಳಗ ಸೇವಾ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಬಸ್ ಪ್ರಯಾಣಿಕರ ತಂಗುದಾಣವನ್ನು ಭಾನುವಾರ ಸಚಿವ ಚಲುವರಾಯಸ್ವಾಮಿ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಟ್ರಸ್ಟ್ ಅಧ್ಯಕ್ಷೆ ದಿವ್ಯ, ಮುಖಂಡ ಆರ್.ರವಿ (ಡೆಲ್ಲಿ), ಕಾಂಗ್ರೆಸ್ ಮುಖಂಡ ರವಿ ಮಂಚೇಗೌಡನಕೊಪ್ಪಲು ಮತ್ತಿತರರು ಹಾಜರಿದ್ದರು.

ಜ.22ಕ್ಕೆ ಎಂಜಿಪಿಯಲ್ಲಿ ಸೈಬರ್ ಅಪರಾಧ ಕುರಿತ ಸಾರ್ವಜನಿಕ ಸಭೆ

ಮೈಸೂರು, ಜ.18– ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ವತಿಯಿಂದ ಸೈಬರ್ ಅಪರಾಧ ಕುರಿತ ವಿಶೇಷ ಸಾರ್ವಜನಿಕ ಸಭೆಯನ್ನು ಜ.22ರಂದು ಸಂಜೆ 4ಕ್ಕೆ ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಎಂಜಿಪಿ ಕಚೇರಿಯಲ್ಲಿ ಆಯೋಜಿಸಲಾಗಿದೆ.

ಸೈಬರ್ ಅಪರಾಧ ವಿಭಾಗದ ಎಸಿಪಿ ಮನೋಜ್ ಕುಮಾರ್ ಹಾಗೂ ಇನ್ಸ್‌ಪೆಕ್ಟರ್ ನಂದೀಶ್ ಕುಮಾರ್, ಮೈಸೂರಿನಿಂದ ವರದಿಯಾಗಿರುವ ಸೈಬರ್ ವಂಚನೆ ಪ್ರಕರಣಗಳ ಬಗ್ಗೆ ತಿಳಿಸುವುದರ ಜೊತೆಗೆ ಅಧಿಕಾರಿಗಳ ಸೋಗಿನಲ್ಲಿ ಬೆದರಿಸಿದರೆ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದರ ಬಗ್ಗೆ ಸಲಹೆ ನೀಡಲಿದ್ದಾರೆ.

ಎರಡು ವರ್ಷಗಳ ನಂತರ ಸೈಬರ್ ಅಪರಾಧ ಸಂಬಂಧ ಸಭೆ ಆಯೋಜಿಸಲಾಗಿದ್ದು, ಪ್ರಶ್ನೆಗಳನ್ನು ಕೇಳಲು ಇಚ್ಛಿಸುವವರು mygrapa@gmail.comಗೆ ಅಂದು ಬೆಳಗ್ಗೆ 11 ಗಂಟೆಯೊಳಗೆ ಕಳುಹಿಸಿಕೊಟ್ಟರೆ ಗದ್ದಲವಿಲ್ಲದೆ ಸಭೆ ನಡೆಸಲು ಅನುವಾಗುತ್ತದೆ. ಹೆಚ್ಚಿನ ಮಾಹಿತಿಗೆ 821–2515150ಗೆ ಕರೆ ಮಾಡಬಹುದು ಎಂದು ಎಂಜಿಪಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹುಟ್ಟುಹಬ್ಬದ ಶುಭಾಶಯ...



ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಚಿತ್ರ ನಿರ್ಮಾಪಕ ಹಾಗೂ ಖ್ಯಾತ ಉದ್ಯಮಿ ಎನ್.ಸಂದೇಶ್, ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್‌ಪಿಯಾ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಶಿಕ್ಷಕ ಮಾಲಂಗಿ ಸುರೇಶ್ ಮತ್ತಿತರರಿದ್ದರು.

'ಸಂಕ್ರಾಂತಿ' ಖಗೋಳಶಾಸ್ತ್ರದ ಅದ್ಭುತ



ಮೈಸೂರಿನ ಹಿಂದೂಸ್ಥಾನ ಕಾಲೇಜಿನಲ್ಲಿ 'ಸಂಕ್ರಾಂತಿ ಉತ್ಸವ' ಆಯೋಜಿಸಲಾಗಿತ್ತು.

ಮೈಸೂರು, ಜ.18– ಸಂಕ್ರಾಂತಿ ಕೇವಲ ಎಳ್ಳು-ಬೆಲ್ಲ ಹಂಚುವ ಹಬ್ಬವಲ್ಲ, ಇದು ಖಗೋಳಶಾಸ್ತ್ರದ ಅದ್ಭುತ ಸಂಗಮ ಎಂದು ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಹೇಳಿದರು.

ಮೈಸೂರಿನ ಜೆ.ಪಿ.ನಗರದ ಹಿಂದೂಸ್ಥಾನ ಕಾಲೇಜಿನಲ್ಲಿ ನಡೆದ 'ಸಂಕ್ರಾಂತಿ ಉತ್ಸವ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಕ್ರಾಂತಿ ಹಬ್ಬದ ಮಹತ್ವ, ಬೇರೆ ಬೇರೆ ಪ್ರದೇಶಗಳಲ್ಲಿ ಹಬ್ಬವು ಪಡೆದುಕೊಂಡಿರುವ ರೂಪ, ಸಾಂಸ್ಕೃತಿಕ ಅಸ್ಮಿತೆ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಕ್ರಾಂತಿ ಕೇವಲ ಎಳ್ಳು-ಬೆಲ್ಲ ಹಂಚುವ ಹಬ್ಬವಲ್ಲ, ಇದು ಭಾರತೀಯ ವಿಜ್ಞಾನದ ದರ್ಶನ. ಖಗೋಳಶಾಸ್ತ್ರದ ಅದ್ಭುತ ಸಂಗಮ ಹಾಗೂ ಬ್ರಹ್ಮಾಂಡದ ವಿಸ್ಮಯ. ಉತ್ತರಾಯಣ ಪುಣ್ಯಕಾಲವು ಭೀಷ್ಮರು ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ತೆರಳಿದ ಕಾಲ, ಶಬರಿಮಲೆಯ ಮಕರಜ್ಯೋತಿ ಬೆಳಗುವ ಸುಸಂದರ್ಭ ಎಂಬ ನಂಬಿಕೆ ಇದೆ ಎಂದರು.

ಇದೇ ವೇಳೆ ವಿದ್ಯಾರ್ಥಿಗಳು ವಿಶೇಷ ನೃತ್ಯ ರೂಪಕ ಪ್ರದರ್ಶಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಜೆ.ಪ್ರಿಯ, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಿಧನ

ಹಿರಿಯ ವಕೀಲೆ ಮಧುಬಾಲಾ ಮೆಹತಾ



ಮೈಸೂರು, ಜ.18– ಹಿರಿಯ ವಕೀಲರು ಹಾಗೂ ಮೈಸೂರು ವಿವಿಪುರಂ ನಿವಾಸಿ ಮಧುಬಾಲಾ ಆರ್.ಮೆಹತಾ ಅವರು ನಿನ್ನೆ ಬೆಂಗಳೂರಲ್ಲಿ ನಿಧನರಾದರು. ಮೃತರು ಪುತ್ರ, ಸೊಸೆ, ಮೊಮ್ಮಗ, ಇಬ್ಬರು ಸಹೋದರರು, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಬೆಳಗ್ಗೆ ಬೆಂಗಳೂರಲ್ಲಿ ನೆರವೇರಿದ್ದು, ನಾಳೆ (ಸೋಮವಾರ) ಸಂಜೆ 4.30ಕ್ಕೆ ಮೈಸೂರು ಯಾದವಗಿರಿಯ ಶ್ರೀ ಮೈಸೂರು ಗುಜರಾತಿ ಸಮಾಜ ಭವನದಲ್ಲಿ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಸಂತ



ಮೈಸೂರಿನ ಕೇರ್ಗಳ್ಳಿಯ ನಿವಾಸಿ ಆಟೋ ಚಾಲಕ ಎಂ.ಪುಟ್ಟರಾಜು ಅವರ ಧರ್ಮಪತ್ನಿ ಶ್ರೀಮತಿ ಸಿ.ವಸಂತ(49) ನಗರದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. ದಿವಂಗತರ ಪತಿ ಪುಟ್ಟರಾಜು, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಶನಿವಾರ ಸಂಜೆ ಕೇರ್ಗಳ್ಳಿಯ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.1.2026 ಸೋಮವಾರ, ಮಳೆ ನಕ್ಷತ್ರ: ಉಷಾ, 11.01.2026ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಸಕ್ಷಮ–ಮೈಸೂರು (ವಿಶೇಷ ಚೇತನರ ಸಮರ್ಪಿತ ಸಂಘಟನೆ, ಮೈಸೂರು ಘಟಕ), ಆರೋಗ್ಯ ಭಾರತ, ಮೈಸೂರು:** 'ಪ್ರತಿಭೆ ನಿಮ್ಮದು ವೇದಿಕೆ ನಮ್ಮದು'–ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾ ಚಟುವಟಿಕೆ ಹಾಗೂ ಆರೋಗ್ಯ ತಪಾಸಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಜೀವಧಾರ ರಕ್ತ ನಿಧಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಎಸ್. ಗಿರೀಶ್, ಸ್ಥಳ: ವಿವೇಕ ಫಾರಂ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಎದುರು, ಇಲವಾಲ, ಬೆಳಗ್ಗೆ 10ಕ್ಕೆ.
- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಸಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ ರೆಟಿನೈಟಿಸ್ ಪಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು:** ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಸಮಾವೇಶ, ದಿವ್ಯ ಆಶೀರ್ವಾದ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಅಧ್ಯಕ್ಷತೆ: ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಲ್.ರೇವಣ್ಣಸಿದ್ದಯ್ಯ, ಮುಖ್ಯ ಅತಿಥಿಗಳು: ಮೈಸೂರು ವಿವಿ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಸನ್ಮಾನಿತರು: ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಎಡಿಸಿ ಡಾ.ಪಿ.ಶಿವರಾಜು, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಎಂ. ಪರಮಶಿವಯ್ಯ, ಜೆಎಸ್‌ಎಸ್ ಆಸ್ಪತ್ರೆಯ ಶ್ವಾಸಕೋಶ ತಜ್ಞರಾದ ಡಾ. ಬಿ.ಎಸ್.ಜಯರಾಜ್, ಸ್ಥಳ: ಅಲ್ಲಮಪ್ರಭು ಸಭಾಂಗಣ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಶಿಕ್ಷಣ ಸಮುಚ್ಚಯ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆ 11ಕ್ಕೆ
- **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಾಮೂಹಿಕ ಶ್ರೀ ಸತ್ಯನಾರಾಯಣಸ್ವಾಮಿ ಪೂಜಾ ಸಮಿತಿ, ಸ್ವ–ಸಹಾಯ ಸಂಘಗಳ ಒಕ್ಕೂಟ:** ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮತ್ತು ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ಸಾಮೂಹಿಕ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮ, ಉದ್ಘಾಟನೆ: ಮಾಜಿ ಸಚಿವ ತನ್ವೀರ್ ಸೇಠ್, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ, ಮಾಶಾಸನ ಮಂಜೂರಾತಿ: ಶಾಸಕ ಕೆ. ಹರೀಶ್‌ಗೌಡ, ಧಾರ್ಮಿಕ ಉಪನ್ಯಾಸ: ಮೈಸೂರು ವಿವಿ ಅತಿಥಿ ಉಪನ್ಯಾಸಕ ಡಾ. ಸುರೇಶ್ ಹೆಗ್ಗಡೆ, ಸ್ಥಳ: ರಾಜಗೋಪಾಲ್ ರಾವ್ ರಾಶಿಂಕರ್ ಕಲ್ಯಾಣ ಮಂಟಪ, ಹಳೇ ಹಾಲಿನ ಡೇರಿ ಹತ್ತಿರ, ನಜರ್‌ಬಾದ್, ಬೆಳಗ್ಗೆ 11 ಗಂಟೆಗೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ಸಂಜೆ 6 ಗಂಟೆಗೆ ಸಂಗೀತ ಕಲಾನಿಧಿ, ಸಂಗೀತರತ್ನ ಪಿಟೀಲು ಮೈಸೂರು ಟಿ. ಚೌಡಯ್ಯ ಸಂಸ್ಮರಣದ ಅಂಗವಾಗಿ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿ ಪ್ರದಾನ ಸಮಾರಂಭ, ಡಾ. ಮೈಸೂರು ಎಂ. ಮಂಜುನಾಥ್ ಅವರಿಗೆ, ದಿವ್ಯ ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಪೀಠಾಧಿಪತಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಸಂಜೆ 6.30ಕ್ಕೆ ಕರ್ನಾಟಕ ಶಾಸ್ತ್ರೀಯ ದ್ವಂದ್ವ ಪಿಟೀಲು ವಾದನ: ಡಾ. ಮೈಸೂರು ಎಂ. ಮಂಜುನಾಥ್ ಮತ್ತು ವಿದ್ವಾನ್ ಸುಮಂತ್ ಮಂಜುನಾಥ್ ಅವರಿಂದ, ಮೃದಂಗ: ವಿದ್ವಾನ್ ಕೆ.ಯು. ಜಯಚಂದ್ರರಾವ್, ಖಂಜಿರ: ವಿದ್ವಾನ್ ಜಿ. ಗುರುಪ್ರಸನ್ನ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಚಾರ್ಯ ಭವನ, ತುಳಸಿದಾಸ್ ಆಸ್ಪತ್ರೆ ಎದುರು, ಜೆಎಲ್‌ಬಿ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೆ.ರವೀಂದ್ರನಾಥ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಗೀತಾ.ವೈ.ಪುಟ್ಟಿ, ಎಂ.ಆರ್.ಸುಧಾ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ಇಂದಿರಾ ಜಗದೀಶ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ನೆನಪಿನಂಗಳ (ಧ್ವನಿ ಭಂಡಾರದಿಂದ) ರಾಷ್ಟ್ರಕವಿ ಕುವೆಂಪು ಅವರಿಗೆ ಪ್ರಥಮ ಪಂಪ ಪ್ರಶಸ್ತಿ ಪ್ರದಾನ ಮಾಡಿದ ಸಮಾರಂಭದ ಆಯ್ದ ಅವತರಣಿಕೆಗಳು. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಮೈಸೂರು.ಎಸ್.ರಾಜಲಕ್ಷ್ಮಿ–ವೀಣಾವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ : ಪಿ.ಸುರಭಿ, 12.45 ನಮ್ಮ ಆರೋಗ್ಯ ಮಹಿಳೆಯರಲ್ಲಿ ಹೃದಯ ಸಂಬಂಧಿ ಸಮಸ್ಯೆಗಳು ಹಾಗೂ ಪರಿಹಾರ ಈ ಕುರಿತು ಮಾತನಾಡುತ್ತಾರೆ ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹೃದ್ರೋಗ ತಜ್ಞರಾದ ಡಾ.ವೀಣಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಕುರಿತು ಮಾಹಿತಿ. 1.20–ಭಾವಗೀತೆಗಳು–ಕೃಪಾ ನಾಡಿಗ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಮೋಹನ್ ಕ್ಲ್ಯಾರಿಯೋನೆಟ್ ವಾದನ, 4.00 ಮಹಿಳಾರಂಗ–ನನ್ನ ಹಕ್ಕು–ನನ್ನ ಜವಾಬ್ದಾರಿ –ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ –ಮೈಸೂರಿನ ವಕೀಲರಾದ ಎಸ್.ಜೆ.ಮಧ್ವರಾಜ್, ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಡಾ.ಎಸ್.ವಿ.ವಿದ್ಯಾಕುಮಾರ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮಣ್ಣು ಪರೀಕ್ಷೆ ಹಾಗೂ ಮಣ್ಣಿನ ಆರೋಗ್ಯ ಕುರಿತು ಮಂಡ್ಯ ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಹೆಚ್.ಆರ್.ಸವಿತಾ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ: ಭೌತಶಾಸ್ತ್ರ, ಭಾಗವಹಿಸುತ್ತಾರೆ –ಮೈಸೂರಿನ ಚಿನ್ಮಯ ಪದವಿ ಪೂರ್ವ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕರಾದ ಶರತ್ ಕುಮಾರ್. ಎಂ.ಎನ್., ಪ್ರಸ್ತುತಿ –ದಿಗ್ವಿಜಯ್.ಬಿ, 9.30–ಸವಿನೆನಪು, 10.00–ಆಕಾಶವಾಣಿ ಸಂಗೀತ ಸಮ್ಮೇಳನ –2025, ಪಂಡಿತ್ ಭೀಮಣ್ಣ ಜಾಧವ್ ಹಾಗೂ ಸಂಗಡಿಗರಿಂದ ಸುಂದರಿ ವಾದನ

ಸುತ್ತೂರು ಜಾತ್ರಾ ಮಹೋತ್ಸವ

- **ಕರ್ತೃ ಗದ್ದುಗೆ:** ಮುಂಜಾನೆ 4 ಗಂಟೆಗೆ ಮಹಾ ರುದ್ರಾಭಿಷೇಕ, ಫಲಾಲಂಕಾರ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಬೆಳಗ್ಗೆ 6.15ಕ್ಕೆ ರಾಜಗುರು ತಿಲಕ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 39ನೇ ಸಂಸ್ಮರಣೋತ್ಸವ, ಬೆಳಗ್ಗೆ 6.30ಕ್ಕೆ ಹೊಸಕೋಟೆ–ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ, ಬೆಳಗ್ಗೆ 7.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ: ಶ್ರೀ ಬಿಲ್ವಪತ್ರ ಗವಿಮಠ (ಕನಕಪುರ ತಾಲೂಕು) ಕಿರಿಯ ಶ್ರೀ ಶ್ರೀ ಸದಾಶಿವಸ್ವಾಮಿ ಅವರಿಂದ, ಧರ್ಮ ಸಂದೇಶ: ಶ್ರೀ ನಿರಂಜನ ಶಿವಚಾರ್ಯಸ್ವಾಮಿ (ಶ್ರೀ ಬೃಹನ್ಮಠ, ಗುರುವಿನಪುರ, ಕನಕಪುರ ತಾಲೂಕು), ಬೆಳಗ್ಗೆ 9.30ಕೆ ಶ್ರೀ ಸೋಮೇಶ್ವರ ಮತ್ತು ಶ್ರೀ ಅಮೃತೇಶ್ವರಿ ಅಮ್ಮನವರಿಗೆ ರುದ್ರಾಭಿಷೇಕ (ಕಪಿಲಾ ನದಿ ತೀರ)
- **ಭಜನಾ ಮೇಳ: ಸಮಾರೋಪ:** ಬೆಳಗ್ಗೆ 10ರಿಂದ ದಿವ್ಯ ಸಮ್ಮುಖ: ಅಖಿಲ ಭಾರತ ವೀರಶೈವ ಶಿವಚಾರ್ಯ ಸಂಸ್ಥೆಯ ಅಧ್ಯಕ್ಷ ಡಾ.ಶ್ರೀ ಪ್ರಭು ಸಾರಂಗದೇವ ಶಿವಚಾರ್ಯಸ್ವಾಮಿ, ಹೂವಿನ ಹಡಗಲಿ ಶ್ರೀ ಗವಿಸಿದ್ದೇಶ್ವರ ಶಾಖಾ ಮಠದ ಡಾ. ಶ್ರೀ ಹಿರಿಶಾಂತವೀರ ಸ್ವಾಮಿಗಳು, ಅಧ್ಯಕ್ಷತೆ: ವೈದ್ಯಕೀಯ ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ್, ಸಮಾರೋಪ ಭಾಷಣ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ.
- **ಕುಸ್ತಿ ಪಂದ್ಯಾವಳಿ:** ಮಧ್ಯಾಹ್ನ 2ಕ್ಕೆ ದಿವ್ಯ ಸಮ್ಮುಖ: ಶ್ರೀ ಗುರು ಕಂಬಳೀಶ್ವರ ಮಠ, ಮಲ್ಲನಮೂಲೆ ಸುಕ್ಷೇತ್ರದ ಶ್ರೀ ಇಮ್ಮಡಿ ಸಿದ್ದಲಿಂಗಸ್ವಾಮಿ, ಹೊಸಮಠದ ಶ್ರೀ ಚಿದಾನಂದಸ್ವಾಮಿಗಳು, ಅಧ್ಯಕ್ಷತೆ: ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಉದ್ಘಾಟನೆ: ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸ್‌ರಾಜ್,
- **ಕೃಷಿ ಮೇಳ ಮತ್ತು ದನ ಜಾತ್ರೆ: ಸಮಾರೋಪ:** ಸಂಜೆ 5ಕ್ಕೆ ದಿವ್ಯ ಸಮ್ಮುಖ: ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ತಮಿಳುನಾಡಿನ ಬರಗೂರು ಶ್ರೀ ದ್ರೋಣಗಿರಿ ಮಠದ ಶ್ರೀ ಅಶೋಕ ರಾಜೇಂದ್ರ ಸ್ವಾಮಿಗಳು, ಅಧ್ಯಕ್ಷತೆ: ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ, ಸಮಾರೋಪ ಭಾಷಣ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್.
- **ಗದ್ದುಗೆ ಆವರಣ:** ಬೆಳಗ್ಗೆ 7ರಿಂದ ಸುಗಮ ಸಂಗೀತ, ಭಕ್ತಿಗೀತೆ, ಭಾವಗೀತೆ, ಭರತನಾಟ್ಯ, ವಚನ ಗಾಯನ, ಭಕ್ತಿ ಗಾಯನ, ನಾಟಕ, ಯೋಗ ನೃತ್ಯ, ಜಾನಪದವೇ ಸತ್ಯ, ಜಾನಪದವೇ ನಿತ್ಯ, ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು.

ಮಾನವ ಧರ್ಮವೇ ಮೇಲು; ಮನುಷ್ಯರಾಗಿ ಹುಟ್ಟಿದ್ದೇವೆ, ಮನುಷ್ಯರಾಗಿಯೇ ಸಾಯಬೇಕಿದೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಜನತೆಗೆ ಕಿವಿಮಾತು ● ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗಿ ● ಒಂದಾಗಿ ಬಾಳುವುದೇ ನಾವು ಸಮಾಜಕ್ಕೆ ನೀಡುವ ಕೊಡುಗೆ

ನಂಜನಗೂಡು, ಜ.18(ರಂಗಸ್ವಾಮಿ)– ಮಾನವ ಧರ್ಮವೇ ಶ್ರೇಷ್ಠ, ನಾವೆಲ್ಲರೂ ಪರಸ್ಪರ ಪ್ರೀತಿಸಬೇಕೇ ಹೊರತು ದ್ವೇಷಿಸುವ ಕೆಲಸವನ್ನು ಮಾಡಬಾರದು. ಇದೇ ನಾವು ಸಮಾಜಕ್ಕೆ ಕೊಡುವ ಕೊಡುಗೆ ಎಂದು ಅರ್ಥ ಮಾಡಿಕೊಂಡಲ್ಲಿ ನಾವೆಲ್ಲರೂ ಮನುಷ್ಯರಾಗಿ ಬಾಳಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ, ದಯೆ ಇಲ್ಲದ ಧರ್ಮ ಯಾವುದಯ್ಯ ಎಂದು ಹೇಳಿದ್ದಾರೆ. ಬಸವಣ್ಣನವರ ವಿಚಾರಧಾರೆಗಳಲ್ಲಿ ನಂಬಿಕೆ ಇಟ್ಟಿರುವ ಎಲ್ಲರೂ ಅವರ ಧರ್ಮದ ವ್ಯಾಖ್ಯಾನವನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಧರ್ಮಗಳಿಗಿಂತ ಮಾನವ ಧರ್ಮ ಮೇಲು, ದೇಶದಲ್ಲಿ ಅನೇಕ ಜಾತಿ ಧರ್ಮ ಪಂಥಗಳಿವೆ. ಎಲ್ಲರೂ ಮೂಲತಃ ಮನುಷ್ಯರಾಗಿ ಹುಟ್ಟಿರುತ್ತೇವೆ, ಮನುಷ್ಯರಾಗಿಯೇ ಸಾಯಬೇಕಾಗಿರುವುದು ಅನಿವಾರ್ಯ. ಎಲ್ಲಾ ಧರ್ಮದ ಸಾರವೂ ಪರಸ್ಪರ ಪ್ರೀತಿಸಿ ಎಂದು ಹೇಳುತ್ತದೆಯೇ ಹೊರತು, ಪರಸ್ಪರ ದ್ವೇಷಿಸಿ ಎಂದು ಹೇಳುವುದಿಲ್ಲ ಆದ್ದರಿಂದ ನಾವೆಲ್ಲರೂ ಪರಸ್ಪರ ಪ್ರೀತಿಸಿ ನಡೆದರೆ ಅದೇ ನಾವು ಸಮಾಜಕ್ಕೆ ಕೊಡುವ ದೊಡ್ಡ ಕೊಡುಗೆ. ಇದನ್ನು ಅರ್ಥೈಸಿಕೊಂಡಲ್ಲಿ ನಾವೆಲ್ಲರೂ ಮನುಷ್ಯರಾಗಿ ಬಾಳಲು ಸಾಧ್ಯ ಎಂದರು.



ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಶಿಕ್ಷಣದಿಂದ ಮಾತ್ರ ಸ್ವಾಭಿಮಾನದ ವ್ಯಕ್ತಿತ್ವ: ಯಾವುದೇ ವ್ಯಕ್ತಿಗೆ ಶಿಕ್ಷಣವೇ ಬಹಳ ಮುಖ್ಯ, ಶಿಕ್ಷಣದಿಂದ ಮಾತ್ರ ಸ್ವಾಭಿಮಾನ, ಜ್ಞಾನ ಸಾಧ್ಯ ಜೊತೆಗೆ ನಮ್ಮ ವ್ಯಕ್ತಿತ್ವವನ್ನು, ಮನುಷ್ಯತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಶಿಕ್ಷಣವಿಲ್ಲದಿದ್ದಲ್ಲಿ ಬಹಳ ಕಷ್ಟ, ದೇಶದಲ್ಲಿ ಶೇ 85ಕ್ಕಿಂತ ಹೆಚ್ಚು ಜನರು ಶಿಕ್ಷಣ, ಸಂಸ್ಕೃತಿಯಿಂದ ವಂಚಿತರಾಗಿದ್ದರು. ಅದನ್ನು ಮನಗಂಡ ಸುತ್ತೂರು ಮಠ ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತೆರೆದು ಶಿಕ್ಷಣವನ್ನು ಕೊಡುವ ಕೆಲಸವನ್ನು ಮಾಡುತ್ತಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾತನಾಡಿ ಭಾರತ ದೇಶದ ಪುಣ್ಯ ನೆಲದಲ್ಲಿ ಹುಟ್ಟಿರುವ ನಾವೆಲ್ಲರೂ ಧನ್ಯ, ಸುತ್ತೂರು ಮಠವು ಸಾವಿರಾರು ವರ್ಷಗಳಿಂದ ಸರ್ಕಾರದ ಯಾವುದೇ ಸವಲತ್ತುಗಳಿಲ್ಲದೆ ಸಾಮಾಜಿಕ ಕಾಳಜಿ, ಬದ್ಧತೆಯನ್ನು ಇಟ್ಟುಕೊಂಡು ಸಮಾಜದಲ್ಲಿನ ಹಿಂದುಳಿದವರ ಶಿಕ್ಷಣಕ್ಕೆ ಆದ್ಯತೆ ನೀಡಿ ಅನ್ನ, ಅಕ್ಷರ ದಾಸೋಹ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಅನ್ನಭಾಗ್ಯಕ್ಕೆ ಮಠ–ಮಾನ್ಯಗಳೇ ಪ್ರೇರಣೆ: ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುವ ಬಹಳಷ್ಟು ಜನರನ್ನು ಕಂಡಿದ್ದೇವೆ. ಸುತ್ತೂರು ಮಠ ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಸಲುವಾಗಿ ಜಾತ್ರಾ ಮಹೋತ್ಸವದ ಸಂಪ್ರದಾಯಕ್ಕೆ ನಾಂದಿ ಹಾಡಿದೆ. ಶ್ರೀಗಳ ಆಶೀರ್ವಾದ 'ದಿಂದ, ಕರ್ನಾಟಕ ರಾಜ್ಯ ಸಮೃದ್ಧಿಯತ್ತ ದಾಪುಗಾಲಿಡುತ್ತಿದೆ. ಈಗ ಎಲ್ಲಾ ವಲಯದಲ್ಲಿ ಮಹಿಳೆ ಮುಂಚೂಣಿಯಲ್ಲಿದ್ದಾರೆ. ಗ್ರಾಮೀಣ ಭಾಗದ ಶೇ.80ರಷ್ಟು ಮಹಿಳೆಯರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೊಲ, ಮನೆ, ಗದ್ದೆಯನ್ನು ಅವಳ ಹೆಸರಿಗೆ ಮಾಡದೇ ಇದ್ದರೂ ಭೂಮಿ ತಾಯಿ ನನ್ನದು ಎಂಬ ಅಭಿಮಾನದಿಂದ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ಜಾರಿಗೊಳಿಸಿದ ಅನ್ನಭಾಗ್ಯ ಯೋಜನೆಗೆ ಮಠಮಾನ್ಯಗಳೇ ಪ್ರೇರಣೆ ಎಂದರು.

ಸಿಎಂಗೆ ರೈತರ ಬಗ್ಗೆ ಕಾಳಜಿ: ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ ಸುಧಾಕರ್ ಮಾತನಾಡಿ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಲ್ಲಿ ದೇಶದ ಸಂಸ್ಕೃತಿ, ಸಾಮಾಜಿಕ ಕಳಕಳಿಯಿಂದ ಯುವ ಪೀಳಿಗೆ ದೂರ ಸರಿಯುತ್ತಿದೆ. ಆದರೆ, ದೇಶದ ಸಂಸ್ಕೃತಿ, ಪರಂಪರೆ ಆಧ್ಯಾತ್ಮಿಕತೆಯನ್ನು ಉಳಿಸುವ ಕೆಲಸವನ್ನು ಮಠಮಾನ್ಯಗಳು ನಿರ್ವಹಿಸುತ್ತಿವೆ. ಆದ್ದರಿಂದಲೇ ಗ್ರಾಮೀಣ ಭಾಗದಲ್ಲಿ ಸಂಸ್ಕೃತಿ ಸಂಸ್ಕಾರ ಇನ್ನೂ ಜೀವಂತವಾಗಿವೆ. ರೈತಾಪಿ ಕುಟುಂಬ ವರ್ಗದಿಂದ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಏಳಿಗೆಯ ಹಿತದೃಷ್ಟಿಯಿಂದಾಗಿ ಈ ಭಾಗದಲ್ಲಿ ವರುಣ ನಾಲೆಯನ್ನು ನಿರ್ಮಿಸಿದ್ದಾರೆ ಎಂದು ಹೇಳಿದರು.

ರಾಜ್ಯ ಪ್ರಗತಿ ಪಥದತ್ತ: ವೈದ್ಯಕೀಯ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣಪ್ರಕಾಶ್ ಆರ್ ಪಾಟೀಲ್ ಮಾತನಾಡಿ ರಾಜ್ಯದಲ್ಲಿ ಮಠಮಾನ್ಯಗಳು ಬಸವಾದಿ ಶರಣರ ತತ್ವದಂತೆ ಜನರಲ್ಲಿ ಧಾರ್ಮಿಕ ಭಕ್ತಿ–ಭಾವವನ್ನು ಬಿತ್ತುವ ಮೂಲಕ ವೈಚಾರಿಕ ಕ್ರಾಂತಿಯನ್ನು ಮಾಡುತ್ತಿವೆ. ಭಾರತದಾದ್ಯಂತ ಕೃಷಿ ಪ್ರಧಾನ ದೇಶದಲ್ಲಿ ರೈತರ ಸುಧಾರಣೆಯಾದಲ್ಲಿ ಮಾತ್ರ ದೇಶದ ಸುಧಾರಣೆ ಸಾಧ್ಯ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳು ಕೃಷಿ ಕ್ಷೇತ್ರಕ್ಕೆ ಹೆಚ್ಚು ಹೊತ್ತು ನೀಡಿರುವ ಹಿನ್ನೆಲೆಯಲ್ಲಿ ರಾಜ್ಯವು ಪ್ರಗತಿ ಪಥದತ್ತ ಸಾಗುತ್ತಿದೆ ಎಂದರು.

ಸಮಾರಂಭದಲ್ಲಿ ಸಾಧನೆಗೈದ ಪ್ರಗತಿಪರ ರೈತರು ಹಾಗೂ ರೈತ ಮಹಿಳೆಯರನ್ನು ಗೌರವಿಸಲಾಯಿತು. ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲಮಠದ ಡಾ. ಶ್ರೀ ಚನ್ನಬಸವ ಸ್ವಾಮೀಜಿ, ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಡಿಕೇರಿ ಶಾಸಕ ಡಾ. ಮಂತರ್ ಗೌಡ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಮಾಜಿ ಸಚಿವೆ ಗೀತಾ ಮಹದೇವ ಪ್ರಸಾದ್, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಮತಾ ಶೇಖರ್, ಮಂಡ್ಯ ಕೃಷಿ ವಿಜ್ಞಾನಗಳ ವಿಶೇಷ ಅಧಿಕಾರಿ ಡಾ.ಕೆ.ಎಂ. ಹರಿಣಿಕುಮಾರ್, ಪ್ರಗತಿಪರ ರೈತ ಮಹಿಳೆ ಆಶಾ ಶೇಷಾದ್ರಿ ಉಪಸ್ಥಿತರಿದ್ದರು.

ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ್ದ ಸಿಎಂ ಸಿದ್ದರಾಮಯ್ಯ ಕಾರು

ಅಡ್ಡ ಬಂದ ವಾಹನ ಸವಾರನಿಗೆ ಒದೆಯಲು ಮುಂದಾದ ಮೈಸೂರು ಎಸ್ಪಿ!

ಮೈಸೂರು, ಜ.18(ಬಿಎಲ್‌ಯು)– ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿಗೆ ದಾರಿ ಮಾಡಿಕೊಡುವ ಭರದಲ್ಲಿ ಓವರ್ ಟೇಕ್ ಮಾಡುತ್ತಿದ್ದ ದ್ವಿಚಕ್ರ ವಾಹನ ಸವಾರನಿಗೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಕಾಲಿನಿಂದ ಒದೆಯಲು ಮುಂದಾಗಿದ್ದ ಪ್ರಸಂಗ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಇಂದು ನಡೆಯಿತು.

ಸುತ್ತೂರು ಜಾತ್ರಾ ಮಹೋತ್ಸವದ ಸಮಾರಂಭದಲ್ಲಿ ಪಾಲ್ಗೊಂಡ ನಂತರ ಸಿದ್ದರಾಮಯ್ಯ ಅವರು ಅಲ್ಲಿಂದ ತೆರಳುವ ವೇಳೆ ಸುಮಾರು 3 ಕಿಲೋ ಮೀಟರ್ ಟ್ರಾಫಿಕ್ ಜಾಮ್ ಆಗಿತ್ತು.


ಇದರಿಂದ ಸಿದ್ದರಾಮಯ್ಯ ಅವರ ಕಾರು ಟ್ರಾಫಿಕ್ ಜಾಮ್ ಮಧ್ಯೆ ಸಿಲುಕಿಕೊಂಡಿತ್ತು. ಅಲ್ಲಿದ್ದ ವಾಹನಗಳನ್ನು ಪಕ್ಕಕ್ಕೆ ಸರಿಸಿ ಸಿದ್ದರಾಮಯ್ಯ ಅವರ ಕಾರು ಮುಂದೆ ಸಾಗಲು ಅನುವು ಮಾಡಿಕೊಡಲು ಪೊಲೀಸರು ಹರಸಾಹಸ ಪಟ್ಟರು. ಆ ವೇಳೆ ಸ್ವತಃ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರೇ ಫೀಲ್ಡ್‌ಗೆ ಇಳಿದರು.

ಆ ವೇಳೆ ಸಾಲಿನಲ್ಲಿ ನಿಂತಿದ್ದ ವಾಹನಗಳನ್ನು ಓವರ್ ಟೇಕ್ ಮಾಡಿಕೊಂಡು ಮುಂದೆ ಸಾಗಲು ದ್ವಿಚಕ್ರ ವಾಹನ ಸವಾರನೊಬ್ಬ ಯತ್ನಿಸಿದ. ಇದರಿಂದ ಕೋಪೋದ್ರಿಕ್ತರಾದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ದ್ವಿಚಕ್ರ ವಾಹನ ಸವಾರನಿಗೆ ಕಾಲಿನಿಂದ ಒದೆಯಲು ಮುಂದಾದರು.

ತರುವಾಯ ಪೊಲೀಸ್ ಕಾನ್ಸ್‌ಟೇಬಲ್ ಬಂದು ದ್ವಿಚಕ್ರ ವಾಹನ ಸವಾರನನ್ನು ಹಿಂದೆ ಸರಿಸಿದರು. ದ್ವಿಚಕ್ರ ವಾಹನ ಸವಾರ ಓವರ್ ಟೇಕ್ ಮಾಡಿರುವುದು ತಪ್ಪು. ಆದರೆ ಆತನಿಗೆ ಬುದ್ಧಿ ಹೇಳಿ ಹಿಂದೆ ಹೋಗುವಂತೆ ಹೇಳಬೇಕಿತ್ತು. ಎಸ್ಪಿಯವರು ಕಾಲಿನಿಂದ ಒದೆಯಲು ಮುಂದಾಗಬಾರದಿತ್ತು ಎಂದು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ಕ್ಕೆ ಸಡಗರದ ತೆರೆ





ಕಲಾಮಂದಿರದಲ್ಲಿ ಭಾನುವಾರ ಸಂಜೆ ಖ್ಯಾತ ಗಾಯಕಿ ಪಂಜಾಬಿನ ಗಿನ್ನಿ ಮಾಹಿ ಮತ್ತು ತಂಡ 'ಬಾಬಾ ಸಾಹೇಬ್ ಸಂಗೀತ ಸ್ಮೃತಿ' ಸಂಗೀತ ಕಾರ್ಯಕ್ರಮದಲ್ಲಿ ಹಾಡುಗಳ ಮೂಲಕ ಅಂಬೇಡ್ಕರ್ ಅವರ ಮೇರು ವ್ಯಕ್ತಿತ್ವ ಅನಾವರಣಗೊಳಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಭೂಮಿಗೀತದಲ್ಲಿ 'ಕವನ್ ಆನ್ ಅಂಬೇಡ್ಕರೈಟ್ ಒಪೆರಾ (ಹಿಂದಿ)' ನಾಟಕ ಪ್ರದರ್ಶನಗೊಂಡಿತು.

ಮೈಸೂರು,ಜ.18(ಪಿಎಂ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶ, ಮಾನವೀಯ ಮೌಲ್ಯ, ವಿಚಾರ ಧಾರೆ, ಸಮಾನತೆ ಸಂದೇಶ ಹಾಗೂ ಅವರ ಕೊಡುಗೆಗಳ ಪ್ರತಿಬಿಂಬಿಸುವ ಮೂಲಕ 'ಬಹುರೂಪಿ ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ' ಆಶಯದಲ್ಲಿ 8 ದಿನಗಳ ಕಾಲ ನಡೆದ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ಕ್ಕೆ ಭಾನುವಾರ ಸಂಜೆ ಸಡಗರದ ತೆರೆ ಬಿದ್ದಿತು.

ಈ ನಾಟಕೋತ್ಸವ ಮೈಸೂರು ರಂಗಾಯಣದ ಪ್ರಮುಖ ಉತ್ಸವಗಳಲ್ಲಿ ಒಂದಾಗಿದ್ದು, ಈ ಬಾರಿಯ 25ನೇ ವರ್ಷದ ಬೆಳ್ಳಿ ಬಹುರೂಪಿಯಲ್ಲಿ ರಂಗಾಯಣದ ಭೂಮಿಗೀತ, ವನರಂಗ, ಕಿರುರಂಗ ಮಂದಿರ ಹಾಗೂ ಕಲಾಮಂದಿರ ಸೇರಿದಂತೆ ನಾಲ್ಕು ಕಡೆಗಳಲ್ಲಿ ಸಂಜೆ ವೇಳೆಗೆ ಪ್ರದರ್ಶನ ಕಂಡು ವಿವಿಧ ನಾಟಕಗಳ ವೀಕ್ಷಣೆಗೆ ನಿತ್ಯ ರಂಗಾಸಕ್ತರ ದಂಡು ರಂಗಾಯಣದತ್ತ ಹರಿದು ಬಂದಿತು.

ನಾಟಕೋತ್ಸವದಲ್ಲಿ ಮಹಾರಾಷ್ಟ್ರ, ಮಣಿಪುರ, ತಮಿಳುನಾಡು, ಅಸ್ಸಾಂ, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ನಾಟಕ ತಂಡಗಳು ನಾನಾ ಭಾಷೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದವು. ಒಟ್ಟು 24 ನಾಟಕಗಳ ಪೈಕಿ 12 ಕನ್ನಡ ಭಾಷೆಯ ನಾಟಕಗಳು ಪ್ರದರ್ಶನ ಕಂಡವು. ಇದರಲ್ಲಿ ಬೇರೆ ಬೇರೆ ಭಾಷೆಗಳ 12 ನಾಟಕಗಳು ಬಾಬಾ ಸಾಹೇಬರ ಜೀವನ, ಸಮಾನತೆ ಸಂದೇಶ, ಕೊಡುಗೆ, ಸಂಶೋಧನೆ ಹಾಗೂ ಚಳವಳಿಗಳನ್ನು ಅನಾವರಣಗೊಳಿಸಿದವು.

ಈ ಬಹುಭಾಷಾ ನಾಟಕೋತ್ಸವ ಪ್ರಯುಕ್ತ ನಡೆದ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಸಿನಿಮಾಗಳಲ್ಲಿ ಸಹ ಹೆಚ್ಚಿನವುಗಳಲ್ಲಿ ಅಂಬೇಡ್ಕರ್ ಆಶಯ ಪ್ರತಿಧ್ವನಿಸಿತು. ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲೂ ಅಂಬೇಡ್ಕರ್ ಅವರ ಚಿಂತನ ಧಾರೆ ಹರಿಯಿತು. ಅಲ್ಲದೆ, ಜನಪದ ಉತ್ಸವ, ಪುಸ್ತಕ ಮೇಳ, ಕರಕುಶಲ ಮೇಳ ಹಾಗೂ ಚಿತ್ರಕಲಾ ಪ್ರದರ್ಶನಗಳು ಜನಮನ ಸೆಳೆದವು.

ಕಡೆ ದಿನವಾದ ಭಾನುವಾರ ಸಂಜೆ ಇಲ್ಲಿನ ವನರಂಗದಲ್ಲಿ 'ರುಮು ರುಮು ರುಮು (ಕನ್ನಡ)' ನಾಟಕವು ಹೆಚ್.ಆರ್.ಶ್ರದ್ಧಾ ರಾಜ್ ಅವರ ನಿರ್ದೇಶನದಲ್ಲಿ ತುಮಕೂರಿನ ಜಿಗುರು ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ತಂಡದಿಂದ ಪ್ರದರ್ಶನ ಕಂಡಿತು. ಅಂತೆಯೇ ಭೂಮಿಗೀತದಲ್ಲಿ 'ಕವನ್ ಆನ್ ಅಂಬೇಡ್ಕರೈಟ್ ಒಪೆರಾ (ಹಿಂದಿ)' ನಾಟಕವು ಅಭಿಷೇಕ್ ಮಜೂಂದಾರ್ ನಿರ್ದೇಶನದಲ್ಲಿ ಮುಂಬೈನ ಯಲ್ಗಾರ್ ಸಾಂಸ್ಕೃತಿಕ ಮಂಚ್ ಅಂಡ್ ನಳಂದ ಆರ್ಟ್ಸ್ ಸ್ಟುಡಿಯೋ ತಂಡದಿಂದ ಪ್ರದರ್ಶನಗೊಂಡಿತು. ಈ ಎರಡು ನಾಟಕಗಳಿಗೂ ರಂಗಾಸಕ್ತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಭಾನುವಾರ ಸಂಜೆ ಕಲಾಮಂದಿರದಲ್ಲಿ ಭಾರತದ ಖ್ಯಾತ ಗಾಯಕಿ ಪಂಜಾಬಿನ ಗಿನ್ನಿ ಮಾಹಿ ಮತ್ತು ತಂಡ ನಡೆಸಿಕೊಟ್ಟ 'ಬಾಬಾ ಸಾಹೇಬ್ ಸಂಗೀತ ಸ್ಮೃತಿ' ಸಂಗೀತ ಕಾರ್ಯಕ್ರಮದಲ್ಲಿ ಹಾಡುಗಳ ಮೂಲಕ ಅಂಬೇಡ್ಕರ್ ಅವರ ಮೇರು ವ್ಯಕ್ತಿತ್ವ ಅನಾವರಣಗೊಳಿಸಲಾಯಿತು. ಈ ಕಾರ್ಯಕ್ರಮವು ಜನಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಬಳ್ಳಾರಿಯಲ್ಲಿ ಬಿಜೆಪಿ ಸಮಾವೇಶ ಬರೀ ರಾಜಕೀಯ!

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ

● ಬಿಜೆಪಿಯವರಿಗೆ ಯಾವ ನೈತಿಕತೆ ಇಲ್ಲ ● ಬಳ್ಳಾರಿ ಬ್ರದರ್ಸ್‌ಗೆ ಸಂಸ್ಕಾರ, ಸಂಸ್ಕೃತಿ ಇಲ್ಲ ● ರಿಪಬ್ಲಿಕ್ ಆಫ್ ಬಳ್ಳಾರಿ ಮಾಡಿದವರು ಇವರೇ ಅಲ್ವಾ ● ಅಬಕಾರಿ ಡಿಸಿ ಲಂಚ ಪ್ರಕರಣದಲ್ಲಿ ಮೂಗು ತೂರಿಸಲ್ಲ

ಮೈಸೂರು, ಜ.18(ಬಿಎಲ್‌ಯು)– ಬರೀ ರಾಜಕೀಯ ಉದ್ದೇಶಕ್ಕಾಗಿ ಬಿಜೆಪಿಯವರು ಬಳ್ಳಾರಿಯಲ್ಲಿ ಸಮಾವೇಶ ನಡೆಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಳ್ಳಾರಿ ಗಲಭೆ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಯಾವ ನೈತಿಕತೆ ಇಟ್ಟುಕೊಂಡು ಬಿಜೆಪಿ ನಾಯಕರು ಆಗ್ರಹ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಯಾವ ಯಾವ ಕೇಸ್‌ಗಳನ್ನು ಸಿಬಿಐಗೆ ಕೊಟ್ಟಿದ್ದಾರೆ ಎಂದು ಹೇಳಲಿ ಎಂದ ಅವರು, ಜಾರ್ಜ್ ಕೇಸ್, ಸೌಜನ್ಯ ಕೇಸ್ ಸೇರಿದಂತೆ 8 ಪ್ರಕರಣಗಳನ್ನು ನಾನು ಸಿಬಿಐಗೆ ಕೊಟ್ಟಿದ್ದೇನೆ. ಇವರು ಒಂದು ಕೇಸ್ ಸಿಬಿಐಗೆ ನೀಡಿಲ್ಲ. ಈಗ ಅದು ಯಾವ ನೈತಿಕತೆ ಇಟ್ಟುಕೊಂಡು ಬಳ್ಳಾರಿ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸುತ್ತಿದ್ದಾರೆ ಎಂದು ಖಾರವಾಗಿ ಪ್ರಶ್ನಿಸಿದರು.

ಬಿಜೆಪಿ ನಾಯಕರಿಗೆ ಸಂಸ್ಕಾರ, ಸಂಸ್ಕೃತಿ ಇಲ್ಲ. ಏಕವಚನದಲ್ಲಿ ಮಾತನಾಡುತ್ತಾರೆ ಎಂದು ಬಳ್ಳಾರಿ ರೆಡ್ಡಿ ಬ್ರದರ್ಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್‌ನವರು ರಿಪಬ್ಲಿಕ್ ಆಫ್ ಕರ್ನಾಟಕ ಮಾಡಿಕೊಂಡಿದ್ದಾರೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಕಿಡಿಕಾರಿದ ಸಿದ್ದರಾಮಯ್ಯ, ಬಳ್ಳಾರಿಗೆ ಕಾಲಿಡಬೇಡಿ ಎಂದು ಜನಾರ್ಧನ ರೆಡ್ಡಿಗೆ ಸುಪ್ರೀಂ ಕೋರ್ಟ್ ಕಟ್ಟಾಜ್ಞೆ ಮಾಡಿದ ಹಿನ್ನೆಲೆ ಏನು? ಗಣಿ ಹಗರಣದ ಬಗ್ಗೆ ಸಂತೋಷ್ ಹೆಗ್ಡೆ ಅವರು ಏನು ವರದಿ ಕೊಟ್ಟಿದ್ದಾರೆ, ರಿಪಬ್ಲಿಕ್ ಆಫ್ ಬಳ್ಳಾರಿ ಯಾವಾಗ ಆಯಿತು ಎಂಬ ನಿಜ ಸಂಗತಿ ಇಡೀ ರಾಜ್ಯದ ಜನತೆಗೆ ತಿಳಿದಿದೆ ಎಂದು ಕೇಸರಿ ನಾಯಕರಿಗೆ ತಿರುಗೇಟು ನೀಡಿದರು.

ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಲೋಕಸಭಾ ಚುನಾವಣೆ ವೇಳೆ ಬಳ್ಳಾರಿಯಲ್ಲಿ ಪ್ರಚಾರ ಮಾಡಲು ನನಗೆ ಹಾಗೂ ಸಿ.ಎಂ.ಇಬ್ರಾಹಿಂಗೆ ಅವಕಾಶ ನೀಡಲಿಲ್ಲ. ಆದ ಕಾರಣ ಅಂದು ಕುರುಬರ ದೇವಸ್ಥಾನವೊಂದರಲ್ಲಿ ನಾನು ಪ್ರಚಾರ ಮಾಡಿದ್ದೆ ಎಂದು ಹಿಂದಿನ ಘಟನೆಯನ್ನು ಮೆಲುಕು ಹಾಕಿದ ಸಿದ್ದರಾಮಯ್ಯ, ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ, ಇವರದು ಸರ್ವಾಧಿಕಾರ ಧೋರಣೆ ಎಂಬುದಕ್ಕೆ ಇದಕ್ಕಿಂತ ಸ್ಪಷ್ಟ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು.

ಸಂಸದೀಯ ವ್ಯವಸ್ಥೆ ಬಗ್ಗೆ ಬಿಜೆಪಿಯವರಿಗೆ ನಂಬಿಕೆ ಇಲ್ಲ, ಗೂಂಡಾಗಿರಿ ಮಾಡುತ್ತಿದ್ದವರಿಂದ ನಾವು ಪಾಠ ಕಲಿಯಬೇಕಿಲ್ಲ ಎಂದು ಬಳ್ಳಾರಿ ಬ್ರದರ್ಸ್‌ಗೆ ಟಾಂಗ್ ನೀಡಿದರು.



ಮೈಸೂರಿನ ವಿಮಾನ ನಿಲ್ದಾಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ರಾಜ್ಯ ರಾಜಕಾರಣದ ಬಗ್ಗೆ ನೋ ರಿಯಾಕ್ಷನ್

ಬಳ್ಳಾರಿ ವಿಚಾರದ ಬಗ್ಗೆ ಮಾತನಾಡಿದ ನಂತರ ರಾಜ್ಯ ರಾಜಕಾರಣದ ಬಗ್ಗೆ ಕೇಳಿದಾಗ ಸಿದ್ದರಾಮಯ್ಯ ಅವರು ಯಾವುದೇ ಪ್ರತಿಕ್ರಿಯೆ ನೀಡದೆ ಪ್ರೆಸ್ ಗ್ಯಾಲರಿಯಿಂದಲೇ ನಿರ್ಗಮಿಸಿದರು. ಡಿ.ಕೆ.ಶಿವಕುಮಾರ್ ಹಾಗೂ ಕೆ.ಜೆ.ಜಾರ್ಜ್ ಅವರು ದೆಹಲಿಯಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿರುವ ಬಗ್ಗೆ ಪ್ರಶ್ನೆ ಕೇಳುತ್ತಿದ್ದಂತೆ ಯಾವುದೇ ಉತ್ತರ ನೀಡಲಿಲ್ಲ.

ಬಳ್ಳಾರಿ ಪ್ರಕರಣದ ಬಗ್ಗೆ ಬಿಜೆಪಿ ಜನಾಂದೋಲನ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಪ್ರತಿಭಟನೆ ಮಾಡುವುದು ಅವರ ಪಕ್ಷಕ್ಕೆ ಬಿಟ್ಟ ವಿಚಾರ ಎಂದರು.

ಕೇಂದ್ರದ ಬಿಜೆಪಿ ಸರ್ಕಾರದವರು ಜಿ ರಾಮ್ ಜಿ ಜಾರಿಗೊಳಿಸಿ ಮನರೇಗಾ ಹಾಳು ಮಾಡಲು ಹೊರಟಿದ್ದಾರೆ. ಈ ಬಗ್ಗೆ ಚರ್ಚೆ ಮಾಡಲು ವಿಶೇಷ ಅಧಿವೇಶನ ಕರೆದಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಡಿಸಿ ಲಂಚ ವಿಚಾರ ಲೋಕಾಯುಕ್ತಗೆ ಬಿಟ್ಟಿದ್ದು: ಬೆಂಗಳೂರಿನಲ್ಲಿ ಅಬಕಾರಿ ಡಿಸಿ ಜಗದೀಶ್ ನಾಯ್ಕ್ ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಈ ಲಂಚ ಪ್ರಕರಣದಲ್ಲಿ ಅಬಕಾರಿ ಸಚಿವ ತಿಮ್ಮಾಪುರ್ ಹೆಸರು ಕೇಳಿ ಬಂದಿರುವ ಬಗ್ಗೆ ಪ್ರಶ್ನಿಸಿದಾಗ, ಈ ವಿಚಾರ ನನಗೆ ಗೊತ್ತಿಲ್ಲ, ಲೋಕಾಯುಕ್ತರು ಅವರ ಕೆಲಸ ಮಾಡಲಿ, ಕಾನೂನಿನ ಕ್ರಮಕ್ಕೆ ನಾವು ಅಡ್ಡಿ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ನೈಜ ಆಕ್ಟಿವಿಸಂ ಮಾಯವಾಗಿ ಮೈಲೇಜ್ ಆಕ್ಟಿವಿಸಂಗೆ ತಿರುಗಿದೆ

ಮೈಸೂರು,ಜ.18(ಪಿಎಂ)– ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 90ರ ದಶಕದ ನಂತರ ನಿಜವಾದ ಆಕ್ಟಿವಿಸಂ ಮಾಯವಾಗಿ ಅದು ಮೈಲೇಜ್ ಆಕ್ಟಿವಿಸಂಗೆ ತಿರುಗಿದೆ ಎನ್ನಿಸುತ್ತದೆ. ಅದರ ಆಚೆಗೆ ಬಹಳ ದೊಡ್ಡ ರೀತಿಯಲ್ಲಿ ಹೋರಾಟಗಳು ರೂಪುಗೊಳ್ಳುತ್ತಿಲ್ಲವೇಕೆ ಎಂಬುದು ನನ್ನ ಪ್ರಶ್ನೆಯಾಗಿದೆ ಎಂದು ಸಾಹಿತಿ ಹಾಗೂ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಬಹುರೂಪಿ ಬಾಬಾಸಾಹೇಬ್–ಸಮತೆಯೆಡೆಗೆ ನಡಿಗೆ' ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.



ಕಿರುರಂಗ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಸಾಹಿತಿ ಹಾಗೂ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ಸಮಾರೋಪ ಭಾಷಣ ಮಾಡಿದರು.

2000 ನಂತರ ದೊಡ್ಡ ಚಿಂತಕರು, ಬರಹಗಾರರು, ಬಾಬಾ ಸಾಹೇಬರ ನುಡಿಗಳನ್ನು ಉತ್ಖನನ ಮಾಡುತ್ತಿದ್ದಾರೆ. ಇದು ನಿಜಕ್ಕೂ ಬಾಬಾ ಸಾಹೇಬರ ನುಡಿಗಳ ವಸಂತ ಕಾಲ ಎನ್ನಬಹುದು. ಇಂತಹ ಹೊತ್ತಲ್ಲಿ ಇಂದು ಭಾರತದಲ್ಲಿ ಕೆಲವು ವರ್ಷಗಳಿಂದ ಈಚೆಗೆ ಸಂವಿಧಾನದ ಜೊತೆಗೆ ಬಾಬಾ ಸಾಹೇಬರನ್ನು ಸಮೀಕರಿಸಿ ಜಾಗೃತ ವರ್ಗ ರೂಪುಗೊಳ್ಳುತ್ತಿದೆ. ಈ ನಡುವೆ ನನ್ನಲ್ಲಿ ಆತಂಕ ಮತ್ತು ಅನುಮಾನವಿದೆ ಏಕೆಂದರೆ, ಹೋರಾಟಗಳು ಬೀದಿಯಲ್ಲಿ ನಡೆಯದೇ ಇಂತಹ ವೇದಿಕೆಗೆ ಬರುವಾಗ ಕೊಂಚ ಅನುಮಾನವೂ ಅದರ ಜೊತೆಗೆ ಇರಬೇಕಾಗುತ್ತದೆ. ಕಾರಣವೆಂದರೆ ಇವತ್ತು ಬೀದಿ ಹೋರಾಟಗಳು ನೈಜವಾದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳದೇ ಕೇವಲ ಇಂತಹ ವೇದಿಕೆಗಳಿಗೆ ಸೀಮಿತವಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಚಳವಳಿಗಾರರು, ನಾಯಕರು, ಚಿಂತಕರು ಇಂತಹ ವೇದಿಕೆಯಲ್ಲಿ ಕಾಣಿಸಿಕೊಂಡರೆ ಕೊಂಚ ಅನುಮಾನ ಶುರುವಾಗುತ್ತದೆ. ಇವರು ಏನಾದರೂ ನಟರಾಗುತ್ತಿದ್ದಾರಾ ಎನ್ನುವುದು ನನ್ನ ಅನುಮಾನ. ಏಕೆಂದರೆ ಇವತ್ತು ಬಾಬಾ ಸಾಹೇಬರು ಒಂದು ರೀತಿಯಲ್ಲಿ ಕಾಮಧೇನು ಆಗಿದ್ದಾರೆ. ಅವರ ಬರಹ, ಹೋರಾಟ ಪ್ರತಿಯೊಂದನ್ನು ಕೂಡ ಒಂದು ರೀತಿ ಕಾಮಧೇನು ಆಗಿ ಮಾಡಿಕೊಳ್ಳಲಾಗುತ್ತಿದೆ. ಕಾಮಧೇನುವನ್ನು ನಮ್ಮ ಪುರಾಣದ ಹಿನ್ನೆಲೆಯಲ್ಲಿ ನೋಡಿದರೆ ಒಂದು ಅಪಾಯವನ್ನೂ ಒಳಗೊಂಡಿರುತ್ತದೆ. ಅದೇನೆಂದರೆ ಅಪಹರಣ. ಕಾಮಧೇನುಗಳನ್ನು ಅಪಹರಿಸಲಾಗುತ್ತದೆ. ಈ ತತ್ವಶಾಸ್ತ್ರ ಇಲ್ಲೂ ಇದೆ ಎಂದು ಅನುಮಾನದಿಂದ ನೋಡಬೇಕೇನೋ ಎಂಬುದು ವೈಯಕ್ತಿಕವಾಗಿ ಅನ್ನಿಸುತ್ತಿದೆ ಎಂದರು.

ರಾಜಕಾರಣಿಗಳು, ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು, ರಾಜಕೀಯ ಪಕ್ಷಗಳು, ಸಂಶೋಧಕರು, ವಿದ್ವಾಂಸರಿಗೆ ಅಂಬೇಡ್ಕರ್ ಅವರು ಕಾಮಧೇನು ರೂಪದಲ್ಲಿ ಒಂದು ದೊಡ್ಡ ರೀತಿಯ ನಿಚ್ಚಣಿಕೆಯಾಗಿದ್ದಾರೆ. ಒಂದು ರೀತಿ ಪ್ರತಿಯೊಬ್ಬರು ಮರದಿಂದ ಹಣ್ಣು ಮತ್ತು ಕಾಯಿಗಳನ್ನು ಬಿಡಿಸಿಕೊಳ್ಳುವಂತಾಗಿದೆ. ಆದರೆ ಪ್ರಶ್ನೆ ಇರುವುದು ಅದರ ಬೇರಿನಲ್ಲಿರುವ ಕಥೆಯೇನು ಎಂಬುದಾಗಿದೆ. ಇದು ಮುಖ್ಯ ಪ್ರಶ್ನೆ. ಬಾಬಾ ಸಾಹೇಬರು ಇಂತಹವರಿಗೆ ನಿಚ್ಚಣಿಕೆ ಆಗುವುದಾದರೆ ಬೇರಿನಲ್ಲಿರುವ, ಗ್ರಾಸ್ ರೂಟ್ ಎಂದು ಕರೆಯಬಹುದಾದ ತಳವರ್ಗ, ಸಮುದಾಯಗಳಿಗೆ ಏನು ಸಿಗಬಹುದು ಎಂದು ಪ್ರಶ್ನಿಸಿದರು.

ಅಕಾಡೆಮಿಕ್ ಆಗಿ ಹಾಗೂ ಬೌದ್ಧಿಕವಾಗಿ ರೂಪುಗೊಳ್ಳಬೇಕಿರುವುದು ಬಹಳ ಅಗತ್ಯ. ಅದನ್ನು ತಿರಸ್ಕಾರ ಮಾಡಲು ಸಾಧ್ಯವಿಲ್ಲ. ಆದರೆ ಅದು ನಡೆಯ ಜೊತೆಗೆ ಸಮೀಕರಣಗೊಳ್ಳದಿದ್ದರೆ, ಏನಾಗಬಹುದು ಎಂಬುದು ನನಗೆ ಇರುವಂತಹ ಆತಂಕವಾಗಿದೆ. ಅಂಬೇಡ್ಕರ್ ಅವರು ಇಂತಹ ಜನ ವರ್ಗಗಳಿಗೆ ಹೋರಾಟಕ್ಕೆ ಬೇಕಾದ ಪ್ಲೇಕಾರ್ಡ್ (ಭಿತ್ತಿಪತ್ರ) ಆಗಿ ಮಾತ್ರ ಉಳಿಯುವಂತೆ ಆಗುತ್ತದೆನೋ ಎಂದು ಆತಂಕ ವ್ಯಕ್ತಪಡಿಸಿದರು.

1920ರಲ್ಲಿ ಅಂಬೇಡ್ಕರ್ ಅವರು ತಮ್ಮ ಸಾಮಾಜಿಕ ಚಳವಳಿ ಆರಂಭಿಸಿದರು. ಅಂದಿನಿಂದ 1980ರವರೆಗೆ ಸುದೀರ್ಘ ಕಾಲ ಭಾರತ ದೇಶದ ರಂಗವೇದಿಕೆಯಲ್ಲಿ ಬಾಬಾ ಸಾಹೇಬರು ತೆರೆಮರೆ ಪಾತ್ರವಾಗಿದ್ದರು. ಉಳಿದವರು ಕೇಂದ್ರ ಸ್ಥಾನದಲ್ಲಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ. 80ರ ದಶಕದಲ್ಲಿ ಮಹಾರಾಷ್ಟ್ರ ಸರ್ಕಾರ ಬಾಬಾ ಸಾಹೇಬರ ಕುರಿತ ಕೃತಿಗಳನ್ನು ಪ್ರಕಟಿಸಿತು. 1992ರ ವೇಳೆಯಲ್ಲಿ ಕರ್ನಾಟಕ ಸರ್ಕಾರವೂ ಒತ್ತಾಯದ ಮೇರೆಗೆ ಕೃತಿಗಳನ್ನು ಪ್ರಕಟಿಸಿತು. ಇದೊಂದು ದೊಡ್ಡ ಕುಚೋದ್ಯ ಎಂದು ನೋಡಬೇಕಿದೆ. ಏಕೆಂದರೆ ಇಂದು ಬಾಬಾ ಸಾಹೇಬರ ಕುರಿತಂತೆ ಕೃತಿಗಳು ಪ್ರವಾಹದ ರೀತಿಯಲ್ಲಿ ಪ್ರಕಟವಾಗಿವೆ. ಅಲ್ಲಿಯವರೆಗೆ ಒಂದು ಗೈರು ಇತ್ತು. ಇದು ಏಕೆಂದು ನಾವು ಅರ್ಥ ಮಾಡಿಕೊಳ್ಳಬೇಕು. ಮತ್ತು ಭಾರತ ದೇಶ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಏಕೆ ಇಂತಹ ಒಂದು ಬೆಳಕನ್ನು ಭಾರತಮಾತೆ ತನ್ನ ಪಾದಗಳ ಕೆಳಗೆ ತುಳಿದು ಇಟ್ಟುಕೊಂಡಿದ್ದಳು ಎನ್ನುವುದನ್ನು ಕಟಕಟೆಯಲ್ಲಿ ನಿಲ್ಲಿಸಬೇಕಾದ ಮಾತಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಸಾಬೀರ್ ಅಹ್ಮದ್ ಮುಲ್ಲಾ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪನಿರ್ದೇಶಕ ಎಂ.ಡಿ.ಸುದರ್ಶನ, ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಹಿರಿಯ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್, ವಿಚಾರ ಸಂಕಿರಣದ ಸಂಯೋಜಕಿ ಕೆ.ಆರ್.ನಂದಿನಿ ಮತ್ತಿತರರು ಹಾಜರಿದ್ದರು.



ಭಾನುವಾರ ರಂಗಾಯಣದ ವನರಂಗದಲ್ಲಿ 'ರುಮು ರುಮು ರುಮು (ಕನ್ನಡ)' ನಾಟಕದ ಪ್ರದರ್ಶನ

ನಕ್ಕರೆ ಅದೇ ಸ್ವರ್ಗ

ಗಂಡ–ಹೆಂಡತಿ ಜಗಳ ಆಡಿ ಮಾತು ಬಿಟ್ಟಿದ್ದರು. ಮರುದಿನ...
ಹೆಂಡತಿ: ರೀ... ನೀವು ನನ್ನ ಪಾಲಿಗೆ ಒಂಥರಾ 2000 ರೂ. ನೋಟು ಇದ್ದಂಗೆ...
ಗಂಡ (ಖುಷಿಯಿಂದ): ಏನೇ ಸಮಾಚಾರ...?
ಹೆಂಡತಿ: ಚೇಂಜೂ ಸಿಗಲ್ಲ.... ಬಿಸಾಕಾಕಕ್ಕೂ ಆಗಲ್ಲ...!

ಮೈಸೂರು ಮಿತ್ರ
ಸೋಮವಾರ, ಜನವರಿ 19, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಈ ಜಗತ್ತಿನಲ್ಲಿರುವ ಏಕೈಕ ನಿಜವಾದ ವಿಷಯವೆಂದರೆ ಯಾವುದೇ ಮುಹೂರ್ತ ಇಲ್ಲದೆ ಸಂಭವಿಸುವುದು; ಅದು ಜನನ, ಪ್ರೀತಿ ಮತ್ತು ಮರಣ. –ಓಶೋ ರಜನೀಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಳಕಾಯಿ ಬಿಟ್ಟು, ಸಾಸಿವೆ ಕಾಳು ಹಿಡಕೊಂಡ್ರು

ನಿಮ್ಮ ಪತ್ರಗಳು

ಚಿನ್ನ, ಬೆಳ್ಳಿ ದರ ಏರಿಕೆಗೆ ಕಡಿವಾಣ ಬೀಳಲಿ...

ಮಾನ್ಯರೆ,



ಪ್ರತಿಯೊಬ್ಬರೂ ಇಷ್ಟಪಡುವ ವಸ್ತುಗಳಲ್ಲಿ ಚಿನ್ನ ಮೇಲ್ಪಂಕ್ತಿಯಲ್ಲಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಅದರಲ್ಲೂ ಭಾರತ ಜಗತ್ತಿನಲ್ಲಿ ಅತಿ ಹೆಚ್ಚು ಚಿನ್ನ ಹೊಂದಿರುವ ದೇಶಗಳಲ್ಲಿ ಒಂದು. ಎಲ್ಲಾ ವರ್ಗದ ಜನರು ಆಸೆಪಟ್ಟು ಖರೀದಿಸುವ ವಸ್ತುಗಳಲ್ಲಿ ಬಂಗಾರ ಪ್ರಮುಖವಾಗಿದೆ. ನಮ್ಮಂತ ಮಧ್ಯಮ ವರ್ಗದ ಜನರು ಪೈಸೆ ಪೈಸೆ ಕೂಡಿಟ್ಟು ಚಿನ್ನ ಕೊಳ್ಳೋದಕ್ಕೆ ಆದ್ಯತೆ ನೀಡುತ್ತೇವೆ. ಅಂತಹ ಚಿನ್ನ ಬರೀ ಚಿನ್ನವಾಗಿರದೇ, ಆಪತ್‌ಕಾಲದ ಬಂಧು ಕೂಡ ಹೌದು. ಯಾವುದೇ ಹಣದ ಸಮಸ್ಯೆ ಬಂದರೂ ಚಿನ್ನ ಅಡವಿಟ್ಟು, ಮಾರಿಯಾದರೂ ಹಣ ಪಡೆದುಕೊಳ್ಳಬಹುದು ಎಂಬುದು ನಮ್ಮಂತ ಮಧ್ಯಮ ವರ್ಗದವರ ಉದ್ದೇಶ ಕೂಡ ಹೌದು. ಹೀಗಾಗಿಯೇ ಇಂದು ಚಿನ್ನ ಪ್ರಮುಖ ಲೋಹವಾಗಿ ಗುರುತಿಸಿಕೊಂಡಿದೆ.

ಆದರೆ ಇಂತಹ ಚಿನ್ನ ಇತ್ತೀಚಿನ ದಿನಗಳಲ್ಲಿ ಯಾರೂ ಊಹಿಸದ ರೀತಿಯಲ್ಲಿ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಬಂಗಾರ ಪ್ರಿಯರಿಗೆ ಶಾಕ್ ಮೇಲೆ ಶಾಕ್ ನೀಡುತ್ತಿದೆ. ಅದರಲ್ಲೂ ಈ ಜನವರಿಯಿಂದ ಮೇವರೆಗೂ ಮದುವೆ ಸಮಾರಂಭಗಳು ಇದ್ದು, ಈ ಸಂದರ್ಭದಲ್ಲಿ ಚಿನ್ನಾಭರಣಗಳ ಬೆಲೆ ಹೆಚ್ಚಳವಾಗುತ್ತಿರುವುದು ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಬೆಳ್ಳಿ ಕೂಡ ಪೂಜನೀಯ ಲೋಹವಾಗಿ ಬಳಕೆಯಲ್ಲಿದ್ದು, ಬೆಳ್ಳಿಯ ಅನೇಕ ಪರಿಕರಗಳನ್ನು ದಿನಬಳಕೆಯಲ್ಲಿ ಜನ ಬಳಸುತ್ತಿದ್ದಾರೆ. ಬೆಳ್ಳಿಯ ಕಾಲ್ಗೆಜ್ಜೆ, ಬೆಳ್ಳಿಯ ಆಭರಣಗಳು, ಪೂಜಾ ಸಾಮಾಗ್ರಿ ಎಂದು ಬೆಳ್ಳಿಯ ವಸ್ತುಗಳನ್ನು ಗ್ರಾಹಕರು ಖರೀದಿಸುತ್ತಿದ್ದಾರೆ. ಇಂತಹ ಬೆಳ್ಳಿ ಕೂಡ ಚಿನ್ನದ ಹಿಂದೆಯೇ ತನ್ನ ಬೆಲೆಯನ್ನು ಭರ್ಜರಿಯಾಗಿಯೇ ಏರಿಸಿಕೊಂಡಿದ್ದು, ಅದು ಕೂಡ ನಾಗಾಲೋಟದಿಂದ ಓಡುತ್ತಿದೆ. ದಿನದಿಂದ ದಿನಕ್ಕೆ ಹಾಗೂ ವಾರದಿಂದ ವಾರಕ್ಕೆ ಏರಿಕೆಯಾಗುತ್ತಿರುವ ಚಿನ್ನ, ಬೆಳ್ಳಿ ದರಗಳಿಗೆ ಕಡಿವಾಣ ಹಾಕಿ, ಬಡ ಹಾಗೂ ಮಧ್ಯಮ ವರ್ಗದ ಜನರ ಕೈಗೆ ಎಟುಕುವ ನಿಟ್ಟಿನಲ್ಲಿ ಚಿನ್ನ ಹಾಗೂ ಬೆಳ್ಳಿಯ ದರಗಳಲ್ಲಿ ಸ್ಥಿರತೆಯನ್ನು ಕಾಪಾಡುವುದು ಅವಶ್ಯಕವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

ದ್ವಿಚಕ್ರ ವಾಹನಗಳಿಗೆ ಎರಡೂ ಕಡೆ ಮಿರರ್ ಕಡ್ಡಾಯವಾಗಲಿ

ಮಾನ್ಯರೆ,

ದ್ವಿಚಕ್ರ ವಾಹನಗಳಿಗೆ ಎರಡು ಕಡೆ ದರ್ಪಣ (ಮಿರರ್)ವನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು ಎಂಬುದು ನಿಯಮ ಮತ್ತು ಕಾನೂನು ಇದೆ. ಜೊತೆಗೆ ಯಾರು ಈ ನಿಯಮವನ್ನು ಉಲ್ಲಂಘಿಸುತ್ತಾರೋ ಅವರಿಗೆ ಸಂಚಾರ ನಿಯಮದ ಕಾನೂನು ಅಡಿಯಲ್ಲಿ ಶಿಕ್ಷೆ ಪ್ರಮಾಣವನ್ನು ಸಹ ಉಲ್ಲೇಖಿಸಿದ್ದರೂ ಇದೆಲ್ಲವನ್ನೂ ಮರೆತು ದ್ವಿಚಕ್ರ ವಾಹನ ಸವಾರರು ತಮ್ಮ ಬೈಕ್‌ಗಳು ಆಕರ್ಷಕವಾಗಿ ಕಾಣಬೇಕೆಂಬ ಕಾರಣದಿಂದ ಸಂಚಾರ ನಿಯಮಗಳನ್ನು ಮರೆಮಾಚಿ ದ್ವಿಚಕ್ರ ವಾಹನಗಳ ದರ್ಪಣವನ್ನು ಎರಡು ಕಡೆಯಲ್ಲೂ ತೆಗೆದುಹಾಕಿ ವಾಹನವನ್ನು ಚಾಲನೆ ಮಾಡುವುದಲ್ಲದೆ, ನಿಯಮವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವ ಸವಾರರಿಗೂ ತೊಂದರೆ ಕೊಡುತ್ತಿದ್ದಾರೆ. ಇದರಿಂದ ಸಾಕಷ್ಟು ಪ್ರಮಾಣದಲ್ಲಿ ಅಪಘಾತಗಳು ಸಂಭವಿಸುತ್ತಿದೆ. ತಮ್ಮ ದ್ವಿಚಕ್ರ ವಾಹನಗಳ ದರ್ಪಣ ತೆಗೆದರೆ, ಅದರಿಂದ ಅಡ್ಡ ಪರಿಣಾಮಗಳು ಉಂಟಾಗುತ್ತದೆ ಎಂಬ ಅರಿವಿದ್ದರು ಸಹ ಇಂತಹ ತಪ್ಪುಗಳನ್ನು ಮಾಡಿ ಮತ್ತೊಬ್ಬರ ಪ್ರಾಣ ಹಾನಿಗೆ ಕಾರಣರಾಗುತ್ತಾರೆ. ಆದ್ದರಿಂದ ನಮ್ಮ ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ, ಪ್ರತಿಯೊಂದು ಜೀವಕ್ಕೆ ಬೆಲೆ ಕೊಡುವ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ದ್ವಿಚಕ್ರ ವಾಹನಗಳಿಗೆ ಎಡಭಾಗ ಮತ್ತು ಬಲಭಾಗಗಳಲ್ಲಿ ದರ್ಪಣ ಅಳವಡಿಕೆ ಮಾಡಿ ಕೊಳ್ಳುವುದರ ಮುಖಾಂತರ ಸಾಮಾಜಿಕ ಕಾಳಜಿಯನ್ನು ವಹಿಸಬೇಕಾಗಿದೆ

–ಸಾಯಿ ಸಂದೇಶ್ ಬಿ.ಎಸ್., ಮೈಸೂರು.

ಅಕ್ಷರ ಲೋಕದ ಮೇಲೆ ಆರ್ಥಿಕ ನಿರ್ಲಕ್ಷ್ಯದ ಪೆಟ್ಟು

ಮಾನ್ಯರೆ,

ವರದಿಗಳ ಪ್ರಕಾರ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ಹೊಸ ಸಾಹಿತ್ಯ ಕೃತಿಗಳ ಖರೀದಿಯೇ ನಡೆದಿಲ್ಲ ಎಂಬುದು ಆತಂಕಕಾರಿ ವಿಷಯ. ಸ್ಥಳೀಯ ಸಂಸ್ಥೆಗಳಿಂದ ಬರಬೇಕಾದ ಅಂದಾಜು 526.83 ಕೋಟಿ ರೂ. ಗ್ರಂಥಾಲಯ ತೆರಿಗೆಯನ್ನು ವಸೂಲಿ ಮಾಡಲು ಸಾಧ್ಯವಾಗದ ಆಡಳಿತ ಯಂತ್ರದ ವೈಫಲ್ಯ ಎದ್ದು ಕಾಣುತ್ತಿದೆ. ಬಿಬಿಎಂಪಿಯಂತಹ ಸಂಸ್ಥೆಗಳೇ 461 ಕೋಟಿಗೂ ಅಧಿಕ ಹಣ ಬಾಕಿ ಉಳಿಸಿಕೊಂಡಿರುವುದು ವ್ಯವಸ್ಥೆಯ ದುರಂತ. ಪ್ರಕಾಶಕರಿಗೆ ಪಾವತಿಸಬೇಕಾದ 8 ಕೋಟಿ ರೂ. ಬಾಕಿ ಹಣ ನೀಡದೆ ಅವರನ್ನು ಬೀದಿಗೆ ತಳ್ಳಲಾಗುತ್ತಿದೆ. ಡಿಜಿಟಲ್ ಲೈಬ್ರರಿ ಎಂಬ ಆಕರ್ಷಕ ಪದಗಳ ಹಿಂದೆ ಹಳ್ಳಿಗಳ ಗ್ರಂಥಾಲಯಗಳಲ್ಲಿ ಕನಿಷ್ಠ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಿರುವುದು ಅಕ್ಷಮ್ಯ ಅಪರಾಧ. ಸರ್ಕಾರವು ಕೂಡಲೇ ಈ ಆರ್ಥಿಕ ಬಿಕ್ಕಟ್ಟನ್ನು ನೀಗಿಸಿ, ಬಾಕಿ ತೆರಿಗೆಯನ್ನು ಕಡ್ಡಾಯವಾಗಿ ವಸೂಲಿ ಮಾಡಬೇಕು. ಪುಸ್ತಕ ಸಂಸ್ಕೃತಿಯನ್ನು ಕೊಲ್ಲುತ್ತಿರುವ ಈ ಆಡಳಿತಾತ್ಮಕ ಮಂದಗತಿಯ ಧೋರಣೆಯನ್ನು ಕೂಡಲೇ ಕೈಬಿಡಬೇಕು. **–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.**

ಕಾರಣಕರ್ತರು!

ಮಾನ್ಯರೆ,

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮೂರು ವಿಭಾಗಗಳಿಗೆ ಜಾನಪದ, ಭಾಷಾಶಾಸ್ತ್ರ, ದಕ್ಷಿಣ ಭಾರತ ಅಧ್ಯಯನ– ಈಗ ಸುವರ್ಣ ಮಹೋತ್ಸವ ಸಂಭ್ರಮ. ಈ ಬಗೆಗೆ ನನ್ನ ಅಭಿಪ್ರಾಯವನ್ನು ಕೇಳಲಾಯಿತು. ಸಾಕ್ಷ್ಯಚಿತ್ರಕ್ಕಾಗಿ (ನಾನು ಮಾಜಿ ನಿರ್ದೇಶಕನಷ್ಟೆ).

ನಾನು ಮಾತನಾಡುವಾಗ ಒಂದು ಮುಖ್ಯ ವಿಷಯವನ್ನು ಹೇಳುವುದನ್ನು ಮರೆತೆ: ಸಂಸ್ಥೆಯ ನಿರ್ದೇಶಕರಾಗಿದ್ದ ಪ್ರೊ.ದೇಜಗೌ ಮತ್ತು ಪ್ರೊ. ಹಾಮಾ. ನಾಯಕರು ಮೇಲೆ ಹೇಳಿದ ವಿಭಾಗಗಳನ್ನು ಆರಂಭಿಸಿದವರು ಮತ್ತು ಒಟ್ಟಾರೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಶ್ರೇಯಸ್ಸು, ಯಶಸ್ಸುಗಳ ಕಾರಣಕರ್ತರು! ಸಂಸ್ಥೆ ಈಗ ಹೆಮ್ಮರ; ಫಲಪ್ರದ ಶಾಖಾ ಸಂಪನ್ನ!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಯಾಕೆ ಎಂದರೆ ಸ್ವರ್ಗ; ನಮಗ್ಯಾಕೆಂದರೆ ನರಕ!

ಪ್ರಶ್ನೆ ಮಾಡುವ ಸ್ವಭಾವವನ್ನು ಮಕ್ಕಳಿಗೆ ಮನೆಯಲ್ಲಿ ಹೆತ್ತವರು, ಶಾಲೆಯಲ್ಲಿ ಗುರುಗಳು ಮೂಲಭೂತವಾಗಿ ಕಲಿಸಬೇಕಾದ ಪಾಠಗಳಲ್ಲಿ ಒಂದು. ಶಾಲಾ ಪರೀಕ್ಷೆಯಷ್ಟೇ ಅಲ್ಲ ಜೀವನದ ಪರೀಕ್ಷೆ ಎದುರಿಸಲು ಪ್ರಶ್ನಿಸುವ ಮನೋಭಾವ ಅತಿಮುಖ್ಯ. ಪ್ರಶ್ನಿಸುವ ಗುಣವನ್ನು ಕಲಿಸದೆ, ನಮಗ್ಯಾಕೆ ಎಂದು ಮಾತಾ–ಪಿತೃ, ಗುರುಗಳು ಸುಮ್ಮನಾದರೆ ಭವಿಷ್ಯದಲ್ಲಿ ಮಕ್ಕಳು ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಮನೆ, ಸಮಾಜ, ರಾಜ್ಯ ಹಾಗೂ ದೇಶಕ್ಕೆ ಸಂಬಂಧಿಸಿದಂತೆ 'ಯಾಕೆ' ಎನ್ನುವ ಅಭ್ಯಾಸ ಬಹಳ ಉತ್ತಮವಾದುದು ಹಾಗೂ ಮುಖ್ಯವಾದುದು.

ಯಾಕೆ ಎಂದು ತಮ್ಮ ವಿಚಾರಕ್ಕೆ ಮಾತ್ರ ಸೀಮಿತಗೊಳಿಸದೆ, ನೆರೆ–ಹೊರೆ, ಬಂಧು–ಬಳಗ, ಕೆಲವೊಮ್ಮೆ ಸ್ನೇಹಿತರು ಹೀಗೆ ಯಾರೇ ಆಗಲಿ, ಸರಿ ಕಾಣದೇ ಇದ್ದ ಸಂದರ್ಭದಲ್ಲಿ ಪ್ರಶ್ನಿಸುವ ಮನೋಭಾವ ಅವಶ್ಯವಾಗಿರುತ್ತದೆ. ಯಾಕೆ ಎಂಬ ಮನೋಭಾವ ಒಂದು ಶಕ್ತಿಯಾದರೆ, ನಮಗ್ಯಾಕೆ ಎಂಬ ಮನೋಭಾವ ಒಂದು ದೌರ್ಬಲ್ಯ. ಶೋಷಣೆ, ಅನ್ಯಾಯ, ಅಕ್ರಮವಾದಾಗ ಯಾಕೆ ಎಂದು ಸಂಘಟಿತರಾಗಿ ಪ್ರಶ್ನಿಸಿದಾಗ ಎದುರಿಗಿರುವವರ ಎದೆಯಲ್ಲಿ ನಡುಕ ಉಂಟಾಗುತ್ತದೆ. ನಮಗ್ಯಾಕೆ ಎಂದರೆ ಎದುರಾಳಿ ತನ್ನ ಆಟಾಟೋಪ ಮುಂದುವರಿಸಿ ನಮ್ಮ ಎದೆಯಲ್ಲಿ ನಡುಕ ಉಂಟು ಮಾಡುತ್ತಾರೆ. ಆದರೆ ಕೆಲವೊಮ್ಮೆ ಸಂಬಂಧ ಪಡದ ವಿಚಾರದಲ್ಲಿ ಮೂಗು ತೂರಿಸಿ 'ಯಾಕೆ' ಎಂದು ಪ್ರಶ್ನಿಸದೇ ಇರುವ ಪರಿಜ್ಞಾನವೂ ಇರಬೇಕಾದುದು ಅಗತ್ಯ ಹಾಗೂ ಕ್ಷೇಮ.

ಒಮ್ಮೆ ಖಾಸಗಿ ಬಸ್ ಒಂದರಲ್ಲಿ ಚಾಮರಾಜನಗರದಿಂದ ಮೈಸೂರಿಗೆ ಪ್ರಯಾಣ ಮಾಡುತ್ತಿರಬೇಕಾದರೆ ಆ ಬಸ್‌ನ ನಿರ್ವಾಹಕ ತಮಿಳು ಚಲನಚಿತ್ರಗೀತೆಯನ್ನು ಮ್ಯೂಸಿಕ್ ಸಿಸ್ಟಂನಲ್ಲಿ ಹಾಕಿದ್ದರು. ನನ್ನ ಸಹ ಪ್ರಯಾಣಿಕರಾದ ಕರ್ನಾಟಕದ ಯಾವೊಬ್ಬ ಪ್ರಯಾಣಿಕರು ಅದನ್ನು ಪ್ರಶ್ನಿಸದೆ ಕುಳಿತಿದ್ದರು. ಅರ್ಧಗಂಟೆಯಾದರೂ ತಮಿಳು ಹಾಡುಗಳೇ ಪ್ರಸಾರವಾಗುತ್ತಿದ್ದವು. ನಂತರ ನಾನು ನಿರ್ವಾಹಕರನ್ನು ಯಾಕೆ ಕನ್ನಡದ ಬದಲು ತಮಿಳು ಹಾಡುಗಳನ್ನು ಹಾಕಿರುವಿರಿ ಎಂದೆ. ನನಗಿಷ್ಟ ಅದಕ್ಕೆ ಎಂದರು. ನಾನು ನಿಮಗಿಷ್ಟವಾದರೆ ರಾತ್ರಿ ತಂಗಿದಾಗ ಇಡೀ ರಾತ್ರಿ ಬಸ್‌ನಲ್ಲಿ ಹಾಕಿಕೊಂಡು ಕೇಳಿ, ಇದು ಸಾರ್ವಜನಿಕ ವಾಹನ, ಈಗ ಕನ್ನಡ ಹಾಡುಗಳನ್ನು ಹಾಕಿ, ಇಲ್ಲವಾದಲ್ಲಿ ಬಂದ್ ಮಾಡಿ ಎಂದು ಹೇಳಿದೆ.

ಮೊದಲಿಗೆ ಆತ ನನ್ನ ಮಾತಿಗೆ ಸೊಪ್ಪು ಹಾಕಲಿಲ್ಲ, ನಾನು ಪ್ರಶ್ನಿಸುವುದನ್ನು ಬಿಡಲಿಲ್ಲ. ಹೀಗೆ ವಾದ ನಡೆಯುತ್ತಲೇ ಇತ್ತು. ಸ್ವಲ್ಪ ಸಮಯದ ನಂತರ ನನ್ನ ಮಾತಿಗೆ ನಾಲ್ಕು ಜನ ಎದ್ದು ಧ್ವನಿಗೂಡಿಸಿದರು. ಒಬ್ಬರಂತೂ, ಈ ಬಸ್ ತಮಿಳುನಾಡಿಗೆ ಹೋದಾಗ, ಕನ್ನಡ ಹಾಡು ಹಾಕುವ ಗುಂಡಿಗೆ ಇದೆಯಾ ನಿನಗೆ? ಎಂದು ಜೋರು ಮಾಡಿದರು. ಆಗ ನಿರ್ವಾಹಕ ಗತ್ಯಂತರವಿಲ್ಲದೆ ಕನ್ನಡ ಹಾಡುಗಳನ್ನು ಹಾಕಿದ. ಅನಗತ್ಯವಾಗಿ ಅನ್ಯಭಾಷೆ ಹೇರಿಕೆಯನ್ನು ತಪ್ಪಿಸಿದ ಸಮಾಧಾನವಾಯಿತು. ವಿಷಯ ಚಿಕ್ಕದೇ ಇರಬಹುದು. ಆದರೆ ಯಾಕೆ ಎಂದು ಪ್ರಶ್ನಿಸುವ ಮನೋಭಾವದಿಂದ ಅದರ ಪರಿಣಾಮ ದೊಡ್ಡದಾಗಿರುತ್ತದೆ.

ಹೊಟ್ಟೆಪಾಡಿಗೋಸ್ಕರ ನಮ್ಮ ರಾಜ್ಯಕ್ಕೆ ಬಂದಿರುವ ಉತ್ತರ ಭಾರತದ ಹಿಂದಿ ಭಾಷಿಕರು ಹತ್ತಾರು ವರ್ಷಗಳಾದರೂ ನಮ್ಮ ನೆಲದ ಭಾಷೆಯನ್ನು ಕಲಿಯದೇ ಇಲ್ಲೇ ವ್ಯಾಪಾರ ಮಾಡುತ್ತಾರೆ. ಕರ್ನಾಟಕದಲ್ಲಿ ಬದುಕು ಕಟ್ಟಿಕೊಂಡವರು ಕನ್ನಡ ಭಾಷೆಯನ್ನು ಕಲಿಯಬೇಕೆಂಬ ಹಂಬಲ ಹೊಂದದೇ ಇರುವುದು ವಿಪರ್ಯಾಸ. ಅನೇಕ ಕನ್ನಡಿಗರಿಗೆ ನಮ್ಮ ಭಾಷೆಯ ಬಗ್ಗೆ ಅಭಿಮಾನ ಕಡಿಮೆ. ವಿದ್ಯಾವಂತ ಸಮುದಾಯವೂ ಆ ಹಿಂದಿ ಭಾಷಿಕರನ್ನು ನೋಡಿ ಭಾಷಾಭಿಮಾನವನ್ನು ಕಲಿಯಬೇಕಿದೆ. ತಮಗೆ ಹಿಂದಿ ಭಾಷೆ ಗೊತ್ತು ಎಂದು ಅವರ ಮುಂದೆ ಪ್ರದರ್ಶನ ಮಾಡಿ ಮೆಚ್ಚಿಸಲು ನಮ್ಮ ಜನ ಪ್ರಯತ್ನಿಸುತ್ತಾರೆ. ಯಾಕೆ ಕನ್ನಡ ಕಲಿತಿಲ್ಲ ಎಂದು ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಕನ್ನಡ ಕಲಿಯಿರಿ ಎಂದು ತಾಕೀತು ಮಾಡುವ, ಕನ್ನಡ ಕಲಿಯದೇ ಇಲ್ಲದಿದ್ದರೆ ವ್ಯಾಪಾರ ಮಾಡುವುದಿಲ್ಲ ಎಂದು ಎಚ್ಚರಿಕೆ ನೀಡಲು ಮುಂದಾಗುವುದಿಲ್ಲ.

ಈ ರೀತಿಯ ಮನೋಭಾವದಿಂದಲೇ ಬೆಂಗಳೂರಿನಲ್ಲಿ ಅನ್ಯಭಾಷಿಕರ ದಬ್ಬಾಳಿಕೆ, ದಾಂಧಲೆ ಎಲ್ಲರಿಗೂ ತಿಳಿದೇ ಇದೆ. ಅದು ನಮ್ಮ ಊರುಗಳಿಗೂ ವಿಸ್ತರಿಸಲು ಬಹಳ ದಿನ ಬೇಕಿಲ್ಲ. 'ಯಾಕೆ' ಎಂದು ಪ್ರಶ್ನಿಸಿದರೆ ನಮ್ಮ ಭಾಷೆ ಉಳಿಯುತ್ತದೆ, ನಮಗ್ಯಾಕೆ ಎಂದು ಸುಮ್ಮನಾದರೆ ಭಾಷೆ ಕ್ರಮೇಣ ಅಳಿಯುತ್ತದೆ.



> **"ಮನುಷ್ಯ ಸಂಘಜೀವಿ. ಆದರೆ ಅನೇಕರು ಎಷ್ಟೇ ವರ್ಷಗಳು ನೆರೆಮನೆಯಲ್ಲಿ ಇದ್ದರೂ ಅಪರಿಚಿತರಂತೆ ಬದುಕುತ್ತಾರೆ. ಸಾಮಾನ್ಯ ಜನರ ವಿಚಾರ ನಮಗ್ಯಾಕೆ, ಅದರಿಂದ ನಮಗೇನು ಲಾಭ, ಇರಲಿ ಬಿಡಿ....... ಈ ರೀತಿ ಮನೋಭಾವಗಳಿಂದ ದುಷ್ಟರು, ದುರ್ಜನರು ತಮ್ಮ ಪ್ರಭಾವ ಬೀರುತ್ತಲೇ ಇರುತ್ತಾರೆ. ಅಮೇರಿಕಾದ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಅವರು ದುರ್ಜನರ ಹಿಂಸಾಚಾರಕ್ಕಿಂತ ಸಜ್ಜನರ ಮೌನ ಬಹಳ ಅಪಾಯಕಾರಿ ಎಂದು ಹೇಳಿರುವುದು ಮಾರ್ಮಿಕವಾಗಿದೆ. ಎಷ್ಟೋ ಜನ ನಮ್ಮ ಬುಡಕ್ಕೆ ಬಂದಿಲ್ಲವಲ್ಲ ಎಂದು ಭಾವಿಸುತ್ತಾರೆ. ಆದರೆ ದೇಶದ ಭದ್ರತೆಗೆ ಧಕ್ಕೆಯಾಗುವ ಸಂದರ್ಭದಲ್ಲಿ ಈ ಮನೋಭಾವ ತುಂಬಾ ಅಪಾಯಕಾರಿ. ನಮ್ಮ ನೆಲ, ಜಲ, ಭಾಷೆ, ಸಂಸ್ಕೃತಿಗೆ ಧಕ್ಕೆಯಾಗುವ ಸಂದರ್ಭದಲ್ಲಿ ಸಂಘಟಿತರಾಗಿ ದೇಶದ ಹಿತಕ್ಕಾಗಿ, ರಾಜ್ಯದ ಹಿತಕ್ಕಾಗಿ ಧ್ವನಿ ಎತ್ತ ಬೇಕಾದುದು ಪ್ರತಿಯೊಬ್ಬ ಪ್ರಜ್ಞಾವಂತ ಪ್ರಜೆಯ ಕರ್ತವ್ಯ ಎಂದು ಭಾವಿಸಬೇಕು.**

ಸಮಾಜದಲ್ಲಿ ನಾವು, ನಮ್ಮ ಕುಟುಂಬ ಸುರಕ್ಷತೆಯಿಂದ, ಸುಭದ್ರವಾಗಿದ್ದರೆ ಸಾಲದು. ನಮ್ಮ ಪರಿಚಿತರಿಗೆ, ನೆರೆಹೊರೆಯವರಿಗೆ, ನಮ್ಮ ನಾಡು, ದೇಶದವರಿಗೆ ಅನ್ಯರಿಂದ ತೊಂದರೆ, ಶೋಷಣೆಗಳಾದಾಗ ಅವರೊಂದಿಗೆ ಕೈಜೋಡಿಸಿ 'ಯಾಕೆ' ಎಂದು ತೊಂದರೆ ಕೊಟ್ಟವರನ್ನು ಒಗ್ಗಟ್ಟಿನಿಂದ ಕೇಳಿದರೆ, ಅವರಿಗೂ ಒಂದು ಭಯವಿರುತ್ತದೆ. ಈ ರೀತಿ ಪ್ರತಿರೋಧ ತೋರಿದರೆ ಮುಂದೆ ಅವರು ತೊಂದರೆ ಕೊಡಲು ಹೆದರುತ್ತಾರೆ. ತೊಂದರೆಯು ನಮ್ಮ ಮನಗೆ ಆಗಿಲ್ಲವಲ್ಲ ಎಂದು, ನಮಗ್ಯಾಕೆ ಬೇಕು ಊರಿನವರ ಉಸಾಬರಿ, ಸುಮ್ಮನೆ ಯಾಕೆ ತೊಂದರೆ ಎಂದರೆ ಅವರು ಕೆಟ್ಟಜನ ಮುಂದೆ ನಮ್ಮ ಮನೆಯ ಬಾಗಿಲನ್ನು ತಟ್ಟುತ್ತಾರೆ. ಆಗ ಬೊಬ್ಬೆ ಹೊಡೆದರೆ ಯಾರು ಸಹ ಬರುವುದಿಲ್ಲ.

ಬ್ರಿಟಿಷರು ನಮ್ಮ ದೇಶವನ್ನು ಆಳಿದ್ದು ಅವರ ಪ್ರಾಬಲ್ಯದಿಂದ ಅಷ್ಟೇ ಅಲ್ಲ, ನಮ್ಮ ದೇಶದ ಜನರ ದೌರ್ಬಲ್ಯದಿಂದ ಎಂಬುದ ಮರೆಯಬಾರದು. ನಮ್ಮ ಜನರ ನಮಗ್ಯಾಕೆ ಎಂಬ ಮನೋಭಾವದಿಂದ ನೂರಾರು ವರ್ಷಗಳ ಕಾಲ ಅವರಿಂದ ಆಳಿಸಿಕೊಳ್ಳುವ ನರಕ ಅನುಭವಿಸಬೇಕಾಯಿತು. ಅವರು ನಮ್ಮ ನೆಲಕ್ಕೆ ಕಾಲಿಟ್ಟಾಗಲೇ 'ಯಾಕೆ' ಎಂದು ಸಂಘಟಿತರಾಗಿ ಪ್ರಶ್ನಿಸಿದ್ದರೆ ಅವರು ನೆಲೆಯೂರದೆ ಕಾಲ್ಕಿಳುತ್ತಿದ್ದರು.

ಪ್ರಾಣಿ–ಪಕ್ಷಿಗಳು ತಮ್ಮದೇ ಆದ ವಲಯವನ್ನು ಗುರುತಿಸಿಕೊಂಡಿರುತ್ತವೆ. ತಮ್ಮ ವಲಯಕ್ಕೆ ಬೇರೆ ಪ್ರಾಣಿ–ಪಕ್ಷಿಗಳು ಬಂದರೆ ಪ್ರತಿರೋಧ ತೋರುತ್ತವೆ, ತಮ್ಮದೇ ಆದ ಭಾಷೆಯಲ್ಲಿ ಹಾಗೂ ಆಂಗಿಕ ಶೈಲಿಯಲ್ಲಿ ಪ್ರತಿಭಟಿಸುತ್ತವೆ. ಆದರೆ ಎಷ್ಟೋ ನಗರಗಳಲ್ಲಿ ಪಕ್ಕದ ಮನೆಗೆ ಭಯೋತ್ಪಾದಕರು ಬಂದು ಸೇರಿಕೊಂಡಿದ್ದರೂ, ಅವರ ಚಟುವಟಿಕೆಗಳು ಅನುಮಾನ ಮೂಡಿಸುವಂತೆ ಇದ್ದರೂ, ಅವರನ್ನು ಪ್ರಶ್ನಿಸುವುದಿರಲಿ ಪೊಲೀಸರಿಗೆ ಮಾಹಿತಿ ಕೊಡುವ ಗೊಡವೆಗೂ ಹೋಗುವುದಿಲ್ಲ. ನಮಗ್ಯಾಕೆ ಎಂಬ ಮನೋಭಾವ ಅಕ್ಕಪಕ್ಕದವರದ್ದು. ನಾಳೆ ದೊಡ್ಡ ಅನಾಹುತವಾದಾಗ ಹೀಗೆ ಅಂತ ಗೊತ್ತಿರಲಿಲ್ಲ ಎಂದು ಪೇಚಾಡುತ್ತಾರೆ. 'ಯಾಕೆ' ಎಂಬ ಮನೋಭಾವ ದೇಶದ ರಕ್ಷಣಾ ದೃಷ್ಟಿಯಿಂದ ಒಳ್ಳೆಯದು.

ಮನುಷ್ಯ ಸಂಘಜೀವಿ. ಆದರೆ ಅನೇಕರು ಎಷ್ಟೇ ವರ್ಷಗಳು ನೆರೆಮನೆಯಲ್ಲಿ ಇದ್ದರೂ ಅಪರಿಚಿತರಂತೆ ಬದುಕುತ್ತಾರೆ. ಸಾಮಾನ್ಯ ಜನರ ವಿಚಾರ ನಮಗ್ಯಾಕೆ, ಅದರಿಂದ ನಮಗೇನು ಲಾಭ, ಇರಲಿ ಬಿಡಿ.... ಈ ರೀತಿ ಮನೋಭಾವಗಳಿಂದ ದುಷ್ಟರು, ದುರ್ಜನರು ತಮ್ಮ ಪ್ರಭಾವ ಬೀರುತ್ತಲೇ ಇರುತ್ತಾರೆ. ಅಮೆರಿಕಾದ ಹೋರಾಟಗಾರ **ಮಾರ್ಟಿನ್ ಲೂಥರ್ ಕಿಂಗ್ ಅವರು ದುರ್ಜನರ ಹಿಂಸಾಚಾರಕ್ಕಿಂತ ಸಜ್ಜನರ ಮೌನ ಬಹಳ ಅಪಾಯಕಾರಿ** ಎಂದು ಹೇಳಿರುವುದು ಮಾರ್ಮಿಕವಾಗಿದೆ.

ಎಷ್ಟೋ ಜನ ನಮ್ಮ ಬುಡಕ್ಕೆ ಬಂದಿಲ್ಲವಲ್ಲ ಎಂದು ಭಾವಿಸುತ್ತಾರೆ. ಆದರೆ ದೇಶದ ಭದ್ರತೆಗೆ ಧಕ್ಕೆಯಾಗುವ ಸಂದರ್ಭದಲ್ಲಿ ಈ ಮನೋಭಾವ ತುಂಬಾ ಅಪಾಯಕಾರಿ. ನಮ್ಮ ನೆಲ, ಜಲ, ಭಾಷೆ, ಸಂಸ್ಕೃತಿಗೆ ಧಕ್ಕೆಯಾಗುವ ಸಂದರ್ಭದಲ್ಲಿ ಸಂಘಟಿತರಾಗಿ ದೇಶದ ಹಿತಕ್ಕಾಗಿ, ರಾಜ್ಯದ ಹಿತಕ್ಕಾಗಿ ಧ್ವನಿ ಎತ್ತಬೇಕಾದುದು ಪ್ರತಿಯೊಬ್ಬ ಪ್ರಜ್ಞಾವಂತ ಪ್ರಜೆಯ ಕರ್ತವ್ಯ ಎಂದು ಭಾವಿಸಬೇಕು.

ಎಷ್ಟೋ ಗ್ರಾಮ, ಪಟ್ಟಣ, ನಗರಗಳಲ್ಲಿ ನಿಯಮ ಮೀರಿ ಪ್ರಾರಂಭಿಸಲು ಹೊರಟ ಸಾರಾಯಿ ಅಂಗಡಿ/ವೈನ್ ಶಾಪ್‌ಗಳ ವಿರುದ್ಧವಾಗಿ ಸ್ಥಳೀಯ ಸಾರ್ವಜನಿಕರು/ಮಹಿಳೆಯರು ಪ್ರಶ್ನಿಸಿ ಅಂಗಡಿಗಳನ್ನು ಬಂದ್ ಮಾಡಿಸಿರುವ ಉದಾಹರಣೆಗಳು ಅನೇಕ ಇವೆ. ಈ ರೀತಿಯ ಹೋರಾಟ ಸಮಾಜದಲ್ಲಿನ ಯಾವುದೇ ದುಷ್ಟಶಕ್ತಿಯ ವಿರುದ್ಧ ಆಗಬೇಕು. ಕೆಟ್ಟ ಬೆಳವಣಿಗಳನ್ನು ಸಣ್ಣದರಲ್ಲಿಯೇ ಚಿವುಟಿ ಹಾಕಿದರೆ ಎಲ್ಲರಿಗೂ ಕ್ಷೇಮ. ಅದರಿಂದ ಇಂದು ನಮಗೇನು ತೊಂದರೆ ಇಲ್ಲವಲ್ಲ ಎಂದರೆ, ಮುಂದೊಂದು ದಿನ ದೊಡ್ಡ ತೊಂದರೆಯನ್ನು ಎದುರಿಸಬೇಕಾಗುತ್ತದೆ. ಹಾಗೆ ಅದರಿಂದ ಮುಕ್ತಿಯನ್ನು ಸಹ ಪಡೆಯಲು ಸಾಧ್ಯವಿಲ್ಲ.


ಬಡಾವಣೆ/ಊರಿನ ಸಮಸ್ಯೆಗಳ ಕುರಿತಾಗಿ ಹೋರಾಟ ಮಾಡಬೇಕಾದಾಗಲೂ ನಿವಾಸಿಗಳಲ್ಲಿ ಅನೇಕರಿಗೆ ತಟಸ್ಥ ಮನೋಭಾವ ಇರುತ್ತದೆ. ಊರಿನ ಹಿತದೃಷ್ಟಿಯಿಂದ ಹೋರಾಟಕ್ಕೆ ಬರದೆ ಸಮಸ್ಯೆಯಿಂದ ನಮಗೇನು ನಷ್ಟವಿಲ್ಲ, ಹೋರಾಟದಿಂದ ನಮಗೇನು ಲಾಭವಿಲ್ಲ ಎಂದು ಭಾವಿಸಿ ದೂರ ಉಳಿಯುತ್ತಾರೆ. ಇವರು ಎಷ್ಟೇ ವಿದ್ಯಾವಂತರಾಗಿದ್ದರೂ ನಾಗರಿಕ ಪ್ರಜ್ಞೆ ಇಲ್ಲದೇ ಇರುವುದು ದುರಾದೃಷ್ಟಕರ. ತಮ್ಮ ಬಡಾವಣೆಯ ರಸ್ತೆಯೊಂದರಲ್ಲಿ ಯಾರೋ ತಂದು ಕಸ ಹಾಕುತ್ತಿದ್ದಾರೆ ಎಂದರೆ, ಅದನ್ನು ಕಂಡ ಆ ಬಡಾವಣೆಯ ಪ್ರತಿಯೊಬ್ಬರು ಅದನ್ನು ಪ್ರಶ್ನಿಸುವಂತಾಗಬೇಕು. ನಮಗ್ಯಾಕೆ ಎಂದರೆ ನಾಳೆ ಆ ಕಸ ಇಡೀ ಬಡಾವಣೆಯ ರಸ್ತೆಗಳಿಗೆ ವಿಸ್ತರಿಸಬಹುದು. ಯಾಕೆ? ಎಂದರೆ ಕಸಮುಕ್ತವಾಗಿರಬಹುದು.

ಇನ್ನು ಸ್ನೇಹ ಸಂಬಂಧಗಳಲ್ಲಿ ನಮ್ಮ ಹತ್ತಿರದವರು ಕೆಲವು ಪರೋಕ್ಷ ಸಂಗತಿಗಳನ್ನು ಹೇರಿ ನೆಮ್ಮದಿ ಕಸಿಯುತ್ತಾರೆ. ಪರಿಚಯವನ್ನು ಎನ್‌ಕ್ಯಾಶ್ ಮಾಡಿಕೊಂಡು, ಒಳ್ಳೆಯತನವನ್ನೇ ದುರ್ಬಳಕೆ ಮಾಡಿಕೊಂಡು ಅನೇಕ ಖಾಸಗಿ ವಿಷಯಗಳಿಗೆ ಮೂಗು ತೂರಿಸುತ್ತಾರೆ. ಎಲ್ಲದಕ್ಕೂ ಒಂದು ಗಡಿ ರೇಖೆ ಹಾಕುವಂತೆ ಇದಕ್ಕೂ ಒಂದು ಗಡಿರೇಖೆ ಹಾಕಬೇಕು. ಆಗ ಅನಾವಶ್ಯಕ ಹೇರಿಕೆಗಳು ಕಡಿಮೆಯಾಗುತ್ತವೆ. ನೆಮ್ಮದಿಯಾಗಿರಬಹುದು.

ಯಾಕೆ ಎಂಬುದು ನಾಡು, ನುಡಿ, ನೆಲ, ಜಲ ಈ ವಿಚಾರಕ್ಕೆ ಮಾತ್ರವಲ್ಲ. ಮನೆಯಲ್ಲಿ ಕೌಟುಂಬಿಕ ವ್ಯವಸ್ಥೆ ಸುಭದ್ರವಾಗಿರಲು ಸಹ ಯಾಕೆ? ಎಂದು ಪ್ರಶ್ನಿಸುವುದು ಅವಶ್ಯ. ಮನೆಯಲ್ಲಿ ಪ್ರಾಯಕ್ಕೆ ಬಂದ ಮಕ್ಕಳ ವರ್ತನೆ, ಚಟುವಟಿಕೆ, ನಡವಳಿಕೆಗಳಲ್ಲಿ ಬದಲಾವಣೆಯಾದಾಗ ಯಾಕೆ? ಎಂದು ಪ್ರಶ್ನಿಸಬೇಕು. ಕೇಳಿದರೆ ಎಲ್ಲಿ ಮಕ್ಕಳು ಬೇಜಾರು ಮಾಡಿಕೊಳ್ಳುತ್ತಾರೆ ಎಂದು ಭಾವಿಸಿದರೆ, ಮುಂದೆ ದೊಡ್ಡ ಆಪತ್ತುಗಳನ್ನು ಎದುರಿಸಲು ಸಿದ್ಧರಾಗಿರಬೇಕಾಗುತ್ತದೆ.

ಮಕ್ಕಳ ವಿಚಾರದಲ್ಲಿ ಯಾವುದೇ ಕಾರಣಕ್ಕೂ ನಮಗ್ಯಾಕೆ ಎಂಬ ಮನೋಭಾವ ಸಲ್ಲ. ಅವರನ್ನು ಉತ್ತಮ ರೀತಿಯಲ್ಲಿ ಮಾತನಾಡಿಸುತ್ತಾ ಒಳ್ಳೆಯ ರೀತಿಯಲ್ಲಿ ಈ ರೀತಿ 'ಯಾಕೆ' ನಡೆದುಕೊಳ್ಳುತ್ತಿರುವೆ ಎಂದು ಪ್ರಶ್ನಿಸಿ, ಅವರ ಚಟುವಟಿಕೆಗಳಿಂದಾಗುವ ದುಷ್ಪರಿಣಾಮಗಳ ಕುರಿತು ಮನವರಿಕೆ ಮಾಡಿಕೊಟ್ಟರೆ ಮಕ್ಕಳು ಸರಿದಾರಿಯಲ್ಲಿ ನಡೆಯುತ್ತಾರೆ. 'ಯಾಕೆ' ಎಂದು ಮೊದಲಿಗೆ ಪ್ರಶ್ನಿಸಿದರೆ ಮನೆ ಸ್ವರ್ಗವಾಗಿರುತ್ತದೆ, ನಮಗ್ಯಾಕೆ ಎಂದು ಸುಮ್ಮನಿದ್ದರೆ ಮನೆಯೇ ನಾಳೆ ನರಕವಾಗುತ್ತದೆ.

ಹೂರಣ: ಯಾಕೆ ಎಂಬುದು ವಿವೇಕ;
ನಮಗ್ಯಾಕೆ ಎಂಬುದು ಅವಿವೇಕ !



ಮೈಸೂರು ಆಕಾಶವಾಣಿಯ ಅಸ್ತಿತ್ವದ ಅಕ್ಷರಶಃ ಸಹಭಾಗಿ ಕಮಲಾ ಗೋಪಾಲಸ್ವಾಮಿ

ಮೈಸೂರಿನಲ್ಲಿ ಜೀವಿಸಿದ್ದ, ಓಡಾಡಿದವರ, ಮೈಸೂರನ್ನು ಕಾರ್ಯಕ್ಷೇತ್ರ ಮಾಡಿಕೊಂಡಿದ್ದವರ ಜೀವನವನ್ನು, ಮಾಡಿದ ಕೆಲಸಗಳನ್ನು ದಾಖಲಿಸುವುದೆಂದರೆ, ಬಹುತೇಕ ಅದು ಕೇವಲ ವ್ಯಕ್ತಿಗತ ಇತಿಹಾಸವಾಗಿ ಉಳಿಯುವುದಿಲ್ಲ. ಅದು ಮೈಸೂರಿನ ಸಾಂಸ್ಕೃತಿಕ ಚರಿತ್ರೆಯ ಪುಟಗಳಲ್ಲಿ ಜಾಗ ಪಡೆಯುತ್ತದೆ. ತನ್ಮೂಲಕ ಸಹಜವಾಗಿಯೇ ಕನ್ನಡ ನಾಡಿನ ಇತಿಹಾಸದ ಭಾಗವಾಗಿಬಿಡುತ್ತದೆ.

ಆಧುನಿಕ ಮೈಸೂರಿನ ಇತಿಹಾಸದ ಸುವರ್ಣ ಕಾಲದಲ್ಲಿ ಜೀವಿಸಿದ್ದ ಅಂತಹ ಮಹನೀಯ ಮಹಿಳೆಯೊಬ್ಬರ ಜೀವನದ ಪರಿಚಯ ಮಾಡಿಸುವಂತಹ ಪುಟ. ಆದರೆ ಮಹತ್ವವಾದ ಪುಸ್ತಕವೊಂದು ಇನ್ನೇನು ಓದುಗರ ಕೈಸೇರಲಿದೆ.

ಮೈಸೂರು ಆಕಾಶವಾಣಿಯನ್ನು ಕಟ್ಟಿ ಬೆಳೆಸುವಲ್ಲಿ ಗೋಪಾಲಸ್ವಾಮಿಯವರಿಗೆ ಅಕ್ಷರಶಃ ಬೆನ್ನೆಲುಬಾಗಿ ನಿಂತದ್ದು ಅವರ ಪತ್ನಿ ಕಮಲಾ ಗೋಪಾಲಸ್ವಾಮಿ. ಅವರ ಜೀವನ ಪರಿಚಯಿಸುವ ಪುಸ್ತಕ ಇದೇ ಜನವರಿ 26ಕ್ಕೆ ಬಿಡುಗಡೆಯಾಗಲಿದೆ. ಗೋಪಾಲಸ್ವಾಮಿ ಅವರ ಪುತ್ರ ಎಂ ಜಿ ರಜನೀಕಾಂತ್ ಅವರೇ ಬಿಡುಗಡೆ ಮಾಡಲಿರುವ ಪುಸ್ತಕದ ಶೀರ್ಷಿಕೆ, 'ಧೀಮಂತ ಮಹಿಳೆ ಕಮಲಾ ಗೋಪಾಲಸ್ವಾಮಿ'.

ಪ್ರತಿ ಯಶಸ್ವಿ ಪುರುಷನ ಹಿಂದೆ ಅವನನ್ನು ಬೆಂಬಲಿಸುವ ಸ್ತ್ರೀ ಒಬ್ಬಳಿರುತ್ತಾಳೆ ಎಂಬ ಮಾತು ನಿಮಗೆ ಈಗ ತೀರಾ ಹಳೆಯ ಉಕ್ತಿ ಎನಿಸಬಹುದೇನೋ. ಆದರೆ ಹಾಗೆ ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆ ನಿಲ್ಲುವ ಪರಿಪಾಠವೂ ಅಷ್ಟೇ ಪುರಾತನವಾದುದು. ಇಂದಿಗೂ ಅನುಚಾನವಾಗಿ ನಡೆದುಕೊಂಡು ಬಂದಿದೆ, ಮುಂದೆಯೂ ಬರುತ್ತಲಿರುತ್ತದೆ.

ಆಕಾಶವಾಣಿಯಂತಹ ಒಂದು ಬೃಹತ್ ಸಾಂಸ್ಕೃತಿಕ ಸಂಸ್ಥೆ ಕಟ್ಟುವ ಗೋಪಾಲಸ್ವಾಮಿಯವರ ಎಲ್ಲಾ ಕನಸುಗಳಿಗೆ, ಸಿದ್ಧತೆಗಳಿಗೆ, ನನಸಾದ ನಂತರದ ಸಂಭ್ರಮದ ಗಳಿಗೆಗಳಿಗೆ, ತದನಂತರದ ಹೇರಳ ಕೆಲಸ ಕಾರ್ಯಗಳಿಗೆ ಸಾಕ್ಷಿಯಾದವರು, ಬೆನ್ನೆಲುಬಾದವರು ಕಮಲಾ ಅವರು. ಅದರ ಚಿತ್ರಣವನ್ನು ಪುಸ್ತಕ ಓದುಗರ ಮುಂದೆ ತೆರೆದಿಡಲಿದೆ. ಅವರ ಅನುರೂಪ ದಾಂಪತ್ಯದ ಸವಿ ಓದುಗರಿಗೆ ಮಾದರಿಯಾಗಬಲ್ಲದು.

ಕಮಲಾ ಅವರ ವೈಯಕ್ತಿಕ ವಿವರಗಳು, ವಂಶಾವಳಿ, ವಂಶವೃಕ್ಷವನ್ನೇ ಲೇಖಕಿ ಸಂಗ್ರಹಿಸಿ ನೀಡಿದ್ದಾರೆ. ಹುಟ್ಟಿದ ಮನೆ, ಸೇರಿದ ಮನೆ ಎರಡೂ ಸಮೃದ್ಧವಾಗಿ ಇದ್ದುದ್ದರಿಂದ ಹಣ ಕಾಸಿನ ಜಂಜಾಟದ ಪರಿಚಯವೇ ಇರಲಿಲ್ಲ ಕಮಲಾ ಅವರಿಗೆ. ದುರಾದೃಷ್ಟವಶಾತ್ ಕಮಲಾ 45ರ ಚಿಕ್ಕ ವಯಸ್ಸಿನಲ್ಲಿಯೇ ಗೋಪಾಲಸ್ವಾಮಿ ಅವರನ್ನು ಕಳೆದುಕೊಂಡು ನಂತರ ತಮ್ಮ 4 ಚಿಕ್ಕ ಮಕ್ಕಳು ಮಾತ್ರವಲ್ಲದೆ, ಮನೆಮಂದಿಯ ಜವಾಬ್ದಾರಿಯನ್ನು ಸಂಯಮದಿಂದ ನಿಭಾಯಿಸಿದ್ದನ್ನು ಓದಿದರೆ, ಮಹಿಳೆಯರು ಸ್ಫೂರ್ತಿಗೊಳ್ಳುವುದರಲ್ಲಿ ಅನುಮಾನವೇ ಇಲ್ಲ.


ವಿಜಯಾಹರನ್

ಕಮಲಾ ಮತ್ತು ಗೋಪಾಲಸ್ವಾಮಿ ದಂಪತಿ ಹಲವು ಮೊದಲುಗಳಿಗೆ ಕಾರಣರು. ಬಹುಶಃ ಹೆಚ್ಚಿನ ಜನರಿಗೆ ಗೊತ್ತಿರದ ಆ ಸ್ವಾರಸ್ಯಕರ ವಿಚಾರಗಳ ಹೂರಣ ಪುಸ್ತಕದಲ್ಲಿದೆ. ಅದನ್ನು ಪುಸ್ತಕ ಪ್ರಿಯರು ಓದಿಯೇ ಅಚ್ಚರಿ ಅನುಭವಿಸಬೇಕು. ಪುಸ್ತಕ ಕಮಲಾ ಗೋಪಾಲಸ್ವಾಮಿ ಅವರ ಕುರಿತು ಹೇಳುತ್ತಲೇ, ಅವರ ಗಟ್ಟಿ ವ್ಯಕ್ತಿತ್ವದ ಹಿಂದಿದ್ದ ಅವರ ಅತ್ತೆ ಮತ್ತು ಗೋಪಾಲಸ್ವಾಮಿ ಅವರ ಬೆಂಬಲದ ಕುರಿತು ಹೇಳುತ್ತದೆ. 20ನೇ ಶತಮಾನದಲ್ಲಿಯೇ ಪ್ರಗತಿಪರರಾಗಿದ್ದ ರಾಜಮ್ಮಾಳ್ ಅವರ ಮೇರು ವ್ಯಕ್ತಿತ್ವದ ಪರಿಚಯವನ್ನೂ ನೀಡುತ್ತದೆ.

ಕಮಲಾ ಅವರ ಸಹೃದಯತೆ, ಹೃದಯವೈಶಾಲ್ಯ, ಪರೋಪಕಾರ ಗುಣ, ದಿಟ್ಟತೆ, ಸ್ಥೈರ್ಯ, ಸ್ನೇಹಪರತೆ, ಧಾರ್ಮಿಕತೆ, ವೈಚಾರಿಕತೆ, ಸೇವಾ ಮನೋಭಾವ, ಸಮಚಿತ್ತಗಳಿಂದ ಕೂಡಿದ ವ್ಯಕ್ತಿತ್ವದ ಚಿತ್ರಣ ಮತ್ತು ಹಲ–ಕೆಲವು ಘಟನೆಗಳ ಮೆಲುಕು ಹೃದ್ಯವೆನಿಸುತ್ತವೆ. ಪುಸ್ತಕ ಗಾತ್ರದಲ್ಲಿ ಸಣ್ಣದಾದರೂ ಕಮಲಾ ಅವರ ಗಂಭೀರ ಆದರೆ ಮಾನವೀಯ ವ್ಯಕ್ತಿತ್ವವನ್ನು ರೂಪಿಸುವ ಹಲವು ಘಟನಾವಳಿಗಳೊಂದಿಗೆ ಓದಿಸಿಕೊಂಡುಹೋಗುತ್ತದೆ.

ಲೇಖಕಿ ವಿಜಯಾಹರನ್ ಅವರು ಮೈಸೂರು ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಕೆಲಸ ಆರಂಭಿಸಿ, ಉಪ ಮಹಾನಿರ್ದೇಶಕರಾಗಿ ನಿವೃತ್ತರಾದವರು. ಉದ್ಘೋಷಕಿಯ ಹುದ್ದೆಯನ್ನು ಅತ್ಯಂತ ಪ್ರೀತಿಸಿದ ವಿಜಯಾ ಹರನ್ ಆಕಾಶವಾಣಿಯ ಮೊದಲ ಉದ್ಘೋಷಕಿಯ ಜೀವನವನ್ನು ಅಚ್ಚುಕಟ್ಟಾಗಿ ನಿರೂಪಿಸಿರುವಲ್ಲಿ ಆಪ್ತತೆ ಎದ್ದು ಕಾಣುತ್ತದೆ. ಕಮಲಾ ಗೋಪಾಲಸ್ವಾಮಿ ಅವರ ವಿಶಾಲ ವ್ಯಕ್ತಿತ್ವಕ್ಕೆ ಚಂದದ ಪುಸ್ತಕ ಚೌಕಟ್ಟನ್ನು ಲೇಖಕಿ ಹಾಕಿದ್ದಾರೆ.

ಕಮಲಾ ಗೋಪಾಲಸ್ವಾಮಿ ಅವರಿಗೆ ಸಂಬಂಧಿಸಿದ ಕೆಲವು ನೆನಪುಗಳು, ಬೇರೆ ಬೇರೆ ಸಂದರ್ಭದಲ್ಲಿ ನಡೆಸಿರುವ ಸಂದರ್ಶನಗಳನ್ನು ಕ್ಯೂ ಆರ್ ಕೋಡ್‌ಗೆ ಅಳವಡಿಸಿ ಅದರ ಲಿಂಕ್ ನೀಡಿರುವುದು ಕಮಲಾ ಅವರ ಬಗ್ಗೆ ಸಮಗ್ರ ಚಿತ್ರಣವನ್ನು ನೀಡುವಲ್ಲಿ ಸಹಾಯಕವಾಗಿದೆ. ಇದೇ 26ರಂದು, ಡಾ.ಎಂ.ವಿ.ಗೋಪಾಲಸ್ವಾಮಿ ಶಿಶುವಿಹಾರದ ಆವರಣದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಪುಸ್ತಕ ಬಿಡುಗಡೆಗೆ ನಿಮಗೆಲ್ಲಾ ಸ್ವಾಗತ.



ನಿವೇದಿತಾ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಕಳೆದ ಮೂರು ವರ್ಷದಲ್ಲಿ 1901 ಅಪಘಾತಗಳು; 262 ಮಂದಿ ಸಾವು

ಮೈಸೂರು, ಜ.18(ಆರ್‌ಕೆ)– ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275 ರಲ್ಲಿ 2023ರಿಂದ 2025 ರವರೆಗೆ 1901 ಅಪಘಾತಗಳು ಸಂಭವಿಸಿದ್ದು, 262 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಂಕಿ–ಅಂಶಗಳು ತಿಳಿಸಿವೆ.

ಆ ಪೈಕಿ ನಿಡಘಟ್ಟದಿಂದ ಮೈಸೂರು ವರೆಗೆ 59 ಕಿ.ಮೀ. ಅಂತರ ಹಾಗೂ ಬೆಂಗಳೂರಿನಿಂದ ನಿಡಘಟ್ಟವರೆಗೆ 61 ಕಿ.ಮೀ. ಅಂತರದ ವಾಹನ ಸಂಚಾರ ಕುರಿತಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ನೀಡಿರುವ ಮಾಹಿತಿಯಲ್ಲಿ ಈ ಅಂಕಿ–ಅಂಶಗಳು ಬೆಳಕಿಗೆ ಬಂದಿವೆ. ಕಳೆದ ಮೂರು ವರ್ಷದ ಅವಧಿಯಲ್ಲಿ ಈ ಮಾರ್ಗದಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 262 ಮಂದಿ ಸಾವನ್ನಪ್ಪಿದ್ದು ಇದು ವರ್ಷಕ್ಕೆ ಸರಾಸರಿ 87 ಮಂದಿ ಮೃತಪಟ್ಟಂತಾಗಿದೆ.

ಅದರಲ್ಲಿ 351 ಮಂದಿ ಗಾಯಗೊಂಡಿದ್ದರೆ, ಹಲವರು ಶಾಶ್ವತ ಅಂಗವಿಕಲರಾಗಿದ್ದಾರೆ. 1365 ಮಂದಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, 846 ಮಂದಿ ಯಾವುದೇ ಗಾಯಗಳಿಲ್ಲದೇ ಪಾರಾಗಿದ್ದಾರೆ. ವಿಶೇಷವೆಂದರೆ ರಸ್ತೆ ಅಪಘಾತಗಳ ಹೊರತಾಗಿಯೂ ಬೆಂಗಳೂರು–ನಿಡಘಟ್ಟ ನಡುವೆ ಅತಿ ಕಡಿಮೆ ಸಾವುಗಳಾಗಿವೆ. ಅಲ್ಲಿ ತುರ್ತು ಚಿಕಿತ್ಸೆಗೆ ಆಸ್ಪತ್ರೆಗಳು ಮತ್ತು ಅಪಘಾತ ಆರೈಕೆ ಕೇಂದ್ರಗಳಿರುವುದು ಕಾರಣ ಎಂದು ತಿಳಿದು ಬಂದಿದೆ.

ನಿಡಘಟ್ಟ ಮೈಸೂರು ನಡುವೆ ಸೀಮಿತ ಸಂಖ್ಯೆಯ ಆಂಬುಲೆನ್ಸ್‌ಗಳು ಲಭ್ಯವಾಗಿರುವುದರಿಂದ ತುರ್ತು ಚಿಕಿತ್ಸೆ ಅವಕಾಶವಾಗಿಲ್ಲ. ಮಾರ್ಗದುದ್ದಕ್ಕೂ ಇರುವ ಪಟ್ಟಣಗಳು, ನಗರಗಳು ಹೆದ್ದಾರಿಯಿಂದ ತುಸು ದೂರದಲ್ಲಿರುವ ಕಾರಣ ಆಂಬುಲೆನ್ಸ್‌ಗಳು ತಕ್ಷಣ ಅಪಘಾತ ನಡೆದು ಸ್ಥಳಕ್ಕೆ ಧಾವಿಸಲು ಸಾಧ್ಯವಾಗದಿರುವುದು ಸಾವುಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ ಎಂಬುದು ಈ ಅಂಕಿ–ಅಂಶಗಳಿಂದ ತಿಳಿದುಬಂದಿದೆ.



ಅನಧಿಕೃತ ಪ್ರವೇಶದ ವಿರುದ್ಧ ಕಠಿಣ ಕ್ರಮ: ಡಿಐಜಿಪಿ

ಮೈಸೂರು, ಜ.18 (ಆರ್‌ಕೆ)– ಮಂಡ್ಯ ಮತ್ತು ರಾಮನಗರದ ಎಸ್‌ಪಿಗಳಿಗೆ ಹೆದ್ದಾರಿಯ ಪ್ರವೇಶ ಹಾಗೂ ನಿರ್ಗಮನ ಸ್ಥಳಗಳಲ್ಲಿ ಸಂಚಾರ ದಟ್ಟಣೆಯ ಸಮಯದಲ್ಲಿ ಸಿಬ್ಬಂದಿಯನ್ನು ನಿಯೋಜಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಹಾಗೂ ಡಿಐಜಿಪಿ ಕೆ.ಪರಶುರಾಮ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು, ನಿರಂತರ ಗಸ್ತು ಜಾರಿಗೊಳಿಸುವಿಕೆಯೊಂದಿಗೆ, ವಾಹನಗಳ ಅನಧಿಕೃತ ಪ್ರವೇಶಗಳು ಮತ್ತು ತಪ್ಪು ಬದಿಯ ಪ್ರವೇಶವನ್ನು ತಡೆಯುತ್ತದೆ. ಸುರಕ್ಷತಾ ಕ್ರಮಗಳ ಈ ಮರು ಮೌಲ್ಯಮಾಪನವು ಈಗಾಗಲೇ ಅನುಷ್ಠಾನದಲ್ಲಿದೆ. 15 ದಿನಗಳಲ್ಲಿ ಎಸ್‌ಪಿಗಳಿಂದ ವರದಿಗಳನ್ನು ಪಡೆಯುತ್ತೇವೆ ಎಂದರು.

ನಿಡಘಟ್ಟ–ಮೈಸೂರು ನಡುವೆ ತೀವ್ರತರ ಅಪಘಾತ ವಲಯ

2023ರಲ್ಲಿ ಅತಿ ಹೆಚ್ಚು ಅಪಘಾತಗಳು ಸಂಭವಿಸಿದ್ದು ಆ ವರ್ಷ 797 ಅಪಘಾತಗಳಲ್ಲಿ 149 ಮಂದಿ ಸಾವನ್ನಪ್ಪಿದ್ದಾರೆ. 2024ರಲ್ಲಿ 548 ಅಪಘಾತಗಳ ಪೈಕಿ 56 ಮಂದಿ ಸಾವನ್ನಪ್ಪಿದ್ದರೆ, 2025ರಲ್ಲಿ 556 ಅಪಘಾತಗಳು ಸಂಭವಿಸಿ 57 ಮಂದಿ ಸಾವನ್ನಪ್ಪಿದ್ದಾರೆ. ಅದೇ ವರ್ಷ ನಿಡಘಟ್ಟ–ಮೈಸೂರು ಮಾರ್ಗದಲ್ಲಿ ಸಂಭವಿಸಿದ ಅಪಘಾತದಲ್ಲಿ 38 ಮಂದಿ ಸಾವನ್ನಪ್ಪಿದ್ದು 101 ಮಂದಿ ತೀವ್ರ ಗಾಯ ಹಾಗೂ 168 ಮಂದಿಗೆ ಸಣ್ಣ–ಪುಟ್ಟ ಗಾಯಗಳಾಗಿರುವುದು ವರದಿ ಆಗಿದೆ.

ವೈದ್ಯಕೀಯ ಆರೈಕೆ ಕೇಂದ್ರಗಳ ಕೊರತೆಯು ಸಾವುಗಳ ಸಂಖ್ಯೆ ಹೆಚ್ಚಾಗಲು ಪ್ರಮುಖ ಕಾರಣವಾಗಿದ್ದು, ಅಜಾಗರೂಕ ಚಾಲನೆ, ಅತಿ ವೇಗ ಮತ್ತು ಲೇನ್ ಶಿಸ್ತು ಕಾಪಾಡದಿರುವುದು ಅಪಘಾತಗಳಿಗೆ ಕಾರಣವಾಗಿದೆ. ಮೈಸೂರಿನಿಂದ ಬೆಂಗಳೂರಿಗೆ ಒಟ್ಟು 120 ಕಿ.ಮೀ. ಅಂತರವಿರುವ ರಾಷ್ಟ್ರೀಯ ಹೆದ್ದಾರಿಯು ಮೈಸೂರು (10 ರಿಂದ 12 ಕಿ.ಮೀ), ಮಂಡ್ಯ (60 ರಿಂದ 66 ಕಿ.ಮೀ), ರಾಮನಗರ ಅಥವಾ ಬೆಂಗಳೂರು ದಕ್ಷಿಣ ಜಿಲ್ಲೆ (30 ಕಿ.ಮೀ) ಮತ್ತು ಬೆಂಗಳೂರು (10–12 ಕಿ.ಮೀ) ಜಿಲ್ಲೆಗಳ ಸರಹದ್ದು ಹೊಂದಿದೆ.

ಗಾಯಾಳುಗಳಿಗೆ ಚಿಕಿತ್ಸೆ ನೀಡಲೆಂದು ಮಂಡ್ಯದಲ್ಲಿ ಅಪಘಾತ ಆರೈಕೆ ಕೇಂದ್ರ ಸ್ಥಾಪಿಸಬೇಕೆಂಬ ಬಹುದಿನಗಳ ಪ್ರಸ್ತಾವನೆ ಕೇವಲ ಕಾಗದದಲ್ಲಿ ಮಾತ್ರ ಉಳಿದಿದೆ. 2023ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮಂಡ್ಯ ಜಿಲ್ಲಾಡಳಿತದ ಮೂಲಕ 100 ಹಾಸಿಗೆಗಳ ಸಾಮರ್ಥ್ಯದ ಆರೈಕೆ ಕೇಂದ್ರವನ್ನು ನಿರ್ಮಿಸುವಂತೆ ಕೋರಿ NHAIಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತಾದರೂ ಯೋಜನೆ ಅನುಷ್ಠಾನಗೊಂಡಿಲ್ಲ.

ಹಿರಿಯ ಕಾಂಗ್ರೆಸ್ ಮುಖಂಡ ನರಸೇಗೌಡರ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶನಿವಾರ ನಿಧನರಾದ ಮೈಸೂರಿನ ಹಿರಿಯ ಕಾಂಗ್ರೆಸ್ ಮುಖಂಡ, ತಮ್ಮ ಆತ್ಮೀಯ ಗೆಳೆಯ ನರಸೇಗೌಡರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಮೈಸೂರು, ಜ.18(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶನಿವಾರ ನಿಧನರಾದ ಮೈಸೂರಿನ ಹಿರಿಯ ಕಾಂಗ್ರೆಸ್ ಮುಖಂಡ, ತಮ್ಮ ಆತ್ಮೀಯ ಗೆಳೆಯ ನರಸೇಗೌಡರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಮೈಸೂರಿನ ಹೊಸಹುಂಡಿ ಗ್ರಾಮದ ನಿವಾಸದಲ್ಲಿ ಅಂತಿಮ ದರ್ಶನ ಪಡೆದ ಮುಖ್ಯಮಂತ್ರಿಗಳು ನರಸೇಗೌಡರ ಪುತ್ರ ಡಾ.ಎನ್.ವಿಜಯ್ ಚೆಲುವರಾಜು ಸೇರಿದಂತೆ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಈ ವೇಳೆ ಸಚಿವರಾದ ಡಾ.ಹೆಚ್.ಸಿ. ಮಹಾದೇವಪ್ಪ, ಕೆ.ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ. ರೇವಣ್ಣ ಸೇರಿದಂತೆ ಮೈಸೂರಿನ ಹಿರಿಯ ಕಾಂಗ್ರೆಸ್ ಮುಖಂಡರೂ, ತಮ್ಮ ಆತ್ಮೀಯರೂ ಆಗಿದ್ದ ದಿವಂಗತ ನರಸೇಗೌಡರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ನಮಿಸಿದರು. ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿ ನೀಡಲಿ ಎಂದು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕೆಪಿಸಿಸಿ ಸದಸ್ಯರಾಗಿದ್ದ ನರಸೇಗೌಡರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಮೈಸೂರಿನ ಕುವೆಂಪುನಗರದ ಭಾನವಿ ಆಸ್ಪತ್ರೆ, ಲಲಿತಾದ್ರಿಪುರದ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಭಾನವಿ ಕಲ್ಯಾಣ ಮಂಟಪ ನಿರ್ಮಿಸಿದ್ದರು. ಮೈಸೂರು ತಾಲೂಕು ಹೊಸಹುಂಡಿ ಸ್ವಗ್ರಾಮದ ಜಮೀನಿನಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ವೈ.ವಿಜಯೇಂದ್ರಗೆ ಸ್ವಾಗತ...



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮಾಜಿ ಸಂಸದ ಪ್ರತಾಪಸಿಂಹ ಸ್ವಾಗತಿಸಿದರು. ಈ ವೇಳೆ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಬಿಜೆಪಿ ಯುವಮೋರ್ಚಾ ಮಾಜಿ ಅಧ್ಯಕ್ಷ ಎಂ.ಜೆ. ಕಿರಣ್‌ಗೌಡ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಅನುಜ್ ಗಿರಿಧರ್, ಮಂಜುಗೌಡ, ಬಂಗಾರಪ್ಪ, ಜಯಪ್ಪ, ಅಶೋಕ್ ಇನ್ನಿತರರಿದ್ದರು.

ಸಮಾಜದಲ್ಲಿ ಶಾಂತಿ ನೆಲೆಸಬೇಕೆಂಬುದು ಎಲ್ಲರ ಆಶಯ

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಮತ



ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ನಡೆದ ಸುಗ್ಗಿ ಸಂಭ್ರಮ–ಕರ್ನಾಟಕ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಉದ್ಘಾಟಿಸಿದರು.

ಮೈಸೂರು, ಜ.18(ಎಂಟಿವೈ)– ಸಮಸ್ಯಾತ್ಮಕವಾಗಿರುವ ಇಂದಿನ ಸಮಷ್ಟಿಯ ಬದುಕನ್ನು ಸರಿಪಡಿಸಿಕೊಂಡು ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಾಣಕ್ಕೆ ಪೂರಕವಾಗಿ ರೂಪಿಸಿಕೊಳ್ಳಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಏರ್ಪಡಿಸಿದ್ದ 'ಸುಗ್ಗಿ ಸಂಭ್ರಮ' ಮತ್ತು 'ಕರ್ನಾಟಕ ಸಾಂಸ್ಕೃತಿಕ ಸಂಭ್ರಮ' ಕುರಿತ ವಿಚಾರ ಸಂಕಿರಣ ಹಾಗೂ ನಾಡಿನ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಸಮಷ್ಟಿಯ ಬದುಕನ್ನು ಗಮನಿಸಿದರೆ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿವೆ. ಇದೊಂದು ಸರ್ವತ್ರ ಸಮರ ಸಂಗ್ರಾಮದಂತೆ ಭಾಸವಾಗುತ್ತಿದೆ. ನಾವು ಸುಗ್ಗಿಯ ಸಂಭ್ರಮದೊಂದಿಗೆ ಬಹುತ್ವದ ಸಂತಸದಲ್ಲಿದ್ದೇವೆ. ಸಂಭ್ರಮ ಎಂಬುದು ಭ್ರಮೆ ಆಗಬಾರದು. ಸಂಕ್ರಾಂತಿ ಇಂಗ್ಲಿಷ್‌ನಲ್ಲಿ ಸಮ್ ಕ್ರಾಂತಿ ಆಗುತ್ತದೆ. ಹೀಗಾಗಿ ನಮಗೆ ಯಾವ ಕ್ರಾಂತಿಯೂ ಬೇಡ. ಸಮಾಜದಲ್ಲಿ ಶಾಂತಿ ಮೂಡಲಿ ಎಂಬುದೇ ನಮ್ಮ ಆಶಯ. ಸುಗ್ಗಿ ಎಂದರೆ ಬಿತ್ತಿ ಬೆಳೆಯುವಂಥದ್ದು. ಈಗ ವಿಷೋದ್ಯಾನವಾಗಿದೆ. ಇದು ಅಮೃತೋದ್ಯಾನ ಆಗಬೇಕು. ಆನಂದಮಯ ಈ ಜಗಹೃದಯ ಕವಿವಾಣಿಯಂತೆ ಉತ್ಸಾಹ– ಉಲ್ಲಾಸದಿಂದ ಕೂಡಿರಲಿ ಎಂದು ಆಶಿಸಿದರು.

ರಾಷ್ಟ್ರಕವಿ ಕುವೆಂಪು ಅವರು ಸುಗ್ಗಿ ಬರುತ್ತಿದೆ ಎಂಬ ಕವನವನ್ನು ನೂರು ವರ್ಷಗಳ ಹಿಂದೆಯೇ ರಚಿಸಿದ್ದರು. ಅದು ಹಾಗೂ ಈಗಿನ ನಾಡಗೀತೆ 'ಕೊಳಲು' ಕವನ ಸಂಕಲನದಲ್ಲಿದೆ. ವಸಂತಕಾಲದ ಸಂತಸ. ಮಾಗಿಯ ಅವಶೇಷಗಳು ಇನ್ನೂ ಇವೆ. ಮಾಘಿ–ಸುಗ್ಗಿ ಒಂದಾದ ಮೇಲೆ ಒಂದು ಬರುತ್ತಿರುತ್ತವೆ. ಇದೆಲ್ಲಾ ಬದುಕಿನಲ್ಲಿ ಸಹಜ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಗುಣವಂತ ಮಂಜು ಮಾತನಾಡಿ, ಆತ್ಮಶ್ರೀ ಪ್ರತಿಷ್ಠಾನ ಮತ್ತು ಕನ್ನಡಾಂಬೆ ಸಂಸ್ಥೆ ರಾಜ್ಯದ ವಿವಿಧೆಡೆ ಮಾತ್ರವಲ್ಲದೇ ಹೊರ ರಾಜ್ಯ, ವಿದೇಶಗಳಲ್ಲೂ ಕಾರ್ಯಕ್ರಮ ನಡೆಸಲಾಗಿದೆ ಎಂದು ಹೇಳಿದರು.

ಇದೇ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿ.ಎಸ್.ರಾಜಶೇಖರ್, ಯು.ಎಂ.ವನಿತಾ, ಸಿ.ವೆಂಕಟೇಶ, ಸತ್ಯ ಆರ್.ಕೆಸ್ತೂರು, ಕೇಶವಮೂರ್ತಿ, ರೇಖಾ ಕೃಷ್ಣಮೂರ್ತಿ, ಸಿ.ಎನ್.ಶ್ವೇತಾ, ವರ್ಷಾ ಹಾಸನ, ಹೆಚ್.ಗಾಯತ್ರಿ ಭಟ್, ಬಾಬು ರಾವ್, ಬುಷ್ರಾ ಬಾನು, ಎಂ.ಪಿ.ರಂಗಸ್ವಾಮಿ, ವಿ.ಶಶಿಕಲಾ, ಟಿ.ಎಸ್.ರೋಹಿಣಿ, ಕಾಂತರಾಜು, ಟಿ.ಜಿ.ರಾಮೇಗೌಡ, ಕೆ.ಎನ್. ಚಿದಾನಂದ್, ಕೆ.ವೈಭವಿ, ಮುಬಾರಕ್ ರಶೀದ ಸರಕಾವಸ, ಉದಯ ಆರ್.ರಘು ವೀರಮಠ, ಡಿ.ಪಿ.ಚಿಕ್ಕಣ್ಣ, ಟಿ.ಸೌಮ್ಯಲತಾ, ಬಿ.ಎಸ್.ಸತೀಶ್, ಪ್ರದೀಪ್ ಕೃಷ್ಣೇಗೌಡ, ಆಂಜನೇಯ ಹೊಳೆಯಪ್ಪ ಕಳಕವರ, ಕಿಶೋರ್ ರಮೇಶ ರಜಪೂತ, ಎಂ.ಎನ್. ಸತ್ಯನಾರಾಯಣ, ಸಂಪ್ರೀತಾ ನಾಗಭೂಷಣ, ಗೌತಮಿ ವಿ. ಸುತಾರ್, ಶಾಂಭವ ಗಣೇಶಗುಡಿ, ಸರಸ್ವತಿ ಚಂದ್ರಶೇಖರ ರಾವ್, ವೈ ಶಶಿಕಲಾ, ಜಿ.ಆರ್.ರಾಜೇಶ್ ನಾಯಕ್, ಎಂ.ಮೋನಿಷಾ ಅವರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ವಹಿಸಿದ್ದರು. ನಮ್ಮ ಆಯುರ್ವೇದ ಕರ್ನಾಟಕ ಸಂಸ್ಥೆಯ ನಿರ್ದೇಶಕ ವೈ.ಆರ್. ಮಹೇಶ್, ದಕ್ಷ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಜಯಚಂದ್ರ ರಾಜು, ರಕ್ತದಾನಿ ಟಿ.ತ್ಯಾಗರಾಜು, ಸಾಹಿತಿ ಎಸ್.ಅಕ್ಬರ್ ಭಾಷಾ ಮಾತನಾಡಿದರು. ಶಿಲ್ಪಾ ಕೃಷ್ಣಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಕೆ.ಎಸ್.ಸತೀಶ್‌ಕುಮಾರ್, ಟಿ. ಗೋವಿಂದರಾಜು, ಮಲ್ಲಿಕಾರ್ಜುನ ಕೊಂಗಿ, ಚಂದ್ರು, ವರಲಕ್ಷ್ಮೀ ಮಂಜು, ಶಿವಸ್ವರೂಪ್, ಯಶಸ್ ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆ ಸಮರ್ಪಕ ಜಾರಿಗೆ ಕ್ರಮ ಕೈಗೊಳ್ಳಿ

ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಅರುಣ್‌ಕುಮಾರ್ ಸೂಚನೆ



ಮೈಸೂರು ಜಿಲ್ಲಾ ಪಂಚಾಯತ್‌ನ ಡಿ ದೇವರಾಜ ಅರಸು ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು, ಜ.18(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆ ಕಳೆದ ಎರಡೂವರೆ ವರ್ಷದಿಂದ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುತ್ತಿದ್ದು, ಮುಂದಿನ ದಿನಗಳಲ್ಲೂ ಈ ಸೌಲಭ್ಯವನ್ನು ಪಾರದರ್ಶಕವಾಗಿ ಅರ್ಹರಿಗೆ ತಲುಪಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳು ಮುಂದಿನ ದಿನಗಳಲ್ಲೂ ವಿಳಂಬವಾಗದೆ ಫಲಾನುಭವಿಗಳಿಗೆ ತಲುಪಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಮಾತನಾಡಿ, ಜಿಲ್ಲಾ ಕೌಶಲಾಭಿವೃದ್ಧಿ ಇಲಾಖೆ ವತಿಯಿಂದ ನಿರುದ್ಯೋಗಿ ಯುವಕ–ಯುವತಿಯರಿಗೆ ತರಬೇತಿ ನೀಡಿ ಉತ್ತಮ ಕಂಪನಿಗಳಲ್ಲಿ ಕೆಲಸ ಪಡೆದುಕೊಳ್ಳುವಂತೆ ಸಜ್ಜುಗೊಳಿಸಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಅಧಿಕಾರಿಗಳು ಮಾತನಾಡಿ, ಯುವನಿಧಿ ಯೋಜನೆಯಡಿ 14,913 ಪದವಿ ಅಭ್ಯರ್ಥಿಗಳು, 204 ಡಿಪ್ಲೊಮಾದಾರರು ಸೇರಿದಂತೆ ಒಟ್ಟು 15117 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದಾರೆ. ನವೆಂಬರ್ 2024ರವರೆಗೂ ಡಿಬಿಟಿ ಆಗಿದೆ. ಇದುವರೆಗೂ 24 ಕಂತುಗಳ ಹಣ ಪಾವತಿ ಆಗಿದೆ ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 6,96,080 ಫಲಾನುಭವಿಗಳು ನೋಂದಣಿಯಾಗಿದ್ದಾರೆ. ಸೆಪ್ಟಂಬರ್ ಅಂತ್ಯದ ವೇಳೆಗೆ 6,72,538 ಫಲಾನುಭವಿಗಳಿಗೆ ಪಾವತಿಯಾಗಿದ್ದು, ಶೇ.97ರಷ್ಟು ಸಾಧನೆ ಆಗಿದೆ. ಗೃಹ ಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ಅರ್ಹರಿರುವ ಗ್ರಾಹಕರ ಸಂಖ್ಯೆ 9,67,567 ಇದ್ದು, ಇದರಲ್ಲಿ 9,63,342 ಫಲಾನುಭವಿಗಳು ನೋಂದಣಿಯಾಗಿದ್ದು, ಸೌಲಭ್ಯ ಪಡೆಯುತ್ತಿದ್ದಾರೆ. ಇನ್ನು 4225 ಫಲಾನುಭವಿಗಳು ಹೆಸರು ನೋಂದಾಯಿಸಬೇಕಾಗಿದೆ ಎಂದು ತಿಳಿಸಿದರು.

ಅನ್ನ ಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 8,14,836 ಪಡಿತರ ಚೀಟಿಗಳಿದ್ದು, 22,21,714 ಫಲಾನುಭವಿಗಳಿಗೆ ಪಡಿತರ ವಿತರಣೆ ಮಾಡಲಾಗುತ್ತಿದೆ. ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಡಿಸೆಂಬರ್ ಅಂತ್ಯದವರೆಗೆ ಜಿಲ್ಲೆಯಲ್ಲಿ 39.92 ಕೋಟಿ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ಶಕ್ತಿ ಯೋಜನೆಯಡಿ ಶೇ.68.39ರಷ್ಟು ಪ್ರಯಾಣಿಕರು ಉಚಿತ ಪ್ರಯಾಣ ಮಾಡಿದ್ದಾರೆ. ಶಕ್ತಿ ಯೋಜನೆಯ ಪ್ರಯಾಣಿಕರಿಂದ 1022.72 ಕೋಟಿ ಸಾರಿಗೆ ಆದಾಯ ಬಂದಿದೆ ಎಂದರು.

ಸಭೆಯಲ್ಲಿ ಜಿ.ಪಂ. ಸಿಇಓ ಯುಕೇಶ್ ಕುಮಾರ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಹುಣಸೂರು ಬಸವಣ್ಣ ಸೇರಿದಂತೆ ತಾಲೂಕು ಮಟ್ಟದ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಉಚಿತ ತರಬೇತಿ

ಮೈಸೂರು: ಜ್ಞಾನಬುತ್ತಿ ಸಂಸ್ಥೆಯ ವತಿಯಿಂದ ಪೊಲೀಸ್ ಕಾನ್‌ಸ್ಟೇಬಲ್ ಹಾಗೂ ಸಬ್‌ಇನ್‌ಸ್ಪೆಕ್ಟರ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಜನವರಿ 23ರ ಸಂಜೆ 5:30ರಿಂದ 7:30ರೊಳಗೆ ಜ್ಞಾನಬುತ್ತಿ ಸಂಸ್ಥೆ, ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸಂಯೋಜಕರಾದ ಸಿ.ಕೆ.ಕಿರಣ್ ಕೌಶಿಕ್ 9972830857 ಕೆ.ವೈ.ನಾಗೇಂದ್ರ: 8296788251, ಹೆಚ್.ಬಾಲಕೃಷ್ಣ: 9448117455ಗೆ ಸಂಪರ್ಕಿಸಬಹುದು.

ಭರತ್‌ಶರ್ಮಾಗೆ ಬಹುಮಾನ

ಮೈಸೂರು: ಮಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಮೈಸೂರಿನ ಕರುಣಾಮಯಿ ವಿಶೇಷ ಶಾಲೆ ವಿದ್ಯಾರ್ಥಿ ಭರತ್ ಶರ್ಮಾ ಎಂ.ಪ್ರಥಮ ಸ್ಥಾನ ಗಳಿಸಿದ್ದಾರೆ. ಜೊತೆಗೆ ಫೆ.3ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಮಟ್ಟದ 100 ಮೀ. ಓಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



ಮೈಸೂರು ಜೆನಿಟೋಯೂರಿನರಿ ಸರ್ಜನ್‌ಗಳ ಸಂಘದ ಅಧ್ಯಕ್ಷರಾಗಿ ಕೆ.ಆರ್.ಆಸ್ಪತ್ರೆಯ ಡಾ.ಜೆ.ಬಿ.ನರೇಂದ್ರ ಆಯ್ಕೆ



ಮೈಸೂರು ಜೆನಿಟೋಯೂರಿನರಿ ಸರ್ಜನ್‌ಗಳ(ಮೂತ್ರಪಿಂಡ ತಜ್ಞರ) ಸಂಘದ ಅಧ್ಯಕ್ಷರಾಗಿ ಕೆ.ಆರ್.ಆಸ್ಪತ್ರೆಯ ನೆಫ್ರೋ ಯೂರೋಲಜಿ ಸಂಸ್ಥೆಯ ಮುಖ್ಯಸ್ಥರಾದ ಡಾ.ಜೆ.ಬಿ.ನರೇಂದ್ರ(ಎಡದಿಂದ ಮೂರನೇಯವರು) ಅವಿರೋಧವಾಗಿ ಆಯ್ಕೆಯಾದರು.

ಮೈಸೂರು, ಜ.18(ಎಂಟಿವೈ)– ಮೈಸೂರು ಜೆನಿಟೋಯೂರಿನರಿ ಸರ್ಜನ್‌ಗಳ ಸಂಘದ ಅಧ್ಯಕ್ಷರಾಗಿ ಕೆ.ಆರ್.ಆಸ್ಪತ್ರೆಯ ನೆಫ್ರೋ ಯೂರೋಲಜಿ ಸಂಸ್ಥೆಯ ಮುಖ್ಯಸ್ಥರಾದ ಡಾ.ಜೆ.ಬಿ.ನರೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಜೆನಿಟೋಯೂರಿನರಿ ಸರ್ಜನ್‌ಗಳ ಸಂಘ (ಮೈಸೋಗಸ್)ದ ಸಭೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಡಾ.ಜೆ.ಬಿ. ನರೇಂದ್ರ, ನಿಯೋಜಿತ ಅಧ್ಯಕ್ಷರಾಗಿ ಡಾ.ವಿಜಯ್‌ಕುಮಾರ್ ಆರ್., ಕಾರ್ಯದರ್ಶಿ ಡಾ.ಪ್ರಸಾದ್ ಹೆಚ್.ಎಲ್., ಖಜಾಂಚಿ ಡಾ.ಉಮೇಶ್ ಕೆ., ಕಾರ್ಯಕಾರಿ ಸಮಿತಿ ಸದಸ್ಯರಾಗಿ ಡಾ.ಅಭಿಜಿತ್ ಬಿ.ಟಿ. ಹಾಗೂ ಡಾ.ಸುಹಾಸ್‌ಶೆಟ್ಟಿ ಅವರನ್ನು ಆಯ್ಕೆ ಮಾಡಲಾಯಿತು.

ಇದೇ ವೇಳೆ ನೂತನ ಅಧ್ಯಕ್ಷ ಡಾ. ಜೆ.ಬಿ.ನರೇಂದ್ರ ಮಾತನಾಡಿ, 1990ರಲ್ಲಿ ಆರಂಭವಾದ ಮೈಸೋಗಸ್ ಸಂಸ್ಥೆಯು ಕರ್ನಾಟಕದ ಅತ್ಯಂತ ಹಳೆಯ ಮೂತ್ರಪಿಂಡ ತಜ್ಞರ ಸಂಘಗಳಲ್ಲಿ ಒಂದಾಗಿದ್ದು, ನೂತನ ಸಮಿತಿಯು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರೊಂದಿಗೆ ಸಾರ್ವಜನಿಕರಲ್ಲಿ ಮೂತ್ರಪಿಂಡ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವುದಾಗಿ ಭರವಸೆ ನೀಡಿದರಲ್ಲದೆ, ಸಂಘದ ನಿರ್ಗಮಿತ ಅಧ್ಯಕ್ಷ ಡಾ.ದಯಾನಂದ್ ಜಿ.ಎಸ್. ಮತ್ತು ಅವರ ತಂಡ ಇತ್ತೀಚಿಗೆ ಮೈಸೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದ ರಾಜ್ಯಮಟ್ಟದ ಮೂತ್ರಪಿಂಡ ತಜ್ಞರ ವಾರ್ಷಿಕ ಸಮ್ಮೇಳನ ಸೇರಿದಂತೆ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಸ್ಮರಿಸಿದರು.

ಸಮಾರಂಭದಲ್ಲಿ ಹಿರಿಯ ಮೂತ್ರಪಿಂಡ ತಜ್ಞರಾದ ಡಾ.ಜೇವಿಯರ್ ಡಿಸೋಜ, ಡಾ.ಪ್ರಕಾಶ್ ಪ್ರಭು, ಡಾ.ಅಮೃತ್‌ರಾಜ್‌ಗೌಡ ಹಾಗೂ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

ಜ್ಞಾನದ ಮೂಲಕವಷ್ಟೇ ಕಂಡ ಕನಸು ನನಸಾಗುವುದು

ವಿಜಯನಗರ ವಿಭಾಗದ ಎಸಿಪಿ ರವಿಪ್ರಸಾದ್ ವಿಶ್ವಾಸ

ಮೈಸೂರು, ಜ.18(ಎಂಕೆ)– ಕಂಡ ಕನಸುಗಳು ನನಸಾಗುವುದು ಜ್ಞಾನದ ಮೂಲಕವಾಗಿದ್ದು, ಮಕ್ಕಳು ಜ್ಞಾನದಾಹಿಗಳಾಗಬೇಕು ಎಂದು ವಿಜಯನಗರ ವಿಭಾಗದ ಎಸಿಪಿ ರವಿಪ್ರಸಾದ್ ತಿಳಿಸಿದರು.

ಮೈಸೂರಿನ ಒಡನಾಡಿ ಸೇವಾ ಸಂಸ್ಥೆಯಲ್ಲಿ ಆಯೋಜಿಸಿದ್ದ ಮಕ್ಕಳ ಸಂವೇದನಾಶೀಲ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತಿಹಾಸದಲ್ಲಿ ಎಂತಹದ್ದೆ ನೋವಿದ್ದರೂ ಜ್ಞಾನದಾಹಿಗಳಾಗಿ ಗುರಿ ಮುಟ್ಟಿದರೆ ಬದುಕು ಸಾಕ್ಷಾತ್ಕಾರವಾಗುತ್ತದೆ ಎಂದು ಹೇಳಿದರು.

ಆಧುನಿಕ ಪ್ರಪಂಚದಲ್ಲಿ ತಂತ್ರಜ್ಞಾನವನ್ನು ದುರುಪಯೋಗ ಮಾಡಿಕೊಳ್ಳದೆ ಸುದುಪಯೋಗಕ್ಕೆ ಬಳಸಿಕೊಳ್ಳಿ, ಮೊಬೈಲ್, ಲ್ಯಾಪ್‌ಟಾಪ್ ಒಳ್ಳೆಯ ವಿಷಯಗಳನ್ನು ಗ್ರಹಿಸಲಷ್ಟೇ ಬಳಸಬೇಕು. ಎಚ್ಚರದಿಂದಿರಬೇಕು. ಕಾನೂನು ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡು ದುರ್ಬಲ ಪರಿಸರವನ್ನು ಉತ್ತಮವಾಗಿ ಕಟ್ಟಬೇಕು ಎಂದು ಸಲಹೆ ನೀಡಿದರು. ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರನ್, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶುರಾಮ್, ಸಿಬ್ಬಂದಿಗಳಾದ ಪ್ರದೀಪ್, ಶಶಾಂಕ್, ಬಾಲಕುಮಾರ್, ನಾಜಿಯಾ, ಚಂದನ ಮತ್ತಿತರರು ಉಪಸ್ಥಿತರಿದ್ದರು.



ಒಡನಾಡಿ ಸೇವಾ ಸಂಸ್ಥೆಯಲ್ಲಿ ಮಕ್ಕಳ ಸಂವೇದನಾಶೀಲ ಕಾರ್ಯಕ್ರಮ ನಡೆಯಿತು. ಎಸಿಪಿ ರವಿಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ಯುವಕರ ನಾಚಿಸಿದ ಹಿರಿಯ ಸಹಕಾರಿಗಳು!



ಮೈಸೂರಿನ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಆವರಣದಲ್ಲಿ ಸೌಹಾರ್ದ ಸಹಕಾರಿಗಳಿಗೆ ಏರ್ಪಡಿಸಿದ್ದ ಆಟೋಟ ಸ್ಪರ್ಧೆಯಲ್ಲಿ ಯುವಕರನ್ನು ನಾಚಿಸುವಂತೆ ಕ್ರೀಡಾಕೂಟದಲ್ಲಿ ಸಹಕಾರಿಗಳು ಪಾಲ್ಗೊಂಡು ಕ್ರೀಡಾ ಸ್ಫೂರ್ತಿ ಮೆರೆದರು.

ಮೈಸೂರು, ಜ.18(ಜಿಎ)–ವಯಸ್ಸನ್ನು ಮರೆತು ಯುವಕರನ್ನು ನಾಚಿಸುವಂತೆ ಕ್ರೀಡಾಕೂಟದಲ್ಲಿ ಸಹಕಾರಿಗಳು ಪಾಲ್ಗೊಂಡು ಸ್ಫೂರ್ತಿ ಮೆರೆದರು.

ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ವತಿಯಿಂದ ರಜತ ಸಂಭ್ರಮದ ಅಂಗವಾಗಿ ಆಯೋಜಿಸಿದ್ದ ಆಟೋಟ ಸ್ಪರ್ಧೆಯಲ್ಲಿ ಹಿರಿಯರು ಪಾಲ್ಗೊಂಡು ಎಲ್ಲರ ಗಮನ ಸೆಳೆದರು.

ಮೈಸೂರಿನ ಕುವೆಂಪುನಗರದಲ್ಲಿರುವ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಆವರಣದಲ್ಲಿ ಸೌಹಾರ್ದ ಸಹಕಾರಿಗಳಿಗೆ ಏರ್ಪಡಿಸಿದ್ದ ಆಟೋಟ ಸ್ಪರ್ಧೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಮಾಜಿ ಅಧ್ಯಕ್ಷ, ಶಿಕ್ಷಣ ಸಲಹಾ ಸಮಿತಿ ಸದಸ್ಯ ಹಾಗೂ ಮುಡಾ ಮಾಜಿ ಅಧ್ಯಕ್ಷರೂ ಆದ ಹೆಚ್.ವಿ.ರಾಜೀವ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಹಕಾರಿಗಳು ಕೇವಲ ಸೌಹಾರ್ದ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೇ ತಮ್ಮಲ್ಲಿರುವ ಪ್ರತಿಭೆ ಹೊರತರುವ ನಿಟ್ಟಿನಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. ಮಹಿಳೆಯರು ಕೌಶಲ್ಯಕ್ಕಾಗಿ ಯುವಜನ ಮತ್ತು ಸಹಕಾರ ಎಂಬ ವಿಚಾರದ ಸಂವಾದ ಏರ್ಪಡಿಸಲಾಗಿದೆ ಎಂದು ಹೇಳಿದರು.

ಇಂದಿನ ಆಟೋಟ ಸ್ಪರ್ಧೆಗಳಿಂದ ಮನೋರಂಜನೆ ಜೊತೆಗೆ ಸ್ಫೂರ್ತಿದಾಯಕವಾಗಲಿದೆ. ಸಹಕಾರಿಕ್ಷೇತ್ರದವರು ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುತ್ತೇವೆ. ಆದರೆ ನಾವು ಸಹ ಮನುಷ್ಯರಾಗಿ ವಿಶೇಷವಾಗಿ ಸ್ಪರ್ಧೆಯಲ್ಲಿ ಭಾಗವಹಿಸುವ ಸಲುವಾಗಿ ಆಯೋಜಿಸಲಾಗಿದೆ. ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಕ್ರೀಡೆ ಸ್ಫೂರ್ತಿ ಮತ್ತು ಆತ್ಮಸ್ಥೈರ್ಯ ಮೂಡುವ ಕಾರ್ಯಕ್ರಮವಾಗಲಿ ಎಂದು ಶುಭ ಹಾರೈಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ವೃತ್ತಿಪರ ನಿರ್ದೇಶಕರಾದ ಬಿ.ಮಹದೇವಸ್ವಾಮಿ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಹಣ ಹಾಕುವುದು, ತೆಗೆಯುವುದರ ಜೊತೆಗೆ ಕೆಲವೊಮ್ಮೆ ದ್ವೇಷಗಳು ಆರಂಭವಾಗುತ್ತವೆ. ಅದು ಸಹಜ. ಅದೆಲ್ಲ ಜಂಜಾಟ ಬಿಟ್ಟು ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ ಎಂದರು.

100 ಮೀಟರ್ ರನ್ನಿಂಗ್, ಮ್ಯೂಸಿಕಲ್ ಚೇರ್, ಬಾಲ್ ಇನ್ ಬಕೆಟ್, ಲೆಮೆನ್ ಬ್ಯಾಲೆನ್ಸ್, ಪಾಸಿಂಗ್ ದಿ ಬಾಲ್, ಗೋಣಿ ಚೀಲದ ಓಟ, ಕೆರೆ ದಡ ಸೇರಿದಂತೆ ಹಲವಾರು ದೇಸಿ ಆಟೋಟ ಸ್ಪರ್ಧೆಯಲ್ಲಿ 60ಕ್ಕೂ ಹೆಚ್ಚು ಸಹಕಾರಿಗಳು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕ ಎನ್.ಜೆ. ಗಿರೀಶ್, ಅಧ್ಯಕ್ಷ ಎಸ್.ಆರ್.ನಾರಾಯಣರಾವ್, ಉಪಾಧ್ಯಕ್ಷ ಇ.ಕೆ.ರಾಜನ್ ಬಾಬು, ನಿರ್ದೇಶಕಿ ನಂದಿನಿ ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯ ನೀರಾವರಿ ಅಭಿವೃದ್ಧಿಗೆ ಅತೀ ಹೆಚ್ಚು ಅನುದಾನ

ಸೂಳೆಕೆರೆ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಉದಯ್



ಸೂಳೆಕೆರೆ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ಉದಯ್ ಚಾಲನೆ ನೀಡಿದರು.

ಮಂಡ್ಯ/ಭಾರತೀನಗರ, ಜ.18– ಮಂಡ್ಯ ಜಿಲ್ಲೆ ನೀರಾವರಿ ಅಭಿವೃದ್ಧಿಗೆ ರಾಜ್ಯ ಸರ್ಕಾರ ಇದುವರೆಗೆ ಅತೀ ಹೆಚ್ಚು ಅನುದಾನ ನೀಡಿದೆ. ಹೀಗಾಗಿ ರೈತರಿಗೆ ಅನುಕೂಲ ಕ್ಕಾಗಿ ನಾಲೆ, ಕೆರೆಗಳನ್ನು ಅಭಿವೃದ್ಧಿ ಗೊಳಿಸಲು ಮುಂದಾಗಿದ್ದೇನೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಮಂಡ್ಯ ಹಾಗೂ ಮದ್ದೂರು ತಾಲೂಕು ವ್ಯಾಪ್ತಿಯ ಸೂಳೆಕೆರೆ ಜೀರ್ಣೋದ್ಧಾರ ಕಾಮಗಾರಿಗೆ 34 ಲಕ್ಷ ರೂ. ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಮಾತ ನಾಡಿದ ಅವರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನೀರಾವರಿ ಇಲಾಖೆಗೆ ಹೆಚ್ಚು ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿಯನ್ನು 2 ಸಾವಿರ ಕೋಟಿ ಯಲ್ಲಿ ಮುಗಿಸಬಹುದೆಂದು ತಿಳಿದು ಕೊಂಡಿದ್ದೆ. ಆದರೆ ಹಳ್ಳಿಗಳ ಸಮಸ್ಯೆ ಅರಿಯಲು ಜನಸಂಪರ್ಕ ಸಭೆ ನಡೆಸಿದಾಗ ಒಂದು ಬಜೆಟ್ ಹಣವನ್ನೇ ಕ್ಷೇತ್ರಕ್ಕೆ ತರಬೇಕೆಂದು ಗೊತ್ತಾಯಿತು ಎಂದರು.

ರೈತರ ಜೀವನಾಡಿ ಸೂಳೆಕೆರೆಯನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಅದನ್ನು ತೆರವುಗೊಳಿಸಲು ಮುಂದಾಗಿ ದ್ದೇವೆ. ಇದರಿಂದ ರೈತರಿಗೆ ಅನುಕೂಲವಾಗ ಲಿದೆ. ಶೀಘ್ರ ಕೆರೆ ಆಧುನೀಕರಣ ಕಾಮ ಗಾರಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅಲ್ಲದೇ ದೊಡ್ಡ ನಾಲೆಗಳ ಆಧುನೀಕರಣಕ್ಕೂ ಕ್ರಮ ಕೈಗೊಳ್ಳಲಾಗಿದ್ದು, ಇದರಿಂದ ಕೊನೆ ಭಾಗದ ನಾಲೆಗಳಿಗೂ ನೀರು ತಲುಪುವಂತಾಗಲಿದೆ. ಅಲ್ಲದೇ ರೈತರು ಬೆಳೆ ಬೆಳೆಯಲು ನೀರಿನ ಸಮಸ್ಯೆ ಎದುರಾಗುವುದಿಲ್ಲ ಎಂದರು.

ನೀರು ಅತ್ಯಮೂಲ್ಯವಾದದು. ಹೀಗಾಗಿ ರೈತರು ನೀರನ್ನು ಪೋಲು ಮಾಡ ಬಾರದು. ಮಿತವಾಗಿ ನೀರು ಬಳಸುವ ಆಧುನಿಕ ಬೇಸಾಯ ಪದ್ಧತಿ ಅಳವಡಿಸಿ ಕೊಳ್ಳಬೇಕು. ಈ ಭಾಗದ ರೈತರು ಹಿಂದಿನಿಂದಲೂ ನೀರನ್ನು ನೋಡುತ್ತಾ ಬಂದವರು. ಶಿಂಷಾ ನದಿ ಭಾಗದ ಕೊಕ್ಕರೆ ಬೆಳ್ಳೂರು, ಕೂಳಗೆರೆ, ಬನ್ನಹಳ್ಳಿ ಸೇರಿ ದಂತೆ ಹಲವು ಗ್ರಾಮಗಳ ರೈತರು ನೀರಿಗಾಗಿ ಪ್ರತಿದಿನ ಪರಿತಪಿಸುತ್ತಾರೆ ಎಂದರು.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿ ಗೌಡ ಮಾತನಾಡಿ, 1862ರಲ್ಲಿ ಕೊಪ್ಪ ಹೋಬಳಿಯ ತಗ್ಗಹಳ್ಳಿ ಬಳಿ ನಾಲೆಗಳನ್ನು ನಿರ್ಮಿಸಿ ವಿದ್ಯುತ್ ತಯಾರಿಸಲು ಯೋಜನೆ ರೂಪಿಸಲಾಗಿತ್ತು. ಆದಾದ ಬಳಿಕ 1911ರಲ್ಲಿ 320 ಕಿಮೀ ವ್ಯಾಪ್ತಿಯಲ್ಲಿ ಕೆಆರ್‌ಎಸ್ ಅಣೆಕಟ್ಟೆ ಕಟ್ಟಲು ಅಂದಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅಡಿಗಲ್ಲು ಹಾಕಿದ್ದರು. ಈ ಫಲಶ್ರುತಿಯಾಗಿ ಜಿಲ್ಲೆಯ 1082 ಹೆಕ್ಟೇರ್‌ನಲ್ಲಿ ರೈತರು ಬೆಳೆ ಬೆಳೆಯುತ್ತಿದ್ದಾರೆ. ಅವರನ್ನು ಎಂದಿಗೂ ಮರೆಯುವಂತಿಲ್ಲ ಎಂದರು. ವೇದಿಕೆಯಲ್ಲಿ ಕಿಸಾನ್ ರೈತ ಸಂಘದ ಅಧ್ಯಕ್ಷ ಮೋಹನ್ ಕುಮಾರ್, ಗ್ಯಾರಂಟಿ ಯೋಜನೆಗಳ ಅನು ಷ್ಠಾನ ಸಮಿತಿ ಅಧ್ಯಕ್ಷ ಬಿ.ಬಸವರಾಜು, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ರಾಜೀವ್, ರೈತ ಮುಖಂಡ ಶಂಕರೇ ಗೌಡ, ಚಾಂಷುಗರ್ ಉಪಾಧ್ಯಕ್ಷ ಆರ್.ಮಣಿ, ಮುಖಂಡರಾದ ರಾಮಕೃಷ್ಣ ರಾಮಲಿಂಗಣ್ಣ ದಾಸೇಗೌಡ, ಅಪ್ಪಾಜಿ, ರಾಮಕೃಷ್ಣ ಮಯೂತ, ಚಂದ್ರಶೇಖರ್, ಈರಣ್ಣ ಪ್ರೊ. ಬೋರೇ ಗೌಡ ಸೇರಿದಂತೆ ಮತ್ತಿತರರಿದ್ದರು.

> ಸೂಳೆಕೆರೆ ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಒಳಪಟ್ಟಿದೆ. ಈ 3 ಕ್ಷೇತ್ರದ ಶಾಸಕರು ಕೆರೆ ಅಭಿವೃದ್ಧಿ ಗಾಗಿ ಸಿಎಂ ಮತ್ತು ಡಿಸಿಎಂಗೆ ಮನವಿ ಮಾಡಿದ್ದು, ರೈತರ ಹಿತದೃಷ್ಟಿಯಿಂದ ಹಣ ಬಿಡುಗಡೆಗೊಳಿಸಿದ್ದಾರೆ. ಮಂಡ್ಯ ನಗರ ದಿಂದ ಬರುವ ಕೊಳಚೆ ನೀರು ಸೂಳೆಕೆರೆ ಸೇರುತ್ತಿರುವುದರಿಂದ ಈ ಭಾಗದ ರೈತರು ಬೇಸರಗೊಂಡು ಕೊಳಚೆ ನೀರು ಬಾರ ದಂತೆ ತಡೆಯುವಂತೆ ಮನವಿ ಸಲ್ಲಿಸಿದ್ದರು. ಹೀಗಾಗಿ 32 ಕೋಟಿ ರೂ. ವೆಚ್ಚ ದಲ್ಲಿ ಮಂಡ್ಯ ನಗರದಿಂದ ಬೇರೊಂದು ನಾಲೆ ಮೂಲಕ ಕೊಳಚೆ ನೀರನ್ನು ಹರಿ ಸಲು ಕಾರ್ಯ ಯೋಜನೆ ರೂಪಿಸಲಾಗಿದೆ. ಶೀಘ್ರ ಕಾಮಗಾರಿ ಮುಗಿಸಿ ಕೊಳಚೆ ನೀರು ಬಾರದಂತೆ ತಡೆಯಲಾಗುವುದು.
> - ರವಿಕುಮಾರ್ ಗಣಿಗ, ಶಾಸಕ.

2028ಕ್ಕೆ ಮಳವಳ್ಳಿಯಲ್ಲಿ ಜೆಡಿಎಸ್ ಗೆಲುವು:ಸಿ.ಎಸ್.ಪುಟ್ಟರಾಜು ವಿಶ್ವಾಸ



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಮಳವಳ್ಳಿ, ಜ.18– ಮಳವಳ್ಳಿ ವಿಧಾನ ಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿ ರುವುದರಿಂದ ಕಳೆದ ಲೋಕಸಭಾ ಚುನಾ ವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಭಾರೀ ಬಹುಮತ ದೊರೆತು ಇಂದು ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಲು ಸಾಧ್ಯ ವಾಯಿತು. ಹೀಗಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮಳವಳ್ಳಿ ಜೆಡಿಎಸ್ ಪಾಲಾಗಲಿದೆ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ರೈತ ಸಮುದಾಯ ಭವನ ದಲ್ಲಿ ಜೆಡಿಎಸ್ ಪಕ್ಷದಿಂದ ಆಯೋಜಿಸಿದ್ದ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ತಾಲೂಕು ಮಟ್ಟದ ಜೆಡಿಎಸ್ ಕಾರ್ಯಕರ್ತರಿಗೆ ಬಿಎಲ್‌ಎ ಕಾರ್ಯಾ ಗಾರ ಮತ್ತು ಕೈಪಿಡಿ ವಿತರಣೆ ಹಾಗೂ ಮಾಹಿತಿ ವಿವರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕುಟುಂಬ ಎಂದ ಮೇಲೆ ಸಣ್ಣಪುಟ್ಟ ಮನಸ್ತಾಪ ಸಹಜ. ಕುಮಾರಸ್ವಾಮಿ ಅವರು ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಲಿ ದ್ದಾರೆ. ಹೀಗಾಗಿ ಕಾರ್ಯಕರ್ತರು ಮನ ಸ್ತಾಪಗಳನ್ನು ಮರೆತು ಪಕ್ಷ ಸಂಘಟನೆಗೆ ಮುಂದಾಗುವಂತೆ ಮನವಿ ಮಾಡಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಕಟ್ಟಿದ ಜೆಡಿಎಸ್ ಪಕ್ಷ ರೈತ ಪರವಾಗಿ ಕಾರ್ಯ ನಿರ್ವಹಿಸಿದೆ. 30 ವರ್ಷಗಳಿಂದ ಜೆಡಿಎಸ್‌ನ ನಿಷ್ಠಾ ವಂತ ಕಾರ್ಯಕರ್ತನಾಗಿ ಕೆಲಸ ಮಾಡು ತ್ತಿದ್ದೇನೆ. ನನ್ನಿಂದ ಏನಾದರೂ ನೋವಾ ಗಿದ್ದರೆ ಈ ಸಭೆಯ ಮೂಲಕ ಕ್ಷಮೆ ಯಾಚಿಸುತ್ತೇನೆ. ಅಧಿಕಾರ ಕೊಟ್ಟವರು ನೀವು. ಹಾಗಾಗಿ ನಿಮಗೆ ನನ್ನನ್ನು ನಿಂದಿ ಸುವ ಹಕ್ಕಿದೆ. ಅದನ್ನು ನಾನು ಸಮಚಿತ್ತ ವಾಗಿ ಸ್ವೀಕರಿಸುತ್ತೇನೆ. ನನ್ನಿಂದಾಗಿರುವ ಸಣ್ಣಪುಟ್ಟ ತಪ್ಪುಗಳನ್ನು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಂಡು ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಜೆಡಿಎಸ್ ತಾಲೂಕು ಅಧ್ಯಕ್ಷ ವಿಶ್ವನಾಥ್, ಜೆಡಿಎಸ್ ಹಿಂದುಳಿದ ವಿಭಾಗದ ರಾಜ್ಯಾಧ್ಯಕ್ಷ ಜಯರಾಂ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ, ಪುರಸಭೆ ಮಾಜಿ ಅಧ್ಯಕ್ಷ ನಂದ ಕುಮಾರ್ ಸೇರಿದಂತೆ ಹಲವರಿದ್ದರು.

ಚಿಕ್ಕಮರಳಿಯಲ್ಲಿ ವ್ಯಕ್ತಿ ಆತ್ಮಹತ್ಯೆ

ಪಾಂಡವಪುರ, ಜ.18– ಸಾಲಬಾಧೆ ತಾಳಲಾರದೇ ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿಯೋರ್ವ ಚಾಕುವಿನಿಂದ ಕುತ್ತಿಗೆ ಕುಯ್ದುಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಸತ್ಯ, ಶಿವಮ್ಮ ಎಂಬುವರ ಪುತ್ರ ಸತೀಶ್ ಅಲಿಯಾಸ್ ತೇರಿ(39) ಆತ್ಮಹತ್ಯೆ ಮಾಡಿಕೊಂಡವರು. ಇವರು ಸಾಕಷ್ಟು ಸಾಲ ಮಾಡಿಕೊಂಡಿದ್ದರು. ಅಲ್ಲದೇ ಮಾಡಿದ ಸಾಲ ತೀರಿಸಲಾಗದೇ ಸಂಕಷ್ಟಕ್ಕೆ ಸಿಲುಕಿದ್ದರು. ಸಾಲಗಾರರ ಕಾಟ ತಾಳಲಾರದೇ ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ಸತೀಶ್ ಶನಿವಾರ ರಾತ್ರಿ ತಮ್ಮ ಮನೆಯಲ್ಲಿಯೇ ಚಾಕುವಿನಿಂದ ಕುತ್ತಿಗೆ ಕುಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಈ ವೇಳೆ ಅವರ ತಾಯಿ ಶಿವಮ್ಮ ಮನೆಗೆ ಬಂದು ನೋಡಿದಾಗ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಸತೀಶ್ ಅವರನ್ನು ತಕ್ಷಣ ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿ ಯಾಗದೇ ಸಾವನ್ನಪ್ಪಿದ್ದಾರೆ. ಇದೇ ವೇಳೆ ಮಗನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಸತೀಶ್ ಅವರ ತಾಯಿ ಶಿವಮ್ಮ ಅವರಿಗೂ ಹೃದಯಾಘಾತವಾಗಿದ್ದು, ಅವರನ್ನು ಮೈಸೂರಿನ ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದರು. ಈ ಸಂಬಂಧ ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಜದ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಶ್ರಮಿಸಿ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಶ್ರೀರಂಗಪಟ್ಟಣ, ಜ.18– ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಪ್ರತಿ ಯೊಬ್ಬರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಮಾಜಿ ಶಾಸಕ ಎ.ಎಸ್.ರವಿಂದ್ರ ಶ್ರೀಕಂಠಯ್ಯ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ನಡೆದ ತಾಲೂಕು ಒಕ್ಕಲಿಗ ಸಂಘದ ನೂತನ ಘಟಕದ ಉದ್ಘಾಟನೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಒಕ್ಕಲಿಗ ಸಮುದಾಯದ ಏಳಿಗೆಗಾಗಿ ಎಲ್ಲಾ ಸಂಘಟನೆಗಳು ಒಗ್ಗೂಡಿ ಕೆಲಸ ಮಾಡಬೇಕಾದ ಅಗತ್ಯವಿದೆ. ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿ ಗಳಿಗೆ ಉನ್ನತ ಶಿಕ್ಷಣ, ವಿದ್ಯಾರ್ಥಿ ವೇತನ, ವಸತಿ ವ್ಯವಸ್ಥೆ ಕಲ್ಪಿಸುವಲ್ಲಿ ಸಂಘ ಸಂಸ್ಥೆಗಳು ಮುಂಚೂಣಿ ಯಲ್ಲಿ ನಿಲ್ಲಬೇಕು. ಸಮಾಜದ ಪ್ರತಿಯೊಬ್ಬ ರಿಗೂ ಸಾಮಾಜಿಕ ಮತ್ತು ರಾಜಕೀಯವಾಗಿ ನ್ಯಾಯ ಸಿಗುವಂತಾಗಬೇಕು ಎಂದರು.

ಬಿಜೆಪಿ ಯುವ ಮುಖಂಡ ಎಸ್.ಸಚ್ಚಿ ದಾನಂದ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮನಾಥ ಸ್ವಾಮೀಜಿ ಮಾತನಾಡಿದರು. ಈ ವೇಳೆ ಗಣ್ಯರನ್ನು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಹಕಾರ ಸಂಘಗಳ ಉಪ ನಿಬಂಧಕ ಡಾ.ಶಂಕರ, ಒಕ್ಕಲಿಗ ಸಂಘದ ಜಿಲ್ಲಾಧ್ಯಕ್ಷ ತಿಮ್ಮೇಗೌಡ, ಚಿತ್ರವಿನ್ಯಾಸಕ ಪ್ರಕಾಶ್, ರೈತ ನಾಯಕ ಕೆ.ಎಸ್.ನಂಜುಂಡೇಗೌಡ, ಮಾಜಿ ಜಿಪಂ ಸದಸ್ಯ ಎಸ್.ಎಲ್.ಲಿಂಗರಾಜು, ತಾಲೂಕು ಅಧ್ಯಕ್ಷ ಇಂದ್ರಕುಮಾರ್ ಇತರರಿದ್ದರು.

ಸಂಕ್ರಾಂತಿ ಶ್ರಮ, ಸಂಸ್ಕೃತಿ, ಸಹಭಾಗಿತ್ವದ ಸುಂದರ ಸಂಗಮ



ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜ.18– ಮಕರ ಸಂಕ್ರಾಂತಿ ಎಂದರೆ ಶ್ರಮ, ಸಂಸ್ಕೃತಿ, ಸಹಭಾಗಿತ್ವದ ಸುಂದರ ಸಂಗಮ. ಈ ಹಬ್ಬದಲ್ಲಿ ಎಳ್ಳು–ಬೆಲ್ಲದ ಸಿಹಿ, ಕಬ್ಬಿನ ಮಧುರತೆ, ಹೊಸ ಬೆಳೆಯ ಸಂಮೃದ್ಧಿ ಪ್ರತಿಯೊಬ್ಬರ ಜೀವನ ತುಂಬಬೇಕು ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ ನಿಂಗರಾಜ್‌ಗೌಡ ತಿಳಿಸಿದರು.

ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನ ದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆಯಿಂದ ಆಯೋಜಿಸಿದ್ದ ಸಂಕ್ರಾಂತಿ ಸುಗ್ಗಿ ಸಂಭ್ರಮ, 15ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾ ರಂಭ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಮಕರ ಸಂಕ್ರಾಂತಿಯನ್ನು ಸುಗ್ಗಿ ಅಥವಾ ಸುಗ್ಗಿ ಹಬ್ಬ ಎಂದು ಕರೆಯು ತ್ತಾರೆ. ಇದು ಹೊಸ ಬೆಳೆ ಕೊಯ್ಲು, ಸೂರ್ಯನ ಉತ್ತರಾಯಣ ಪ್ರಾರಂಭದ ಸಂಕೇತವಾಗಿದೆ. ರೈತರೊಡನೆ ಎಲ್ಲರೂ ಪ್ರಕೃತಿ, ಭೂಮಿ, ಸೂರ್ಯನಿಗೆ ಕೃತಜ್ಞತೆ ಸಲ್ಲಿಸುವ ಸಂಮೃದ್ಧಿಯ ಹಬ್ಬವಾಗಿ ಇದನ್ನು ಆಚರಿಸುತ್ತೇವೆ ಎಂದರು.

ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷ ಹಾಗೂ ಖ್ಯಾತ ಇತಿಹಾಸ ತಜ್ಞ ಡಾ.ಹೆಚ್.ಶ್ರೀಧರ್ ಮಾತನಾಡಿ, ಕನ್ನಡ ಜಗತ್ತಿನ ಅತ್ಯಂತ ಶ್ರೀಮಂತ ಭಾಷೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಚಾರಿತ್ರಿಕ ಭಾಷೆ ಯಾಗಿದೆ. ಕನ್ನಡ ಭಾಷೆಗೆ ಸರ್ವ ಭಾಷೆಗಳ ಜನರನ್ನು ಆಕರ್ಷಿಸುವ, ಸೆಳೆ ಯುವ ಶಕ್ತಿ ಇದೆ. ಅದು ಕನ್ನಡದ ಶಕ್ತಿ ಮತ್ತು ತಾಕತ್ತು ಎಂದು ಪ್ರತಿಪಾದಿಸಿದರು.

ಕನ್ನಡಕ್ಕೆ ಕನ್ನಡವೇ ಸಾಕ್ಷಿ. ಕನ್ನಡ ಭಾಷೆ ಕೇವಲ ಹಾಡು ಭಾಷೆಯಾಗ ಬಾರದು. ಅದು ಹಸಿವಿನ ಭಾಷೆ. ಉಸಿರಿನ ಭಾಷೆ. ಮನಸ್ಸಿನ ಭಾಷೆ. ಹೃದಯದ ಭಾಷೆ ಹಾಗೂ ಬದುಕಿನ ಭಾಷೆಯಾಗ ಬೇಕು. ಪ್ರತಿಯೊಬ್ಬ ಕನ್ನಡಿಗನು ತನ್ನ ಕನ್ನಡ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿ ಯನ್ನು ಉಳಿಸಿ ಬೆಳೆಸುವ ಗಟ್ಟಿ ಮನಸ್ಸು ಮತ್ತು ನಿರ್ಧಾರ ಮಾಡಬೇಕು ಎಂದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದ ಸಾಧಕರಿಗೆ ಕರ್ನಾಟಕ ಸೇವಾ ಭೂಷಣ, ಕನ್ನಡ ರತ್ನ ಹಾಗೂ ಕಾವ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಡಾ.ಚಂದ್ರಶೇಖರ್, ಡಾ.ಬನ್ನಂಗಾಡಿ ಸಿದ್ದಲಿಂಗಯ್ಯ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ, ವೇದಿಕೆ ಪದಾಧಿಕಾರಿಗಳಾದ ನಾಗೇಶ್, ಶಿವಣ್ಣ, ರೂಪಾ, ನೇತ್ರಾ ಉಪಸ್ಥಿತರಿದ್ದರು.

ಸಾರಿಗೆ ನೌಕರರಿಂದ ಜ.29ರಂದು ಬೆಂಗಳೂರು ಚಲೋ

ಬೆಂಗಳೂರು, ಜ.18– ವೇತನ ಹಿಂಬಾಕಿ ಮತ್ತು ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೆಎಸ್‌ಆರ್ ಟಿಸಿ ಸೇರಿದಂತೆ ನಾಲ್ಕು ಸಾರಿಗೆ ನಿಗಮಗಳ ನೌಕರರು ಮತ್ತೆ ಮುಷ್ಕರ ಘೋಷಿಸಿದ್ದಾರೆ.

ನಾಲ್ಕು ಸರ್ಕಾರಿ ಸಾರಿಗೆ ನಿಗಮಗಳ ನೌಕರರು ಜ.29ರಂದು 'ಬೆಂಗಳೂರು ಚಲೋ' ಪ್ರತಿಭಟನೆ ನಡೆಸುವುದಾಗಿ ಶನಿವಾರ ಘೋಷಿಸಿದ್ದಾರೆ. ಸರ್ಕಾರದೊಂದಿಗೆ ಪದೇ ಪದೇ ಮಾತುಕತೆ ನಡೆಸಿದರೂ ಯಾವುದೇ ಫಲಿತಾಂಶ ಸಿಗದ ಹಿನ್ನೆಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಯು ಈ ನಿರ್ಧಾರವನ್ನು ಪ್ರಕಟಿಸಿದೆ. ಈಗಾಗಲೇ ಬೆಂಗಳೂರು ಚಲೋ ಚಳವಳಿ ಕುರಿತಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಜಂಟಿ ಕ್ರಿಯಾ ಸಮಿತಿ ಪತ್ರ ಬರೆದಿದೆ. ಕಳೆದ 38 ತಿಂಗಳಿನಿಂದ ವೇತನ ಹಿಂಬಾಕಿ ಬಂದಿಲ್ಲ. ಈ ಬಗ್ಗೆ ಹಲವು ಬಾರಿ ನಾವು ಮನವಿ ಮಾಡಿದರೂ ಅದಕ್ಕೆ ಸ್ಪಂದಿಸುತ್ತಿಲ್ಲ. ಹೀಗಾಗಿ ನಾವು ಹೋರಾಟದ ಹಾದಿ ಹಿಡಿಯಬೇಕಿದೆ ಎಂದು ಕ್ರಿಯಾಸಮಿತಿ ಅಧ್ಯಕ್ಷ ಅನಂತಸುಬ್ಬರಾವ್ ತಿಳಿಸಿದ್ದಾರೆ.

ಕಾರ್ಮಿಕ ಸಂಘಟನೆಗಳ ಪ್ರಕಾರ, ಸಾರಿಗೆ ನೌಕರರಿಗೆ ಕಳೆದ 38 ತಿಂಗಳಿನಿಂದ ಬಾಕಿ ವೇತನ ಬಂದಿಲ್ಲ. ಇದಲ್ಲದೆ, ಜನವರಿ 1, 2024ರಿಂದ ಬರಬೇಕಿದ್ದ ವೇತನ ಪರಿಷ್ಕರಣೆ ಇನ್ನೂ ಜಾರಿಗೆ ಬಂದಿಲ್ಲ. ರಾಜ್ಯಾದ್ಯಂತ ದೈನಂದಿನ ಸಾರ್ವಜನಿಕ ಸಾರಿಗೆ ಸೇವೆಗಳನ್ನು ಖಚಿತಪಡಿಸಿಕೊಳ್ಳುವ ನೌಕರರಲ್ಲಿ ಈ ವಿಳಂಬವು ಆರ್ಥಿಕ ಒತ್ತಡವನ್ನು ಹೆಚ್ಚಿಸಿದೆ ಎಂದು ಯೂನಿಯನ್ ನಾಯಕರು ಹೇಳಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ: ಜನವರಿ 29ರಂದು ಬೆಳಗ್ಗೆ 10 ರಿಂದ ಸಂಜೆ 4ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾರಿಗೆ ನೌಕರರು ಪ್ರತಿಭಟನೆ ನಡೆಸಲಿದ್ದು, ಸಾರಿಗೆ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

ಈ ಪ್ರತಿಭಟನೆ ಶಾಂತಿಯುತವಾಗಿರುತ್ತದೆ ಎಂದು ಒಕ್ಕೂಟಗಳು ತಿಳಿಸಿದೆ. ಸಮಿತಿ ಸದಸ್ಯರಾದ ಎಚ್.ವಿ.ಅನಂತಸುಬ್ಬ ರಾವ್, ಬಿ.ಜಯದೇವ ಅರಸು, ಎಚ್.ಡಿ.ರೇವಪ್ಪ, ಜಗದೀಶ್ ಎಚ್.ಆರ್. ಮತ್ತು ರಾಜೇಂದ್ರಗೌಡ ಜಿ.ಕೆ. ಅವರು, ಸಾರಿಗೆ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದ್ದಾರೆ.

ಒಂದನೇ ಪುಟದಿಂದ

ಹೋರಾಟಕ್ಕೆ ಸಾಥ್ ನೀಡಿ

ವಿಧಾನ ಪರಿಷತ್ ಸದಸ್ಯರಾಗಿದ್ದು, ಅವರೇ ಕ್ಷೇತ್ರದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ನನ್ನ ಗೈರು ಹಾಜರಿಯಲ್ಲಿ ಕ್ಷೇತ್ರದ ಜನತೆಯ ಕಷ್ಟ ಸುಖ ನೋಡಿಕೊಳ್ಳುತ್ತಿರುವವರು ಡಾ. ಯತೀಂದ್ರ ಎಂದು ಹೆಮ್ಮೆಯಿಂದ ಸಿದ್ದರಾಮಯ್ಯ ನುಡಿದರು.

ಯತೀಂದ್ರ ಒಂದು ಬಾರಿಗೆ ಇಲ್ಲಿ ಶಾಸಕರಾಗಿದ್ದವರು. ಇಲ್ಲಿನ ಎಲ್ಲ ಜನಗಳ, ಗ್ರಾಮಗಳ ಪರಿಚಯ ಇದೆ.ಹಾಗಾಗಿ ಅವರು ವಾರಕ್ಕೆ ಮೂರು–ನಾಲ್ಕು ಬಾರಿ ಭೇಟಿ ನೀಡಿ ನಿಮ್ಮ ಕಷ್ಟ–ಸುಖ ಕೇಳುವ ಕೆಲಸ ಮಾಡುತ್ತಾರೆ. ಹಾಗಾಗಿ ಯಾರೂ ಕೂಡ ಸಿದ್ದರಾಮಯ್ಯ ಕ್ಷೇತ್ರಕ್ಕೆ ಬರುತ್ತಿಲ್ಲ, ಮುಖ್ಯಮಂತ್ರಿಯಾದ ಮೇಲೆ ಕ್ಷೇತ್ರ ಭೇಟಿಯನ್ನು ಕಡಿಮೆ ಮಾಡಿದ್ದಾರೆ ಎಂದು ತಪ್ಪು ತಿಳಿಯಬೇಡಿ ಎಂದರು. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರ ಡಾ. ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ಮೈಸೂರು ಜಿಲ್ಲೆಯ ವರುಣ ಕ್ಷೇತ್ರದಲ್ಲಿ ನಿಮ್ಹಾನ್ಸ್ ಆಸ್ಪತ್ರೆ ಮಾದರಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಮುಖ್ಯಮಂತ್ರಿಗಳು ಮೈಸೂರು ಜಿಲ್ಲೆಯಲ್ಲಿ ಜಯದೇವ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಪ್ರಾರಂಭಿಸಿ ಬಡವರಿಗೆ ಉತ್ತಮ ಆರೋಗ್ಯ ಸೇವೆ ನೀಡಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಮಾತನಾಡಿ, ಕಳೆದ ಹಾಗೂ ಸದರಿ ಸಾಲಿನಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷ ನೂರಾರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗುತ್ತಿರುವುದು ಸರ್ಕಾರದ ಜನಪರ ಕೆಲಸಗಳಿಗೆ ಸಾಕ್ಷಿ ಎಂದರು. ಸಂಸದ ಸುನೀಲ್ ಬೋಸ್ ಮಾತನಾಡಿ, ಸಂಗೊಳ್ಳಿ ರಾಯಣ್ಣ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರು. ಬಾಬು ಜಗಜೀವನ್ ರಾಮ್ ಅವರು ಕಾರ್ಮಿಕರ ಅಭಿವೃದ್ಧಿಗಾಗಿ ಕಾರ್ಮಿಕ ವಿಮೆ ತಂದರು. ಸಮಾಜದಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿಗೆ ದುಡಿದವರು. ಇಂತಹ ಮಹಾನ್ ಚೇತನಗಳ ಪುತ್ಥಳಿಯನ್ನು ಅನಾವರಣಗೊಳಿಸಿರುವುದು ಸಂತೋಷದ ವಿಷಯ ಎಂದರು.

ಇದೇ ವೇಳೆ ತಾಲೂಕು ಕುರುಬ ಸಂಘದ ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ್ ಬಾಬು ನೇತೃತ್ವದಲ್ಲಿ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಪಿ ಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಮಾಜಿ ಜಿಪಂ ಸದಸ್ಯ ಮಹಾದೇವು, ಗ್ರಾಮ ಮಾಜಿ ಅಧ್ಯಕ್ಷ ರಾಘವೇಂದ್ರ(ರಘು) ಮಲೆಯ ಮಹದೇಶ್ವರ ಪ್ರಾಧಿಕಾರದ ನಿರ್ದೇಶಕ ಕುಪ್ಯಾ ಭಾಗ್ಯಮ್ಮ, ಗ್ರಾಪಂ ಸದಸ್ಯ ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರವಿ, ಮಸರೂರ್ ಅಹಮದ್, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬೆಳ್ಳಿ ಖಡ್ಗ ನೀಡಿ ಅದ್ದೂರಿಯಾಗಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ರಾಜ್ಯ ಗ್ಯಾರಂಟಿ ಯೋಜನೆ ಅಧ್ಯಕ್ಷ ಹೆಚ್.ಎಂ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಕೆ.ಆರ್.ನಗರ ಶಾಸಕ ರವಿಶಂಕರ್, ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಅಧ್ಯಕ್ಷ ಗಣೇಶ್, ಪುರಸಭೆಯ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಎನ್.ಸೋಮು, ತಾಲೂಕು ಕುರುಬರ ಸಂಘದ ನಿರ್ದೇಶಕ ಹೆಳವರ ಹುಂಡಿ ಅರುಣ್ ಗೌಡ,ಕುಪ್ಯಾ ಗ್ರಾಮ ಅಧ್ಯಕ್ಷ ನಂದಿನಿ ರಾಜೇಶ್, ಉಪಾಧ್ಯಕ್ಷೆ ಪದ್ಮಾವತಿ, ಬ್ಲಾಕ್ ಕಾಂಗ್ರೆಸ್‌ಅಧ್ಯಕ್ಷ ಮುದ್ದೇಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಸಂಘ ರಂಗಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಹುಣಸೂರು ಬಸವಣ್ಣ, ಪುರಸಭಾ ಸದಸ್ಯ ಚೇತನ್, ಮಾಸ್ಟರ್ ಪುಟ್ಟಸ್ವಾಮಿ, ಮಾಜಿ ಅಧ್ಯಕ್ಷ ಗವಿ ಮತ್ತಿತರರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಲು ಕುಪ್ಯ ಗ್ರಾಮಕ್ಕೆ ಆಗಮಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗರ್ಗೇಶ್ವರಿ ಗ್ರಾಮದ ಟೋಲ್‌ಗೇಟ್ ಬಳಿ ಭೇಟಿ ಮಾಡಿದ ತಾ.ಪಂ.ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಮ್ಮ ನೂರಾರು ಬೆಂಬಲಿಗರೊಂದಿಗೆ ಪುಷ್ಪಗುಚ್ಛ ನೀಡಿ ಸ್ವಾಗತ ಕೋರಿದರು. ಈ ವೇಳೆ ಮುಖ್ಯಮಂತ್ರಿಗಳು ಮರಯ್ಯನವರ ಯೋಗ ಕ್ಷೇಮ ವಿಚಾರಿಸಿದರು. ಬೆಂಬಲಿಗರು ಮುಖ್ಯಮಂತ್ರಿ ಗಳಿಗೆ ಜಯಘೋಷ ಕೂಗಿ ಸಂಭ್ರಮಿಸಿದರು. ಮುಖ್ಯಮಂತ್ರಿ ಭೇಟಿ ಹಿನ್ನೆಲೆಯಲ್ಲಿ ಮೈಸೂರು–ಟಿ.ನರಸೀಪುರ ಮುಖ್ಯರಸ್ತೆಯನ್ನು ಬಂದ್ ಮಾಡಿ ಝೀರೋ ಟ್ರಾಫಿಕ್ ಕಲ್ಪಿಸಲಾಗಿದ್ದು ಪರಿಣಾಮ ವಾಗಿ ವಾಹನಗಳು ಕಿ.ಮೀ.ಗಟ್ಟಲೆ ಸಾಲುಗಟ್ಟಿ ನಿಲ್ಲುವಂತಾಯಿತು.

ಕಣಕ್ಕಿಳಿಸಲು ರಣತಂತ್ರ

ಅಭಿಪ್ರಾಯ ಪಡೆದಿದ್ದಾರೆ ಎನ್ನಲಾಗಿದೆ. ವರಿಷ್ಠರ ಸಭೆ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಸಾ.ರಾ. ಮಹೇಶ್ ಅವರನ್ನು ಕೆ.ಆರ್.ನಗರ ಕ್ಷೇತ್ರದ ಬದಲಿಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆಗಿಳಿ ಸುವಂತೆ ಕೆಲ ಕಾರ್ಯಕರ್ತರು ಹಾಗೂ ಮುಖಂಡರು ಒತ್ತಡ ಹೇರುತ್ತಿದ್ದಾರೆ. ಒಂದು ವೇಳೆ ಸಾ.ರಾ.ಮಹೇಶ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದಿಂದ ಕಣಕ್ಕಿಳಿಸಿದರೆ ಕೆ.ಆರ್.ನಗರ ಕ್ಷೇತ್ರಕ್ಕೆ ಪರ್ಯಾಯ ಅಭ್ಯರ್ಥಿ ಯಾರಾಗಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದರೆಂದು ತಿಳಿಸಿದರು.

ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಬಗ್ಗೆಯೂ ಚರ್ಚೆ ಆಯಿತು. ಜಿ.ಟಿ.ದೇವೇಗೌಡರು ಹುಣಸೂರಿನಲ್ಲಿ ಗೆಲುವು ಸಾಧಿಸಿದಾಗಲೂ ಇದೇ ರೀತಿ ಪಕ್ಷಕ್ಕೆ ಮುಜುಗರ ಉಂಟು ಮಾಡಿದ್ದರು. ಅಲ್ಲದೆ 2013, 2018 ಹಾಗೂ 2023ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದಾಗಲೂ ಇದೇ ರೀತಿ ನಡೆದುಕೊಂಡಿದ್ದಾರೆ. ಪ್ರತಿಪಕ್ಷಗಳ ನಾಯಕರನ್ನು ಹೊಗಳುವ ಮೂಲಕ ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ಮುಜುಗರ ತಂದಿದ್ದಾರೆ. ಹೀಗೆ ಆದರೆ ಏನು ಮಾಡು ವುದು ಎಂಬುದೂ ಚರ್ಚೆಯಾಯಿತು. ಆದರೆ ಜಿ.ಟಿ.ದೇವೇಗೌಡರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪವಾಗಿಲ್ಲ ಎಂದು ಹೇಳಿದರು.

ಮುಂದಿನ ವಿಧಾನಸಭಾ ಚುನಾವಣೆ ಯಲ್ಲಿ ಮೈಸೂರು ಜಿಲ್ಲೆಯಲ್ಲಿ ಸಾ.ರಾ. ಮಹೇಶ್ ಅವರ ನೇತೃತ್ವದಲ್ಲೇ ಚುನಾವಣೆ ನಡೆಸಬೇಕು ಎಂದು ದೇವೇ ಗೌಡರು ಫರ್ಮಾನು ಹೊರಡಿಸಿದರು. ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಕೃಷ್ಣನಾಯಕ್ ಅವರಿಗೆ ಟಿಕೆಟ್ ಕೊಡೋಣ. ಅಲ್ಲಿನ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ಅವರ ಮಗನನ್ನು ಚುನಾವಣೆ ವೇಳೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಚುನಾವಣಾ ಪ್ರಚಾರದಲ್ಲಿ ಅವರನ್ನೂ ಭಾಗಿ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಬಿಜೆಪಿ ಮುಖಂಡರ ಕಿತ್ತಾಟದ ನಡುವೆ ದಳಪತಿ ದಾಳ

ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ನನಗೇ ಬೇಕು ಎಂದು ಬಿಜೆಪಿ ಮುಖಂಡರು ಬೀದಿ ರಂಪಾಟ ನಡೆಸಿದ ಬೆನ್ನಲ್ಲೇ ದಳಪತಿಗಳು ದಾಳ ಉರುಳಿಸಿದ್ದಾರೆ. ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಗೆ ಧಕ್ಕೆಯಾಗದಂತೆ ಕೆಲಸ ಮಾಡುವಂತೆ ಸೂಚಿಸುವ ಮೂಲಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮೈತ್ರಿ ಮುಂದುವರೆಸುವ ಸಂದೇಶ ರವಾನಿಸಿದ್ದಾರೆ. ಮುಂದಿನ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ಮೈತ್ರಿ ನೀತಿ ಅನ್ವಯವಾದರೆ ಚಾಮರಾಜ ಕ್ಷೇತ್ರದ ಟಿಕೆಟ್ ವಿಚಾರ ಮತ್ತಷ್ಟು ಕಗ್ಗಂಟಾಗುವುದು ನಿಶ್ಚಿತ.

ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೆಡಿಎಸ್ ಗೆಲುವು ಸಾಧಿಸುವ ನಿಟ್ಟಿನಲ್ಲಿ ಪಕ್ಷವನ್ನು ಗಟ್ಟಿಯಾಗಿ ಸಂಘಟನೆ ಮಾಡುವ ಬಗ್ಗೆ ಕೆಲವು ಟಿಪ್ಸ್ ನೀಡಿದರು. ಸಭೆಯಲ್ಲಿ ದೇವೇಗೌಡರೇ ಬಹಳಷ್ಟು ವಿಚಾರ ಮಾತನಾಡಿದರು. ಅವರೇ ಎಲ್ಲವನ್ನೂ ತಿಳಿದು ಮಾತನಾಡುತ್ತಿರುವಾಗ ನಾವೇನು ಹೇಳುವುದು ಎಂದು ಮೌನವಾಗಿದ್ದೆವು. ನಾವು ಯಾರೂ ಏನೂ ಹೇಳಲಿಲ್ಲ ಎಂದು ಮಂಜೇ ಗೌಡರು ವಿವರಿಸಿದರು. ಇಂದಿನ ಸಭೆ ಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ಜಿ.ಟಿ.ದೇವೇಗೌಡರ ಪುತ್ರರೂ ಆದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ಹೆಚ್.ಡಿ.ಕೋಟೆ ಜೆಡಿಎಸ್ ಮುಖಂಡ ಕೃಷ್ಣನಾಯಕ್, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ. ರವಿಕುಮಾರ್, ಮಾಜಿ ಕಾರ್ಪೋರೇಟರ್‌ಗಳಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಮತ್ತೆರಡು ಹುಲಿ ಮರಿಗಳ ಸೆರೆ

ಅಂಚಲ್ಲಿ ಆತಂಕ ಮೂಡಿಸಿದ್ದ ನಾಲ್ಕು ಹುಲಿ ಮರಿಗಳಲ್ಲಿ ಈಗಾಗಲೇ ಜ.15ರಂದು 10 ತಿಂಗಳ ಹೆಣ್ಣು ಹುಲಿ ಮರಿಯನ್ನ ಸೆರೆ ಹಿಡಿಯಲಾಗಿತ್ತು. ಮೂರು ಮರಿಗಳಿಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಸಿಬ್ಬಂದಿಗೆ ಕಳೆದ ರಾತ್ರಿ ಗಂಡು ಹುಲಿ ಮರಿಯೊಂದು ಕಣ್ಣಿಗೆ ಬಿದ್ದಿತ್ತು. ಕೂಡಲೇ ಅರಣ್ಯ ಸಿಬ್ಬಂದಿ, ಇಬ್ಬರು ಪಶುವೈದ್ಯರು ಹಾಗೂ ನಾಲ್ಕು ಸಾಕಾನೆಗಳೊಂದಿಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ್ದಾರೆ. ಆನೆ ಮೇಲಿದ್ದ ಡಿಆರ್‌ಎಫ್ ರಂಜನ್, ಹುಲಿ ಮರಿಗೆ ಅರವಳಿಕೆ ಮದ್ದು ನೀಡಿದ್ದು, ಅದು ಪ್ರಜ್ಞೆ ಕಳೆದುಕೊಂಡ ನಂತರ ಅದಕ್ಕೆ ಪಶು ವೈದ್ಯರಾದ ಡಾ.ವಾಸಿಂ ಮಿರ್ಜಾ ಹಾಗೂ ಡಾ.ಆದರ್ಶ್ ಪ್ರಥಮ ಚಿಕಿತ್ಸೆ ನೀಡಿ, ಉಪಚರಿಸಿದ್ದಾರೆ. ಪರಿಶೀಲನೆ ವೇಳೆ ಹುಲಿ ಮರಿಯ ಆರೋಗ್ಯವಾಗಿರುವುದನ್ನು ಖಚಿತಪಡಿಸಿಕೊಂಡ ಬಳಿಕ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಇಂದು ರಾತ್ರಿ ಮತ್ತೊಂದು ಹೆಣ್ಣು ಹುಲಿ ಮರಿ ಚಾಮರಾಜನಗರ ತಾಲೂಕು ಉಡಿಗಾಲ ಬಳಿ ಪತ್ತೆಯಾಗಿದ್ದು, ಅದನ್ನು ಸುರಕ್ಷಿತ ವಾಗಿ ಸೆರೆ ಹಿಡಿಯಲಾಗಿದೆ.

ಈಗಾಗಲೇ ಜ.9ರಂದು ತಾಯಿ ಹುಲಿ ಸೆರೆ ಸಿಕ್ಕಿತ್ತು. ಜ.15ರಂದು ಹೆಣ್ಣು ಹುಲಿ ಮರಿ, ಕಳೆದ ರಾತ್ರಿ ಗಂಡು ಹುಲಿ ಮರಿ, ಇಂದು ರಾತ್ರಿ ಹೆಣ್ಣು ಹುಲಿ ಮರಿ ಸೆರೆ ಹಿಡಿದಿರುವುದರಿಂದ, ಇನ್ನು ಒಂದು ಮರಿ ಸುತ್ತಮುತ್ತ ಅಡಗಿರಬಹುದು. ಈ ಮರಿಯನ್ನು ಸೆರೆ ಹಿಡಿಯಲು ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದೆ. ತಾಯಿಯಿಂದ ಬೇರ್ಪಟ್ಟು 10 ದಿನ ಕಳೆದಿದ್ದು, ಮರಿಗಳು ಆಹಾರದ ಸಮಸ್ಯೆ ಎದುರಿಸುತ್ತಿರುವ ಶಂಕೆ ವ್ಯಕ್ತವಾಗಿದೆ. ಬೇಟೆಯಾಡುವ ಕಲೆ ಇನ್ನು ಕಲಿತಿಲ್ಲದ ಇವು ಹಸಿವು ನೀಗಿಸಿಕೊಳ್ಳಲು ನವಿಲು, ನಾಯಿ ಬಿಟ್ಟು, ದೊಡ್ಡ ಪ್ರಾಣಿಗಳನ್ನು ಬೇಟೆಯಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಉಳಿದ ಎರಡು ಮರಿಗಳು ಹಸಿವಿನಿಂದ ಕಂಗೆಡದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ರಾತ್ರಿ ವೇಳೆಯೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ.

ಕಾರ್ಯಾಚರಣೆ ವೇಳೆ ಚಾಮರಾಜ ನಗರ ವೃತ್ತದ ಸಿಸಿಎಫ್ ಡಾ.ಮಾಲತಿ ಪ್ರಿಯಾ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಭಾಸ್ಕರ್, ಎಸಿಎಫ್ ಮಂಜುನಾಥ್, ಬಿಆರ್‌ಟಿ ಎಲ್ಲಾ ವಲಯದ ಆರ್‌ಎಫ್‌ಓ ಸೇರಿದಂತೆ ಮುಂಚೂಣಿ ಸಿಬ್ಬಂದಿ ಪಾಲ್ಗೊಂಡಿದ್ದರು.

ಸರ್ಕಾರಿ ಭೂಮಿ ಒತ್ತುವರಿ ತೆರವು

ದಾಖಲು ಮಾಡಲಾಗಿತ್ತು ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿಯ ಭದ್ರತೆಯೊಂದಿಗೆ ಜ.16 ರಂದು ಸ್ಥಳಕ್ಕೆ ಧಾವಿಸಿದ ತಹಶೀಲ್ದಾರ್ ಮಹೇಶ್ ಕುಮಾರ್ ಮತ್ತು ಇತರೆ ಅಧಿಕಾರಿಗಳು ದಾಖಲೆ ಗಳನ್ನು ತೋರಿಸಿ, ಜಮೀನು ಸರ್ಕಾರಕ್ಕೆ ಸೇರಿದ್ದಾಗಿದ್ದು ನೀವು ತಕ್ಷಣ ತೆರವುಗೊಳಿಸದ್ದಿದ್ದರೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿ, ತದನಂತರ ಜೆಸಿಬಿಗಳನ್ನು ಕರೆದೊಯ್ದು ಗ್ರಾಮಸ್ಥರು ಒತ್ತುವರಿ ಮಾಡಿಕೊಂಡಿದ್ದ 30 ಎಕರೆ ಭೂಮಿಯಲ್ಲಿ ಮಾಡಿದ್ದ ನಿರ್ಮಾಣಗಳ ತೆರವುಗೊಳಿಸಿ ಸರ್ಕಾರದ ಸ್ವಾಮ್ಯಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧನ, ಬಿಡುಗಡೆ: ಗ್ರಾಮಾಡಳಿತಾಧಿಕಾರಿ ಭವ್ಯ ಅವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು, ಆರೋಪಿ ಪುಟ್ಟಸ್ವಾಮಿಯನ್ನು ಬಂಧಿಸಿ, ವಿಚಾರಣೆ ನಡೆಸಲಾಗಿತ್ತು. ನಂತರ ಪುಟ್ಟಸ್ವಾಮಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

> ಒತ್ತುವರಿಯಾಗಿದ್ದ ಸರ್ಕಾರಿ ಜಾಗವನ್ನು ತೆರವುಗೊಳಿಸಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಇದಕ್ಕೂ ಮುನ್ನ ಗ್ರಾಮಾಡಳಿತಾಧಿಕಾರಿ ಭವ್ಯ ಅವರ ಮೇಲೆ ಧಮ್ಕಿ ಹಾಕಲಾಗಿತ್ತು. ಇದೆಲ್ಲವನ್ನು ಗಮನಿಸಿ, ಕಾನೂನು ರೀತಿಯಲ್ಲಿ ಕ್ರಮವಹಿಸಲಾಗಿದೆ.
> - ಮಹೇಶ್‌ಕುಮಾರ್, ತಹಸಿಲ್ದಾರ್

ಮುಂದುವರೆದ ಪ್ರತಿಭಟನೆ: ಮತ್ತೊಂದೆಡೆ ಕೃಷಿ ಭೂಮಿಯನ್ನು ನಿಮಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ನೀಡಿದ್ದಾರೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಗುಡುಮಾದನಹಳ್ಳಿ ಭೂ ಹೋರಾಟ ಸಮಿತಿ ವತಿಯಿಂದ ಕಳೆದ ಎರಡು ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ಮುಂದುವರೆದಿದ್ದು, ನಿಮಾನ್ಸ್ ಆಸ್ಪತ್ರೆಗೆ ಬೇರೆ ಸ್ಥಳ ಗುರ್ತಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಭಾನುವಾರ ಮನವಿ ಸಲ್ಲಿಸಲಾಗಿದೆ ಎಂದು ಹೋರಾಟ ನಿರತ ರೈತ ಮುಖಂಡರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಯೋಜನೆ ಸ್ಥಗಿತ

ಅನುಷ್ಠಾನಕ್ಕೆ ನಿರ್ಧರಿಸಲಾಗಿತ್ತು.

ಪರಿಷ್ಕೃತ ಯೋಜನೆಗೂ ಗ್ರಹಣ: ಮಡಿಕೇರಿವರೆಗೆ ರೈಲು ಮಾರ್ಗ ವಿಸ್ತರಿಸಬೇಕೆಂಬ ಶತಮಾನದ ಬಹುನಿರೀಕ್ಷೆಯೊಂದಿಗೆ ಈ ಮಹತ್ವದ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ, ಹಿಂದಿನ ರೈಲ್ವೆ ಸಮೀಕ್ಷೆಯಲ್ಲಿ ಆರ್ಥಿಕವಾಗಿ ಅನುಕೂಲಕರವಲ್ಲ ಎಂಬ ಕಾರಣದಿಂದ ಯೋಜನೆಯನ್ನು ಕೈಬಿಡಲಾಗಿತ್ತು. ಅಲ್ಲದೆ ಕಾವೇರಿ ನದಿಯ ಸ್ವಾಭಾವಿಕ ಹರಿವಿಗೆ ರೈಲ್ವೆ ಯೋಜನೆ ಅಡ್ಡಿಯಾಗುತ್ತದೆ ಎಂದು ಪರಿಸರವಾದಿಗಳೂ ತೀವ್ರವಾಗಿ ವಿರೋಧಿಸಿದ್ದರು. ನಂತರ ಪರಿಷ್ಕೃತಗೊಂಡ ಮೈಸೂರು–ಕುಶಾಲನಗರ ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತಾದರೂ ರೈಲುಗಳ ಮಿತ ಸಂಚಾರ ಹಾಗೂ ಲಾಭದಾಯಕವಲ್ಲ ಎಂಬ ಕಾರಣದಿಂದ ರೈಲ್ವೆ ಸಚಿವಾಲಯವೇ ತಡೆ ಹಿಡಿದಿದೆ.

ಬಿಗ್‌ಬಾಸ್ ಸೀಸನ್–12ರ ವಿನ್ನರ್ ಗಿಲ್ಲಿನಟ

ಆರ್ ಜೆ ಅಮಿತ್ ಪವಾರ್ ಕಾಲಿಟ್ಟಿದ್ದರು. ಇನ್ನು ವೈಲ್ಡ್ ಕಾರ್ಡ್ ಸ್ಪರ್ಧಿಗಳಾಗಿ ರಘು, ರಿಷಾ ಗೌಡ ಹಾಗೂ ಸೂರಜ್ ಸಿಂಗ್ ಮತ್ತು ಗೆಸ್ಟ್‌ಗಳಾಗಿ ರಜತ್, ಚೈತ್ರಾ ಬಿಗ್‌ಬಾಸ್ ಮನೆಗೆ ತೆರಳಿದ್ದರು. ಅಂತಿಮವಾಗಿ ಬಿಗ್ ಬಾಸ್ ಫಿನಾಲೆಗೆ ಗಿಲ್ಲಿ ನಟ, ಅಶ್ವಿನಿ ಗೌಡ, ರಕ್ಷಿತಾ ಶೆಟ್ಟಿ, ಕಾವ್ಯ ಶೈವ, ರಘು ಹಾಗೂ ಧನುಷ್ ಸೇರಿದಂತೆ 6 ಸ್ಪರ್ಧಿಗಳು ಆಯ್ಕೆಯಾಗಿದ್ದರು.

ಭಾನುವಾರ ನಡೆದ ಫಿನಾಲೆ ಕಾರ್ಯಕ್ರಮದಲ್ಲಿ ಮೊದಲಿಗೆ 6ನೇ ಎಲಿಮಿನೇಟ್ ಆಗಿ ಧನುಷ್ ಹೊರ ಬಂದರು. ಆನಂತರ 5ನೇಯವರಾಗಿ ರಘು ಬಿಗ್ ಬಾಸ್ ಮನೆಯಿಂದ ಆಚೆ ಬಂದರು. 4ನೇ ಕಂಟೆಸ್ಟೆಂಟ್ ಆಗಿ ಕಾವ್ಯ ಮನೆಯಿಂದ ಆಚೆ ಬಂದರು.

ಅಲ್ಲಿಂದ ಫಿನಾಲೆ ಇನ್ನಷ್ಟು ರೋಚಕ ತಿರುವು ಪಡೆದುಕೊಂಡಿತ್ತು. ಅಂತಿಮವಾಗಿ ಗಿಲ್ಲಿ ನಟ, ಅಶ್ವಿನಿ ಗೌಡ ಮತ್ತು ರಕ್ಷಿತಾ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಈ ವೇಳೆ 3ನೇ ಎಲಿಮಿನೇಟ್ ಆಗಿ ಅಶ್ವಿನಿ ಗೌಡ ಮನೆಯಿಂದ ಹೊರ ಬಂದರು. ಅಂತಿಮವಾಗಿ ಕಿಚ್ಚ ಸುದೀಪ್ ಅವರು ಗಿಲ್ಲಿ ನಟ ಅವರ ಕೈ ಎತ್ತುವ ಮೂಲಕ ಸೀಸನ್ 12ರ ವಿಜೇತರನ್ನು ಘೋಷಿಸಿದರು. ಗಿಲ್ಲಿ ಬರೋಬ್ಬರಿ 40 ಕೋಟಿಗೂ ಅಧಿಕ ಮತ ಪಡೆದು ಬಿಗ್‌ಬಾಸ್ ವಿನ್ನರ್ ಆಗಿ ಹೊರಹೊಮ್ಮಿದ್ದಾರೆ.

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದಿಂದ ಸಾವಿರ ಹಾಸಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ

- ಸರ್ಕಾರದಿಂದ 99 ವರ್ಷಗಳ ಗುತ್ತಿಗೆ ಆಧಾರದಲ್ಲಿ 10 ಎಕರೆ ಭೂಮಿ
- ಐದು ವರ್ಷದಲ್ಲಿ ಯೋಜನೆಗಳ ಪೂರ್ಣ; ಒಡಂಬಡಿಕೆಗೆ ಸಹಿ



ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಅಜೀಂ ಪ್ರೇಮ್ ಜಿ ಪ್ರತಿಷ್ಠಾನ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಬೆಂಗಳೂರು,ಜ.18 (ಕೆಎಂಶಿ)–ಒಂದು ಸಾವಿರ ಹಾಸಿಗೆಗಳ ಚಾರಿಟಬಲ್ ಸೂಪರ್ ಸ್ಪೆಷಾಲಿಟಿ ಹಾಗೂ ಮಾನವ ಬಹು ಅಂಗಾಂಗ ಕಸಿ ಆಸ್ಪತ್ರೆ ಸ್ಥಾಪನೆಗೆ ಮುಂದಾಗಿರುವ ಅಜೀಂ ಪ್ರೇಮ್ ಜಿ ಪ್ರತಿಷ್ಠಾನಕ್ಕೆ ಸರ್ಕಾರ 10 ಎಕರೆ ಜಾಗವನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಅಜೀಂ ಪ್ರೇಮ್ ಜಿ ಪ್ರತಿಷ್ಠಾನ ನಡುವೆ ಒಡಂಬಡಿಕೆಗೆ ಸಹಿ ನಂತರ ಮಾತನಾಡಿದ ಅವರು, ಆಸ್ಪತ್ರೆ ನಿರ್ಮಾಣಕ್ಕೆ 5 ವರ್ಷಗಳಲ್ಲಿ 4,000 ಕೋಟಿ ರೂ. ವೆಚ್ಚದ ಗುರಿ ಹೊಂದಿದ್ದು, ಜಾಗವನ್ನು ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆ ಆವರಣದಲ್ಲಿ ನೀಡಲಾಗುವುದು ಎಂದರು.

ಅಜೀಂ ಪ್ರೇಮ್ ಜಿ ಪ್ರತಿಷ್ಠಾನದ ಮಹತ್ಕಾರ್ಯಕ್ಕೆ ಸರ್ಕಾರ ಆಭಾರಿಯಾಗಿದೆ. ಉಚಿತ ಸೇವೆಗೆ ಸಂಸ್ಥೆ ಮುಂದಾಗಿರುವುದು ಶ್ರೇಷ್ಠ ಕಾರ್ಯ, ಶ್ಲಾಘನೀಯ.

ಕಳೆದ 25 ವರ್ಷಗಳಿಂದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಪ್ರತಿಷ್ಠಾನ ದೊಡ್ಡ ಪ್ರಮಾಣದಲ್ಲಿ ಸೇವೆ ಸಲ್ಲಿಸುತ್ತಿದೆ, 2021ರಲ್ಲಿ ಶಿಕ್ಷಕರ ತರಬೇತಿ, 2024ರಲ್ಲಿ ಎಲ್‌ಕೆಜಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ವಾರದಲ್ಲಿ 4 ದಿನ ಕೋಳಿಮೊಟ್ಟೆ ಕೊಡುವ ಕಾರ್ಯಕ್ರಮಕ್ಕೆ ಒಂದೂವರೆ ಕೋಟಿ ರೂ. ನೀಡಿದೆ. ಸರ್ಕಾರಿ ಕಾಲೇಜುಗಳಲ್ಲಿ ಓದಿದವರಿಗೆ ವರ್ಷಕ್ಕೆ 30 ಸಾವಿರ ರೂ.ಗಳನ್ನು ದೀಪಿಕಾ ವಿದ್ಯಾರ್ಥಿವೇತನ ದಡಿ ನೀಡುತ್ತಿದ್ದಾರೆ. ಆರೋಗ್ಯ ಶುರುವಾಗುವುದು ಆಶಾ ಕಾರ್ಯಕರ್ತರು, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ, ಜನತೆ ಖಾಯಿಲೆ ಬೀಳದಿರುವಂತೆ ತಡೆಯುವುದು ಮುಖ್ಯ ಗುರಿಯಾಗಬೇಕು, ಕರ್ನಾಟಕ ಅತ್ಯಂತ ಕ್ರಿಯಾಶೀಲ ರಾಜ್ಯವಾಗಿದ್ದು, ಆರೋಗ್ಯ ವ್ಯವಸ್ಥೆ ಬಲಪಡಿಸುವಲ್ಲಿ ಅಧಿಕಾರಿಗಳು ಹಾಗೂ ಆಡಳಿತ ಒಟ್ಟಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದಿಂದ ಆದಿಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳಿಗೆ ಗೌರವ ಸಮರ್ಪಣೆ



ಅಗ್ರಹಾರ ವೃತ್ತದಲ್ಲಿ ಆದಿಚುಂಚನಗಿರಿ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ 81ನೇ ಜಯಂತಿ ಆಚರಿಸಲಾಯಿತು.

ಮೈಸೂರು,ಜ.18(ಎಂಟಿವೈ)– ಆದಿ ಚುಂಚನಗಿರಿ ಮಹಾಸಂಸ್ಥಾನದ ಪರಮ ಪೂಜ್ಯ ಜಗದ್ಗುರು ದಿ.ಡಾ.ಬಾಲ ಗಂಗಾಧರನಾಥ ಸ್ವಾಮೀಜಿ ಅವರ 81ನೇ ಜಯಂತ್ಯೋತ್ಸವವನ್ನು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದಿಂದ ಮೈಸೂರಲ್ಲಿ ಆಚರಿಸಲಾಯಿತು.

ಮೈಸೂರಿನ ಅಗ್ರಹಾರ ವೃತ್ತದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಲಾಯಿತು.

ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್ ಮಾತನಾಡಿ, ಡಾ.ಬಾಲಗಂಗಾಧರನಾಥ ಶ್ರೀಗಳು ಅನ್ನ, ಅಕ್ಷರ ದಾಸೋಹದ ಮೂಲಕ ಎಲ್ಲಾ ವರ್ಗದ ಬಡ ಜನರಿಗೆ ನೆರವಾಗಿದ್ದರು. ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಅವರನ್ನು ಸತ್ಪ್ರಜೆಗಳಾಗಿ ರೂಪಿಸಿದರು. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ರಾಜ್ಯದಲ್ಲಿ 554ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೂಲಕ ಮುನ್ನಡೆಸಿಕೊಂಡು ಬರುತ್ತಿದ್ದ ಶ್ರೀಗಳು, ಮಹಾನ್ ತಪಸ್ವಿ, ನಾಡಿನ ಮಹಾನ್ ಸಂತ. ಇವರ ಆದರ್ಶ, ತತ್ವಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದರು.

ಬಳಿಕ ನಟ ಎಸ್.ಜಯಪ್ರಕಾಶ್ ಮಾತನಾಡಿ, ಶ್ರೀಗಳು ದೇಶ ಕಂಡ ಅಪ್ರತಿಮ ಮಹಾ ಸಂತರಾಗಿದ್ದು, ರಾಜ್ಯದಲ್ಲಿ ಹಿಂದುತ್ವದ ಬಗ್ಗೆ ಬಹಳಷ್ಟು ಪ್ರಚಾರ ಮಾಡಿದ್ದರು. ಬೆಂಗಳೂರಿನಲ್ಲಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶ್ರೀಗಳು ಹಾಗೂ ಪೇಜಾವರ ಶ್ರೀಗಳು ಹಿಂದುತ್ವದ ಬೃಹತ್ ಸಮಾವೇಶ ಮಾಡಿ ದೇಶದ ಗಮನ ಸೆಳೆದಿದ್ದರು. ಇವರೆಲ್ಲರ ಹೋರಾಟದ ಫಲದಿಂದ ಇಂದು ಪ್ರಧಾನಿಯವರು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮಾಡಿದ್ದಾರೆ. ಇಂತಹ ಶ್ರೀಗಳ ಜೀವನ ಚರಿತ್ರೆಯನ್ನು ಪಠ್ಯಗಳಲ್ಲಿ ಅಳವಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ರಘುರಾಂ ಕೆ.ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಅಖಿಲ ಕರ್ನಾಟಕ ಒಕ್ಕಲಿಗ ಸಂಘದ ಗೌರವಾಧ್ಯಕ್ಷ ಗೋವಿಂದೇಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಗಣೇಶ್, ಲಕ್ಷ್ಮೀದೇವಿ, ಶಿವಲಿಂಗಯ್ಯ, ಚರಣ್‌ರಾಜ್, ಯಶ್ವಂತ್‌ಕುಮಾರ್, ನೇಹಾ, ಶೋಭಾರಾಣಿಗೌಡ, ಭಾಗ್ಯಮ್ಮ, ಡಾ.ಮೋಗಣ್ಣಾಚಾರ್, ಹನುಮಂತಯ್ಯ, ಸುಜಾತಾ, ಸುಬ್ಬೇಗೌಡ, ಆನಂದ್‌ಗೌಡ, ಪ್ರದೀಪ್, ದರ್ಶನ್‌ಗೌಡ, ಅಶೋಕ್, ರಘು ಅರಸ್, ಪ್ರಭಾಕರ್, ರವೀಶ್, ರವಿ ನಾಯಕ್, ರಘು ಆಚಾರ್, ಮಹೇಶ್, ಪರಿಸರ ಚಂದ್ರು, ಚಂದ್ರಶೇಖರ್, ಸ್ವಾಮಿ, ನಾರಾಯಣ ಗೌಡ ಇನ್ನಿತರರು ಪಾಲ್ಗೊಂಡಿದ್ದರು.

ಇಂದು ಭಾರತೀಯ ಜೀವ ವಿಮಾ ನಿಗಮದ ಸಂಸ್ಥಾಪನಾ ದಿನಾಚರಣೆ

ಮೈಸೂರು,ಜ.18(ಎಂಟಿವೈ)– ಭಾರತೀಯ ಜೀವ ವಿಮಾ ಸಂಸ್ಥೆ(ಎಲ್‌ಐಸಿ) ಸ್ಥಾಪನೆಯಾಗಿ 70 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಮೈಸೂರಿನ ಎಲ್ಲಾ ಎಲ್‌ಐಸಿ ಕಚೇರಿಯಲ್ಲಿ ಜ.19ರಂದು ಎಲ್‌ಐಸಿ ಸಂಸ್ಥಾಪನಾ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ವಿಮಾ ನಿಗಮ ನೌಕರರ ಸಂಘದ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ.ರಾಮು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಸಗಿ ಸಂಸ್ಥೆಗಳು ನಡೆಸುತ್ತಿದ್ದ ವಿಮಾ ಸಂಸ್ಥೆಗಳು ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಂಡು ವಂಚಿಸುತ್ತಿದ್ದವು. ಈ ಹಿನ್ನೆಲೆಯಲ್ಲಿ 1956ರ ಜ.19ರಂದು ಅಂದಿನ ಸರ್ಕಾರ ಜೀವ ವಿಮಾ ವಹಿವಾಟನ್ನು ರಾಷ್ಟ್ರೀಕರಣಗೊಳಿಸಿತು. 1956ರ ಸೆ.1ರಂದು ಎಲ್‌ಐಸಿ ಸ್ಥಾಪನೆಯಾಯಿತು. ಜ.19ರಂದು ಎಲ್ಲಾ ಎಲ್‌ಐಸಿ ಕಚೇರಿಗಳಲ್ಲಿ ಸಂಸ್ಥಾಪನಾ ದಿನಾಚರಣೆ ಆಚರಿಸಲಾಗುವುದು. ಬನ್ನಿಮಂಟಪದಲ್ಲಿನ ಪ್ರಧಾನ ಕಚೇರಿ ಹಾಗೂ ಉಪಕಚೇರಿಗಳಲ್ಲೂ ಆಚರಿಸಲಾಗುವುದು ಎಂದರು.

ಭೋಜನ ವಿರಾಮದ ವೇಳೆ ನೌಕರರು, ಅಧಿಕಾರಿಗಳು ಗೇಟ್ ಮೀಟಿಂಗ್‌ನಲ್ಲಿ ಪಾಲ್ಗೊಂಡು ಎಲ್‌ಐಸಿಯನ್ನು ಇನ್ನಷ್ಟು ಬಲವರ್ಧನೆಗೊಳಿಸುವ ಸಂಬಂಧ ಚರ್ಚಿಸಲಿದ್ದಾರೆ. ಕಳೆದ 25 ವರ್ಷಗಳಿಂದ ಎಲ್‌ಐಸಿ ಖಾಸಗಿ ವಿಮಾ ಕಂಪನಿಗಳ ಸವಾಲು ಎದುರಿಸುತ್ತಿದೆ. ಈ ಬಗ್ಗೆಯೂ ಚರ್ಚಿಸಲಾಗುವುದು. ಎಲ್‌ಐಸಿಯಲ್ಲಿನ ಹಣ ಸುಭದ್ರ ಎಂಬುದನ್ನು ಗ್ರಾಹಕರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗುತ್ತದೆ. ಎಲ್‌ಐಸಿಯಲ್ಲಿ ಸುಮಾರು 40 ಸಾವಿರ ಮಂದಿ ಸಿಬ್ಬಂದಿ ಇದ್ದಾರೆ. 14 ಲಕ್ಷ ಏಜೆಂಟರಿದ್ದಾರೆ. ಹೀಗಾಗಿ ಈಗಿನ ಸ್ಪರ್ಧೆಗಳಲ್ಲಿ ಇವರನ್ನು ಹೇಗೆ ತೊಡಗಿಸಿಕೊಳ್ಳಬೇಕೆಂಬುದನ್ನು ಮನವರಿಕೆ ಮಾಡಿಕೊಡಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವಿಮಾ ನಿಗಮ ನೌಕರರ ಸಂಘದ ಮೈಸೂರು ವಿಭಾಗದ ಪದಾಧಿಕಾರಿಗಳಾದ ಸರ್ವಮಂಗಳ, ಹೆಚ್.ವಿಜಯಕುಮಾರ್, ವಿಲಿಯಂ ಸೆರಾವೋ ಉಪಸ್ಥಿತರಿದ್ದರು.

ವಿಜಯನಗರ ಕಾಲೇಜು ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಊಟ; ಇಂದು ಚಾಲನೆ

ಮೈಸೂರು, ಜ.18– ಮೈಸೂರು ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸುಮಾರು 650 ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಇಸ್ಕಾನ್ ಅಕ್ಷಯಪಾತ್ರ ಸೇವೆ ಮೂಲಕ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಿದ್ದು, ಈ ಸತ್ಕಾರ್ಯಕ್ಕೆ ಜ.19ರಂದು ಬೆಳಗ್ಗೆ 11 ಗಂಟೆಗೆ ಚಾಲನೆ ದೊರಕಲಿದೆ ಎಂದು ಶಾಸಕರ ಆಪ್ತ ಸಹಾಯಕ ಹನುಮೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೈಸೂರು ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯೂ ಆದ ನಟ ಎಸ್.ಜಯಪ್ರಕಾಶ್(ಜೆಪಿ), ಬಿಜೆಪಿ ಕಚೇರಿ ಬಳಿ ಸಿಹಿ ವಿತರಿಸಿ, ಸಂಭ್ರಮಿಸಿದರು. ಪಕ್ಷದ ಮುಖಂಡರು, ಕಾರ್ಯಕರ್ತರಿದ್ದರು.

ಶಾಸಕ ರಿಜ್ವಾನ್ ಅರ್ಷದ್ ಬಗ್ಗೆ ನಟ ಝೈದ್ ಖಾನ್ ಹೇಳಿಕೆ ಸರಿಯಲ್ಲ

ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಮೋಸಿನ್ ಖಾನ್ ಆಕ್ಷೇಪ



ರಿಜ್ವಾನ್ ಅರ್ಷದ್ ಅಭಿಮಾನಿಗಳ ಬಳಗದಿಂದ ಪತ್ರಿಕಾಗೋಷ್ಠಿ ನಡೆಯಿತು.

ಮೈಸೂರು,ಜ.18(ಪಿಎಂ)– ಶಿವಾಜಿ ನಗರ ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ನಾವೇ ಟಿಕೆಟ್ ಕೊಡಿಸಿ, ಗೆಲ್ಲಿಸಿದ್ದೇವೆ ಎಂದು ಸಚಿವ ಜಮೀರ್ ಅಹ್ಮದ್ ಅವರ ಪುತ್ರ ಮತ್ತು ನಟ ಝೈದ್ ಖಾನ್ ಹೇಳಿಕೆ ನೀಡಿದ್ದು, ಇದು ಸರಿಯಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಮೋಸಿನ್ ಖಾನ್, ಪಕ್ಷನಿಷ್ಠೆ ನೋಡಿ ರಿಜ್ವಾನ್ ಅರ್ಷದ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆಯೇ ಹೊರತು, ಯಾರು ಕೊಡಿಸಿಲ್ಲ ಎಂದು ತಿಳಿಸಿದರು.

ನಜರ್‌ಬಾದ್‌ನ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ರಿಜ್ವಾನ್ ಅರ್ಷದ್ ಅಭಿಮಾನಿಗಳ ಬಳಗದಿಂದ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊನ್ನೆ ಮೈಸೂರಿನಲ್ಲಿ ಝೈದ್ ಖಾನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ 2023ರ ವಿಧಾನಸಭೆ ಚುನಾವಣೆ ಸಂಬಂಧ ನಮ್ಮ ತಂದೆಯವರೇ ರಿಜ್ವಾನ್‌ರಿಗೆ ಸೀಟ್ ಕೊಡಿಸಿದರೆಂದು ಹೇಳಿದ್ದಾರೆ. ಮಾತ್ರವಲ್ಲದೆ, ತಮಗೆ 2023ರ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಬಿ ಫಾರಂ ಕೊಟ್ಟಿದ್ದರು. ನಾನು ಮನಸ್ಸು ಮಾಡಿದ್ದರೆ ಶಿವಾಜಿನಗರ ಕ್ಷೇತ್ರದಿಂದ ಶಾಸಕನಾಗಬಹುದಿತ್ತು ಎಂದು ಹೇಳಿದ್ದಾರೆ. ಇಂತಹ ಹೇಳಿಕೆಯು ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಲಿದೆ ಎಂದು ಹೇಳಿದರು.

ರಿಜ್ವಾನ್ ಅರ್ಷದ್ ಅವರು ಕಾಲೇಜು ವಿದ್ಯಾರ್ಥಿ ದೆಸೆಯಿಂದ ರಾಜಕಾರಣ ಮಾಡಿದವರು. ಅವರು ಎನ್‌ಎಸ್‌ಯುಐ ರಾಜ್ಯ ಪದಾಧಿಕಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದವರು. ನಂತರ 2009–10ರಲ್ಲಿ ಆಲ್ ಇಂಡಿಯಾ ಯೂತ್ ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. 2011ರಲ್ಲಿ ಚುನಾವಣೆ ಮೂಲಕ ರಾಜ್ಯ ಯುವ ಕಾಂಗ್ರೆಸ್‌ನ ಪ್ರಥಮ ಚುನಾಯಿತ ಅಧ್ಯಕ್ಷರಾಗಿದ್ದರು. ಅವರ ಶ್ರಮ, ಪಕ್ಷನಿಷ್ಠೆ ನೋಡಿ ಕಾಂಗ್ರೆಸ್ ಟಿಕೆಟ್ ಕೊಡಿದ್ದು, ಇವರಿಂದ ಅವರಿಗೆ ಟಿಕೆಟ್ ಸಿಕ್ಕಿದ್ದಲ್ಲ ಎಂದರು.

ಝೈದ್ ಖಾನ್ ಅವರ ತಂದೆ ನಮ್ಮ ಪಕ್ಷದ ಒಬ್ಬ ನಾಯಕರಾಗಿ ಪಕ್ಷದ ಎಲ್ಲಾ ನಾಯಕರೊಂದಿಗೆ ಒಗ್ಗಟ್ಟಿನಿಂದ ಇದ್ದಾರೆ. ಆದರೆ ಇವರು ಈ ರೀತಿ ಹೇಳಿಕೆ ನೀಡಿರುವುದು ಸರಿಯಲ್ಲ ಎಂದರು. ಮುಖಂಡರಾದ ರಾಜರಾಜೇಂದ್ರ, ಸೈಯದ್ ಅಬ್ಬಾಸ್, ಅಬ್ರಾರ್‌ಖಾನ್, ಚೇತನ್ ಕಾಂತರಾಜು, ರಫೀಕ್ ಪಾಷ ಗೋಷ್ಠಿಯಲ್ಲಿದ್ದರು.

ಶುಭ ಹಾರೈಕೆ...



ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ನಿತೀನ್ ನಬಿನ್ ಅವರನ್ನು ಮಾಜಿ ಸಂಸದ ಪ್ರತಾಪ್‌ಸಿಂಹ ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪುಷ್ಪಗುಚ್ಛ ನೀಡಿ, ಶುಭ ಹಾರೈಸಿದರು.

ಪಿಎಚ್.ಡಿ ಪದವಿ



ಮೈಸೂರು: ಡಾ.ಕೆ.ಸೌಭಾಗ್ಯವತಿ ಅವರ ಮಾರ್ಗದರ್ಶನದಲ್ಲಿ ಜೆ.ಮಂಜು ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಮೈಲಹಳ್ಳಿ ರೇವಣ್ಣ ಅವರ ಸಾಹಿತ್ಯ' ಕುರಿತ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶ್ರೀ ಚುಂಚಶ್ರೀ ಜಯಂತ್ಯುತ್ಸವ; ಸಾರ್ಥಕ ಸೇವೆ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಭೈರವೈಕ್ಯ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ 81ನೇ ಜಯಂತ್ಯುತ್ಸವದ ಅಂಗವಾಗಿ ಮೈಸೂರು ಜೆ.ಪಿ. ನಗರದ ವಿಶ್ವಮಾನವ ಒಕ್ಕಲಿಗ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀಮತಿ ಪುಟ್ಟೀರಮ್ಮ ಕಿವುಡ ಹೆಣ್ಣು ಮಕ್ಕಳ ವಸತಿ ಶಾಲೆಗೆ ಲೇಖನ ಸಾಮಗ್ರಿ ಹಾಗೂ ಆಹಾರ ಪದಾರ್ಥ ನೀಡಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಕೆ.ಎಸ್.ಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಡಾ.ಕಿಶೋರ್, ಸಣ್ಣಸ್ವಾಮಿ ಗೌಡ, ಶಿವಕುಮಾರ್, ಕಮಲಾದೇವಿ ಮತ್ತಿತರರು ಉಪಸ್ಥಿತರಿದ್ದರು.

ಏಕಲವ್ಯ ಮಾದರಿ ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.18–ಭಾರತ ಸರ್ಕಾರದ ಪರಿಶಿಷ್ಟ ವರ್ಗಗಳ ಸಚಿವಾಲಯದ ಅಡಿಯಲ್ಲಿ ಸೊಳ್ಳೆಪುರದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿಗೆ ಸಿಬಿಎಸ್‌ಸಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಊಟ, ವಸತಿ, ಪಠ್ಯಪುಸ್ತಕ ಮತ್ತು ಮೂಲ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಜ.25 ರಂದು ಕೊನೆಯ ದಿನಾಂಕವಾಗಿರುತ್ತದೆ. ಫೆ.18ರಂದು ಪ್ರವೇಶ ಪತ್ರ ಬಿಡುಗಡೆ ಮಾಡಲಾಗುತ್ತದೆ. ನಂತರ ಮಾ.1ರಂದು ಪ್ರವೇಶ ಪರೀಕ್ಷೆ ನೀಡಲಾಗುತ್ತದೆ. http://cetonline.karnataka.gov.in/kea http://emrssollepuram.in ಲಿಂಕ್ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ 9528242517, 6360255926 ಅನ್ನು ಸಂಪರ್ಕಿಸಬಹುದು ಎಂದು ಏಕಲವ್ಯ ಪಿಯು ರೆಸಿಡೆನ್ಸಿಯಲ್ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸ್ತುಸಂಗ್ರಹಾಲಯದಲ್ಲಿ ಉಪಯುಕ್ತ ಮಾಹಿತಿ ಪಡೆಯಿರಿ

ವಿದ್ಯಾರ್ಥಿಗಳಿಗೆ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪನಿರ್ದೇಶಕಿ ಗಿರಿಜಾಂಬ ಸಲಹೆ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವಸ್ತುಸಂಗ್ರಹಾಲಯಕ್ಕೆ ಶಾಲಾ ವಿದ್ಯಾರ್ಥಿಗಳು ಭೇಟಿ ನೀಡಿ, ಬುಡಕಟ್ಟು ಜನರು ಬಳಸುವ ಪರಿಕರ, ಛಾಯಾಚಿತ್ರ ಹಾಗೂ ಗ್ರಂಥಾಲಯ ವೀಕ್ಷಿಸಿದರು.

ಮೈಸೂರು,ಜ.18(ಎಂಟಿವೈ)– ಬುಡಕಟ್ಟು ಸಮುದಾಯದ ಆಚಾರ–ವಿಚಾರದ ಬಗ್ಗೆ ಬೆಳಕು ಚೆಲ್ಲುವ ಬುಡಕಟ್ಟು ಸಂಶೋಧನಾಲಯದ ವಸ್ತು ಸಂಗ್ರಹಾಲಯಕ್ಕೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುವಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯ ವೀಕ್ಷಣೆಗೆ ಬಂದಿದ್ದ ಮಕ್ಕಳೊಂದಿಗೆ ಮಾತನಾಡಿದ ಅವರು, ರಾಜ್ಯದ ವಿವಿಧೆಡೆ ನೆಲೆಸಿರುವ ಬುಡಕಟ್ಟು ಸಮುದಾಯ ತಮ್ಮದೇ ಸಂಪ್ರದಾಯ, ಆಚರಣೆ, ಜೀವನ ಕ್ರಮ ಹೊಂದಿದೆ. ಅರಣ್ಯ ವಾಸಿಗಳಾಗಿರುವ ಬುಡಕಟ್ಟು ಸಮುದಾಯ ಜೀವನ ಶೈಲಿ, ಆಚಾರ–ವಿಚಾರ ವಿಭಿನ್ನವಾಗಿದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯದ ಜನರ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ವಿವಿಧ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ ಎಂದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಯೋಗೀಶ್ ಅವರ ನಿರ್ದೇಶನದಂತೆ ವಸ್ತುಸಂಗ್ರಹಾಲಯಕ್ಕೆ ಬರುವ ವಿದ್ಯಾರ್ಥಿಗಳಿಗೆ ಮ್ಯೂಸಿಯಂನಲ್ಲಿರುವ ವಸ್ತುಗಳ ಬಗ್ಗೆ ಮಾಹಿತಿಯನ್ನು ಕ್ಯೂರೇಟರ್ ಡಾ.ಡಿ.ಸಿ.ರಾಮಕೃಷ್ಣಯ್ಯ ನೀಡಲಿದ್ದಾರೆ. ವಸ್ತು ಸಂಗ್ರಹಾಲಯದ ಪ್ರತಿಯೊಂದು ವಸ್ತುವಿನ ಬಗ್ಗೆ ವಿವರಣೆ ನೀಡುತ್ತಾರೆ. ಇಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟು ಜನರಿಂದ ಅವರು ವಂಶ ಪಾರಂಪರಿಕವಾಗಿ ಬಳಸಿಕೊಂಡು ಬಂದಿರುವ ಅನೇಕ ವಿಧದ ವಸ್ತುಗಳನ್ನು ಸಂಗ್ರಹಿಸಿ ಇಡಲಾಗಿದೆ. ಇವುಗಳಿಂದ ಬುಡಕಟ್ಟು ಜನರ ನಂಬಿಕೆ, ಆಚರಣೆ, ಕಲೆ, ಸಂಸ್ಕೃತಿ, ಅವರ ಭೇಟಿ ಸಂಸ್ಕೃತಿ ಹಾಗೂ ಬುಡಕಟ್ಟು ಮತ್ತು ಬುಡಕಟ್ಟೇತರರಿಗೂ ಇರುವ ವ್ಯತ್ಯಾಸ, ಪ್ರತ್ಯೇಕವಾದ ಭಾಷೆ, ನಾಟಿ ವೈದ್ಯ ಪದ್ಧತಿ, ನ್ಯಾಯಪದ್ಧತಿ, ಆಹಾರ ಪದ್ಧತಿ ಹೀಗೆ ಹಲವು ಮಹತ್ವದ ವಿಚಾರಗಳನ್ನು ತಿಳಿದುಕೊಳ್ಳಲು ಈ ವಸ್ತುಸಂಗ್ರಹಾಲಯವು ಉಪಯುಕ್ತವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಸಂಸ್ಥೆಯ ವಸ್ತು ಸಂಗ್ರಹಾಲಯಕ್ಕೆ ಪೋದಾರ್ ಇಂಟರ್ ನ್ಯಾಷನಲ್ ಶಾಲೆಯ 255 ವಿದ್ಯಾರ್ಥಿಗಳು ಭೇಟಿ ನೀಡಿ, ಅಲ್ಲಿನ ವಸ್ತುಗಳನ್ನು ವೀಕ್ಷಿಸಿದರು. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಲೆಕ್ಕಾಧಿಕಾರಿ ಭವ್ಯ, ಕಚೇರಿ ಅಧೀಕ್ಷಕಿ ನಾಗರತ್ನ, ಗ್ರಂಥಪಾಲಕಿ ಮಮತಾ, ಕ್ಷೇತ್ರ ಸಂಶೋಧಕ ಡಾ.ದಿನೇಶ್ ಕೆ.ಡಿ. ಅವರು ಬುಡಕಟ್ಟು ಜನರ ನಾಟಿವೈದ್ಯ ಪದ್ಧತಿ ಬಗ್ಗೆ ತಿಳಿಸಿದರು. ಭರತ್‌ಕುಮಾರ್ ಹಾಗೂ ಮನೋಜ್‌ಕುಮಾರ್ ಬುಡಕಟ್ಟು ಜನರ ಸಾಕ್ಷ್ಯಚಿತ್ರ ಪ್ರದರ್ಶನ ಮಾಡಿದರು.

ಬುಡಕಟ್ಟು ವಸ್ತು ಸಂಗ್ರಹಾಲಯಕ್ಕೆ ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.: 9972227628 ಹಾಗೂ 9035374660 ಸಂಪರ್ಕಿಸುವಂತೆ ಕೋರಿದ್ದಾರೆ.

ದೇಶ - ವಿದೇಶ

ಬಾಂಬ್ ಬೆದರಿಕೆ; ಇಂಡಿಗೋ ವಿಮಾನ ತುರ್ತು ಭೂಸ್ಪರ್ಶ



ಲಕ್ನೋ: ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಇಂಡಿಗೋ ಏರ್‌ಲೈನ್ಸ್ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಿರುವ ಘಟನೆ ಭಾನುವಾರ ಬೆಳಗ್ಗೆ ಲಕ್ನೋ ವಿಮಾನ ನಿಲ್ದಾಣದಲ್ಲಿ ನಡೆದಿದೆ.

ದೆಹಲಿಯಿಂದ ಪಶ್ಚಿಮ ಬಂಗಾಳದ ಬಾಗ್ಡೋಗ್ರಾಗೆ ಬೆಳಗ್ಗೆ 8.46ಕ್ಕೆ ಹೊರಟಿದ್ದ ಇಂಡಿಗೋ ವಿಮಾನ(6ಇ–6650)ದಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಬಂದಿದೆ. ಕೂಡಲೇ ವಿಮಾನವನ್ನು ಲಕ್ನೋಗೆ ತಿರುಗಿಸಿ 9.17ಕ್ಕೆ ಸುರಕ್ಷಿತವಾಗಿ ಇಳಿಸಲಾಗಿದೆ. ಕೂಡಲೇ ವಿಮಾನದಲ್ಲಿದ್ದ 222 ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ತಕ್ಷಣವೇ ವಿಮಾನದಿಂದ ಇಳಿಸಿ, ಸ್ಥಳಾಂತರಿಸಲಾಗಿದೆ. ಬಳಿಕ ಬಾಂಬ್ ಪತ್ತೆ ದಳ ಹಾಗೂ ಭದ್ರತಾ ಸಂಸ್ಥೆಗಳು ವಿಮಾನವನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಿದ್ದು, ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ. ಆದರೆ ಪ್ರಾಥಮಿಕ ತಪಾಸಣೆ ವೇಳೆ ಟಿಶ್ಯೂ ಪೇಪರ್‌ನಲ್ಲಿ 'ವಿಮಾನದಲ್ಲಿ ಬಾಂಬ್ ಇದೆ' ಎಂದು ಬರೆದಿರುವ ಚೀಟಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದು ತನಿಖೆ ಮುಂದುವರೆಸಲಾಗಿದೆ.

ದಟ್ಟ ಮಂಜಿನಿಂದ ನೀರಿಗೆ ಕಾರು ಉರುಳಿ ಟೆಕ್ಕಿ ಸಾವು



ನೋಯ್ಡಾ: ದಟ್ಟ ಮಂಜಿನ ಪರಿಣಾಮ ಕಾರು ನೀರಿಗೆ ಬಿದ್ದು ಟೆಕ್ಕಿಯೊಬ್ಬರು ಧಾರುಣವಾಗಿ ಸಾವನ್ನಪ್ಪಿರುವ ಘಟನೆ ನೋಯ್ಡಾದಲ್ಲಿ ನಡೆದಿದೆ. ಈ ವೇಳೆ ರಕ್ಷಿಸಲು ಮುಂದಾದ ಡೆಲಿವರಿ ಏಜೆಂಟ್ ಪ್ರಯತ್ನವೂ ವಿಫಲವಾಗಿದೆ. ಟಾಟಾ ಯುರೇಕಾ ಪಾರ್ಕ್ ಸೊಸೈಟಿಯ ನಿವಾಸಿ 27 ವರ್ಷದ ಯುವರಾಜ್ ಮೆಹ್ತಾ, ಗುರುಗ್ರಾಮದ ಸೆಕ್ಟರ್–54ರಲ್ಲಿರುವ ಡನ್‌ನಂಬಿ ಇಂಡಿಯಾ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರು. ತಮ್ಮ ಗ್ರಾಂಡ್ ವಿಟಾರಾ ಕಾರಿನಲ್ಲಿ ಕಚೇರಿಯಿಂದ ಮನೆಗೆ ತೆರಳುತ್ತಿದ್ದಾಗ ಸೆಕ್ಟರ್–150ರಲ್ಲಿ ಮನೆಗೆ ಕೇವಲ 500 ಮೀಟರ್ ದೂರವಿದ್ದಾಗ ಈ ದುರ್ಘಟನೆ ನಡೆದಿದೆ. ದಟ್ಟ ಮಂಜಿನಿಂದಾಗಿ ಯುವರಾಜ್ ಮೆಹ್ತಾ ಅವರಿಗೆ ದಾರಿ ಕಾಣಿಸದೆ, ಕಾಲುವೆ ಗೋಡೆಗೆ ಡಿಕ್ಕಿ ಹೊಡೆದು ಮಗುಚಿ ಬಿದ್ದಿದೆ. ಕಾರು ತೇಲುವಾಗ ಯುವರಾಜ್ ಹೇಗೋ ಮಾಡಿ ಕಾರಿನಿಂದ ಹೊರಬಂದು, ಜೇಬಿನಲ್ಲಿದ್ದ ಮೊಬೈಲ್ ಹೊರತೆಗೆದು ತಮ್ಮ ತಂದೆ ರಾಜಕುಮಾರ್ ಮೆಹ್ತಾ ಅವರಿಗೆ ಕರೆ ಮಾಡಿ, ನಾನು ಮುಳುಗುತ್ತಿದ್ದೇನೆ. ದಯವಿಟ್ಟು ಬಂದು ನನ್ನನ್ನು ಉಳಿಸಿ. ನನಗೆ ಸಾಯಲು ಇಷ್ಟವಿಲ್ಲ ಎಂದು ಕೇಳಿಕೊಂಡಿದ್ದಾನೆ. ತಂದೆ ತಕ್ಷಣ ಸ್ಥಳಕ್ಕೆ ಬಂದಿದ್ದಾರೆ. ಅಗ್ನಿಶಾಮಕ ದಳದವರು ಎರಡೂವರೆ ಗಂಟೆ ಕಾರ್ಯಾಚರಣೆ ನಡೆಸಿ, ಯುವರಾಜ್‌ನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆತ ಮಾರ್ಗಮಧ್ಯೆಯೇ ಸಾವನ್ನಪ್ಪಿದ್ದಾನೆ.

ಜಲ್ಲಿಕಟ್ಟಲ್ಲಿ ಹೆಚ್ಚು ಗೂಳಿ ಪಳಗಿಸಿದವರಿಗೆ ಸರ್ಕಾರಿ ಉದ್ಯೋಗ



ತಮಿಳುನಾಡು: ತಮಿಳುನಾಡಿನಲ್ಲಿ ನಡೆಯುವ ವಿಶ್ವ ಪ್ರಸಿದ್ಧ ಸಾಂಪ್ರದಾಯಿಕ ಜಲ್ಲಿಕಟ್ಟು ಸ್ಪರ್ಧೆಯಲ್ಲಿ ಗರಿಷ್ಠ ಸಂಖ್ಯೆಯ ಎತ್ತುಗಳನ್ನು ಪಳಗಿಸುವ ವ್ಯಕ್ತಿಗೆ ಪಶು ಸಂಗೋಪನಾ ಇಲಾಖೆಯಲ್ಲಿ ಸರ್ಕಾರಿ ಉದ್ಯೋಗ ನೀಡುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ. ಜಲ್ಲಿಕಟ್ಟು ಶತಮಾನಗಳಷ್ಟು ಹಳೆಯದಾದ ತಮಿಳುನಾಡಿನ ಕ್ರೀಡೆಯಾಗಿದೆ. ಇದನ್ನು ಪೊಂಗಲ್‌ನ ಮೂರನೇ ದಿನದಂದು ಆಯೋಜಿಸಲಾಗುತ್ತದೆ. ಈ ಕ್ರೀಡೆಯ ಉತ್ತೇಜನಕ್ಕಾಗಿ ನಾವು ಮಧುರೈನಲ್ಲಿ ಜಲ್ಲಿಕಟ್ಟು ಅರೆನಾವನ್ನು ನಿರ್ಮಿಸಿದ್ದೇವೆ. ಮಧುರೈ ಶೌರ್ಯಕ್ಕೆ ಖ್ಯಾತಿಗಳಿಸಿದ ನಾಡಾಗಿದ್ದು, ಜಲ್ಲಿಕಟ್ಟು ಸ್ಪರ್ಧೆಯಲ್ಲಿ ಹೆಚ್ಚು ಎತ್ತುಗಳನ್ನು ಪಳಗಿಸುವವರಿಗೆ ಪಶುಸಂಗೋಪನಾ ಇಲಾಖೆಯಲ್ಲಿ ಸೂಕ್ತ ಉದ್ಯೋಗ ನೀಡಲಾಗುತ್ತದೆ ಎಂದಿದ್ದಾರೆ. ಜಲ್ಲಿಕಟ್ಟು ಪದಕ್ಕೆ ವಿಶೇಷ ಅರ್ಥವಿದೆ. ಜಲ್ಲಿ ಎಂದರೆ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳು, ಕಟ್ಟು ಎಂದರೆ ಹಿಡಿಯುವುದು ಎಂದರ್ಥ. ಗುಂಪಿನೊಳಗೆ ಬಿಟ್ಟ ಗೂಳಿಯ ಕೊಂಬಿಗೆ ಕಟ್ಟಲಾದ ನಾಣ್ಯಗಳನ್ನು ಕಿತ್ತುಕೊಂಡು ಆ ಗೂಳಿಯನ್ನು ಪಳಗಿಸುವುದೇ ಜಲ್ಲಿಕಟ್ಟು ಕ್ರೀಡೆ. ಗೂಳಿಯನ್ನು ತಡೆಯಲು ಪ್ರಾಣಿಯ ಗೂನು(ಬೆನ್ನು) ಹಿಡಿದು ಪಳಗಿಸಲು ಪ್ರಯತ್ನಿಸುತ್ತಾರೆ. ಪುಲಿಕುಲಂ ಮತ್ತು ಕಂಗಯಂ ತಳಿಯ ಎತ್ತುಗಳನ್ನು ಈ ಕ್ರೀಡೆಗೆ ಬಳಸಲಾಗುತ್ತದೆ.

ಬಾಳೆಹಣ್ಣು ವಿಚಾರಕ್ಕೆ ಬಾಂಗ್ಲಾದಲ್ಲಿ ಹಿಂದೂ ಉದ್ಯಮಿ ಹತ್ಯೆ



ಗಾಜಿಪುರ: ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯಾಕಾಂಡ ಮುಂದುವರೆದಿದ್ದು, ಬಾಳೆ ಹಣ್ಣಿನ ವಿಚಾರಕ್ಕೆ ನಡೆದ ಜಗಳದಲ್ಲಿ ಹಿಂದೂ ಉದ್ಯಮಿಯೊಬ್ಬರನ್ನು ಕೊಲೆ ಮಾಡಲಾಗಿದೆ. ಗಾಜಿಪುರದ 'ಬೈಸಾಖಿ ಸ್ವೀಟ್ ಮೀಟ್ ಮತ್ತು ಹೋಟೆಲ್' ಮಾಲೀಕ ಲಿಟನ್ ಚಂದ್ರ ಘೋಷ್(55) ಅವರನ್ನು ಸ್ವಪನ್ ಮಿಯಾ(55), ಅವರ ಪತ್ನಿ ಮಜೇದಾ ಖಾತುನ್(45) ಮತ್ತು ಮಗ ಮಾಸುಮ್ ಮಿಯಾ(28) ಸೇರಿಕೊಂಡು ಕೊಂದಿದ್ದು, ಕಾಳಿಗಂಜ್ ಠಾಣೆಯ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಾಳೆ ತೋಟ ಹೊಂದಿರುವ ಮಾಸೂಮ್, ಒಂದು ಬಂಚ್ ಬಾಳೆಹಣ್ಣು ಕಾಣೆಯಾಗಿದೆ ಎಂದು ಹುಡುಕಾಟ ನಡೆಸುವಾಗ ಲಿಟನ್ ಹೋಟೆಲ್‌ಗೆ ಬಂದು, ಬಾಳೆಹಣ್ಣಿನ ಬಂಚ್ ಇಲ್ಲಿಗೆ ಹೇಗೆ ಬಂತು ಎಂದು ಜಗಳ ತೆಗೆದಿದ್ದಾನೆ. ಈ ವೇಳೆ ಮಾಸೂಮ್ ಪೋಷಕರೂ ಅಲ್ಲಿಗೆ ಬಂದಿದ್ದಾರೆ. ಜಗಳ ವಿಕೋಪಕ್ಕೆ ತಿರುಗಿ ಲಿಟನ್ ಮೇಲೆ ತೀವ್ರ ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಜನಸಂಖ್ಯೆಯ ಸರಿಸುಮಾರು ಶೇ.7ರಷ್ಟಿರುವ ಹಿಂದೂಗಳ ಮೇಲೆ ಹೀಗೆ ನಿರಂತರ ದಾಳಿ ನಡೆಯುತ್ತಿದೆ.

ಟ್ರಂಪ್ ವಿರುದ್ಧ ಇರಾನಿ ಹೋರಾಟಗಾರರು ಕಿಡಿ



ಟೆಹರಾನ್: ಇತ್ತೀಚೆಗೆ ಇರಾನ್‌ನಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದ ಸಾವಿರಾರು ಇರಾನಿಯನ್ನರು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವಂಚಕ, ದ್ರೋಹಿ. ಅವರು ಹೇಳೋದು ಒಂದು ಮಾಡೋದು ಇನ್ನೊಂದು ಎಂದು ಸಿಡಿದೆದ್ದಿದ್ದಾರೆ.

ಇರಾನ್‌ನಲ್ಲಿ ಪರಿಸ್ಥಿತಿ ಹದಗೆಡುವ ಮುನ್ನ ಸಾರ್ವಜನಿಕವಾಗಿ ಇರಾನ್ ಪ್ರತಿಭಟನಾಕಾರರನ್ನು ಪ್ರೋತ್ಸಾಹಿಸಿದ ಟ್ರಂಪ್, ಟೆಹರಾನ್‌ಗೆ ವಾರ್ನಿಂಗ್ ನೀಡಿದ್ದರು. ಅಲ್ಲದೇ ನೆರವಿನ ಭರವಸೆ ನೀಡಿದ್ದರು. ಪ್ರತಿಭಟನಾಕಾರರು ರಸ್ತೆಗಿಳಿಯುತ್ತಿದ್ದಂತೆಯೇ ಇರಾನ್ ರಾಷ್ಟ್ರ ಸಂವಹನ ಕಡಿತ, ಭದ್ರತಾ ಪಡೆಗಳ ನಿಯೋಜನೆ, ಲಾಠಿಚಾರ್ಜ್‌ನಂತಹ ಕಠಿಣ ಕ್ರಮಗಳಿಂದ ಪ್ರತಿಕ್ರಿಯಿಸಿತು. ದೇಶಾದ್ಯಂತ ಗುಂಡಿನ ದಾಳಿ, ಮೆಷಿನ್–ಗನ್ ದಾಳಿ ನಡೆದು, ಹಲವರ ಸಾವು, ನಾಪತ್ತೆ ಪ್ರಕರಣ ವರದಿಯಾಗಿವೆ. ಅಮೆರಿಕ ಮಧ್ಯಪ್ರವೇಶಿಸುತ್ತದೆ ಎಂದು ನಂಬಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುತ್ತಿದ್ದ ಪ್ರತಿಭಟನಾಕಾರರಿಗೆ ಟ್ರಂಪ್ ನಡೆ ಆಘಾತ ಮೂಡಿಸಿತು. ಇರಾನ್ನಿಯನ್ನರಿಗೆ ಈ ರೀತಿ ದ್ರೋಹ ಮಾಡಲು ಇಸ್ಲಾಮಿಕ್ ಗಣರಾಜ್ಯದೊಂದಿಗೆ ಯುಎಸ್ ಒಪ್ಪಂದ ಮಾಡಿಕೊಂಡಿರಬೇಕು ಎಂದು ಟೆಹರಾನ್‌ನ ಉದ್ಯಮಿಯೊಬ್ಬರು ಟೀಕಿಸಿದ್ದಾರೆ.

ಜೇನು ಕುರುಬ, ಕೊರಗ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಮಂಡಳಿಗೆ ಒತ್ತಾಯ

ಕುಶಾಲನಗರ, ಜ. 18–ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಜೇನು ಕುರುಬ ಹಾಗೂ ಕೊರಗ ಸಮುದಾಯಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾದ ನಿಗಮ ಮಂಡಳಿ ರಚಿಸ ಬೇಕೆಂದು ಜೇನು ಕುರುಬ ಹಾಗೂ ಕೊರಗ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಮಂಗ ಳೂರಿನ ಎಂ.ಸುಂದರ್ ದಳುವಾಯಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಜೇನು ಕುರುಬ ಹಾಗೂ ಕೊರಗ ಸಮುದಾಯಗಳ ಒಕ್ಕೂಟದ ರಾಜ್ಯ ಕಾರ್ಯ ಕಾರಿಣಿ ಸಭೆಯಲ್ಲಿ ಭಾಗವಹಿಸಿದ್ದ ಸಮುದಾಯ ಬಾಂಧವರು

ತಾಲೂಕಿನ ಬಸವನಹಳ್ಳಿ ಸಮು ದಾಯ ಭವನದಲ್ಲಿ ಭಾನುವಾರ ಹಮ್ಮಿ ಕೊಂಡಿದ್ದ ಜೇನು ಕುರುಬ ಹಾಗೂ ಕೊರಗ ಸಮುದಾಯಗಳ ಒಕ್ಕೂಟದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಾತ ನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಾಗಲೇ ಈ ಎರಡು ಸಮುದಾಯಗಳನ್ನು ನೈಜ ದುರ್ಬಲ ಬುಡಕಟ್ಟು ಸಮುದಾಯ ಎಂದು ಘೋಷಿ ಸಿದೆ. ಬುಡಕಟ್ಟು ಕಲಂ 51 ರಲ್ಲಿ ನಮ್ಮ ಈ ಸಮುದಾಯಗಳು ಶಿಕ್ಷಣದಿಂದ ವಂಚಿತಗೊಂಡಿವೆ. ಸರ್ಕಾರಗಳ ಎಲ್ಲಾ ಯೋಜನೆಗಳು ಭೂಮಿಯ ಆಧಾರಿತ ವಾಗಿರುವುದರಿಂದ ನಮ್ಮ ಈ ಸಮು ದಾಯಗಳಲ್ಲಿ ಭೂಮಿಯೇ ಇಲ್ಲದ ಕಾರಣ ಸರ್ಕಾರದ ಯಾವ ಯೋಜನೆ ಗಳು ಇದೂವರೆಗೂ ತಲುಪಿಲ್ಲ. ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ನಡೆದ ಅಧಿ ವೇಶನದಲ್ಲಿ ಮುಖ್ಯಮಂತ್ರಿ ಗಳಿಗೆ ಒಕ್ಕೂ ಟದ ವತಿಯಿಂದ ಮನವಿ ಸಲ್ಲಿಸ ಲಾಗಿದೆ ಎಂದರು. ಒಕ್ಕೂಟದ ಉಪಾ ಧ್ಯಕ್ಷ ಹುಣಸೂರಿನ ಜೆ.ಟಿ.ರಾಜಪ್ಪ, ಜೇನು ಕುರುಬ, ಕೊರಗ ಒಕ್ಕೂಟದ ರಾಜ್ಯ ಘಟ ಕದ ಅಧ್ಯಕ್ಷ ಮಂಗಳೂರಿನ ಎಂ. ಸುಂದರ್ ದಳುವಾಯಿ, ರಾಜ್ಯ ಜೇನು ಕುರುಬರ ಅಭಿವೃದ್ಧಿ ಸಂಘದ ಕೊಡಗು ಅಧ್ಯಕ್ಷ ಜೆ.ಟಿ.ಕಾಳಿಂಗ ಮಾತನಾಡಿದರು.

ನಾಲ್ಕೇರಿ ಗ್ರಾಪಂ ಅಧ್ಯಕ್ಷ ಜೆ.ಎಂ. ಸೋಮಯ್ಯ, ಕಾರ್ಯದರ್ಶಿ ಜೆ.ಟಿ. ಚಂದ್ರು, ಮನೋಜ್, ತಿತಿಮತಿ ಪುಷ್ಪ, ಪಿರಿಯಾಪಟ್ಟಣದ ಗೌರಮ್ಮ ಮೊದಲಾದವರು ಇದ್ದರು.

ವಿದ್ಯುತ್ ಸಿಬ್ಬಂದಿ ವಿರುದ್ಧ ಗ್ರಾಮ ಸಭೆಯಲ್ಲಿ ಆಕ್ರೋಶ

ನಾಪೋಕ್ಲು, ಜ.18(ದುಗ್ಗಳ)–ವಿದ್ಯುತ್ ಇಲಾಖೆಯ ಸಿಬ್ಬಂದಿಗಳು ಬಿಲ್ ಹಣ ಸಂಗ್ರಹಿಸುವಲ್ಲಿ ತೋರುವ ಆಸಕ್ತಿಯನ್ನು ವಿದ್ಯುತ್ ಸರಬರಾಜು ಮಾಡುವಲ್ಲಿ ವಹಿಸು ತ್ತಿಲ್ಲ ಎಂದು ಸದಸ್ಯರು ಇಂದು ನಡೆದ ಗ್ರಾಮ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.



ನಾಪೋಕ್ಲುನಲ್ಲಿ ಭಾನುವಾರ ಗ್ರಾಮಸಭೆಯಲ್ಲಿ ಉಪಾಧ್ಯಕ್ಷ ಅಧಿಕಾರಿಗಳು ಪಾಲ್ಗೊಂಡಿದ್ದರು.

ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ತಲೆದೋ ರಿದೆ. ಮನಬಂದಂತೆ ವಿದ್ಯುತ್ ಕಡಿತ ಮಾಡುತ್ತಿದ್ದಾರೆ. ಇಲಾಖೆಯ ಯಾವುದೇ ಅಧಿಕಾರಿಯಾಗಲಿ, ಸಹಾಯಕ ಇಂಜಿ ನಿಯರ್ ಆಗಲೀ ಸಭೆಗೆ ಆಗಮಿಸಿಲ್ಲ. ಇಲಾಖಾ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳೂ ಆಗಮಿಸುತ್ತಿಲ್ಲ ನಮ್ಮ ಸಮಸ್ಯೆ ಗಳನ್ನು ಯಾರ ಮುಂದೆ ತೋಡಿಕೊಳ್ಳ ಬೇಕು ಎಂದು ದೂರಿದ ಸದಸ್ಯರು ಈ ಬಗ್ಗೆ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳುವಂತೆ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಬಲ್ಲಮಾವಟಿ, ಪುಲಿ ಕೋಟು, ಪೇರೂರು ಗ್ರಾಮಗಳಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನದಲ್ಲಿ ಅವ್ಯವ ಹಾರ ಕಂಡು ಬಂದಿದೆ. ಈ ಬಗ್ಗೆ ತನಿಖೆ ಆಗ ಬೇಕು. ಕೆಲವು ಗ್ರಾಮೀಣ ಭಾಗ ಗಳಿಗೆ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ ಎಂದು ಆಗ್ರಹಿಸಿದರು. ಗ್ರಾಮೀಣ ಭಾಗ ದಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ ಅಲ್ಲಲ್ಲಿ ಹೈಮಾಸ್ಕ್ ದೀಪ ಅಳವಡಿಸ ಬೇಕು ಎಂದು ಮನವಿ ಮಾಡಿದರು. ಮಧುಮೇಹ, ರಕ್ತದೊತ್ತಡ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ಮಾಡಿಸಲು ಸೋಮ ವಾರ ಆರೋಗ್ಯ ಇಲಾಖೆಯ ಸೇವಾ ಕೇಂದ್ರಕ್ಕೆ ಗ್ರಾಮೀಣ ಜನರು ಆಗಮಿಸು ತ್ತಾರೆ. ಅದೇ ದಿನ ತಾಲೂಕು ಹಂತದ ಸಭೆ ಏರ್ಪಡಿಸಿದರೆ ಸಾರ್ವಜನಿಕರಿಗೆ ಸಮಸ್ಯೆ ಆಗುತ್ತದೆ. ಸೋಮವಾರ ಹೊರತು ಪಡಿಸಿ ಬೇರೆ ದಿನಗಳಲ್ಲಿ ಸಭೆ ಏರ್ಪಡಿಸಿ ಎಂದು ಮನವಿ ಮಾಡಿದರು. ಗ್ರಾಪಂ ಉಪಾಧ್ಯಕ್ಷ ಚೋಕಿರ ಬಾಬಿ ಭೀಮಯ್ಯ ಅಧ್ಯಕ್ಷತೆಯಲ್ಲಿ ಗ್ರಾಮ ಸಭೆ ನಡೆಯಿತು.

ನೋಡಲ್ ಅಧಿಕಾರಿಯಾಗಿ ಮಡಿ ಕೇರಿ ತಾಲೂಕು ಅಕ್ಷರ ದಾಸೋಹ ಸಹಾ ಯಕ ನಿರ್ದೇಶಕ ಹೇಮಂತ್ ಕುಮಾರ್, ಪಂಚಾಯಿತಿ ಸದಸ್ಯರಾದ ಮಣ ವಟ್ಟಿರ ಹರೀಶ್ ಕುಶಾಲಪ್ಪ, ಮುಕ್ಕಾಟಿರ ಸುತನ್ ಸುಬ್ಬಯ್ಯ, ಬಾಳೆಯಡ ದೀನಾ ಮಾಯಮ್ಮ, ಮಚ್ಚುರ ರವೀಂದ್ರ, ರಾಜೀವಿ, ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆ, ಜ.18– ಪುರಸಭೆ ವ್ಯಾಪ್ತಿಯ ಚರ್ಚ್ ರಸ್ತೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 10 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಿದರು.

ಸಾರ್ವಜನಿಕರು ಆರೋಗ್ಯದತ್ತ ಹೆಚ್ಚು ಗಮನ ಹರಿಸುವ ನಿಟ್ಟಿನಲ್ಲಿ ಶುದ್ಧ ಕುಡಿ ಯುವ ನೀರನ್ನು ಬಳಕೆ ಮಾಡಬೇಕು. ಶುದ್ಧ ಕುಡಿಯುವ ನೀರಿನ ಘಟಕ ಬೇಕೆಂದು ಬೇಡಿಕೆ ಇಟ್ಟಿದ್ದರಿಂದ ವಿಶೇಷ ಅನುದಾನ ದಲ್ಲಿ ಪಟ್ಟಣದ ಮಧ್ಯಭಾಗದಲ್ಲಿ ಆರಂಭಿಸಿ ರುವ ಶುದ್ಧ ನೀರಿನ ಘಟಕವನ್ನು ಸ್ಥಳಿಯ ನಿವಾಸಿಗಳು ಮತ್ತು ಸಾರ್ವಜನಿಕರು ಸದುಪ ಯೋಗಪಡಿಸಿಕೊಳ್ಳಬೇಕೆಂದು ಹೇಳಿದರು

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಶಾಸಕರ ಸಹೋದರ ನರೇನ್ ಕಾರ್ಯಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಅಲ್ಪ ಸಂಖ್ಯಾತರ ಘಟಕದ ಜಿಲ್ಲಾ ಅಧ್ಯಕ್ಷ ಪಿ.ಎ.ಹನೀಫ್, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಿತ್ ಚಂಗಪ್ಪ, ಶಬೀರ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜಾನ್ಸನ್, ಪುರಸಭೆ ಮಾಜಿ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸಿಯಾ ತಬ್ಸಂ, ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಚರ್ಚ್ ಧರ್ಮಗುರುಗಳಾದ ಜೇಮ್ಸ್ ಡೊಮಿನಿಕ್, ಮದುಲೈ ಮುತ್ತು, ಕೊಡವ ಸಮಾಜದ ಅಧ್ಯಕ್ಷ ರವಿ ಉತ್ತಪ್ಪ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮತೀನ್, ಮುಖಂಡರಾದ ಕಾಣತಂಡ ಜಗದೀಶ್, ಟೀನಾ, ಪುರಸಭೆ ಮಾಜಿ ಸದಸ್ಯರು ಮತ್ತಿತರರು ಭಾಗವಹಿಸಿದ್ದರು.

ಪತ್ರಕರ್ತರ ಆರೋಗ್ಯ, ಮನರಂಜನೆಗೆ ಕ್ರೀಡೆ ತುಂಬಾ ಅಗತ್ಯ

ಮಡಿಕೇರಿ, ಜ 18–ಸುದ್ದಿ–ಸಂದೇಶ ರವಾನೆಯಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡು ಪ್ರತಿದಿನವೂ ಕಾರ್ಯನಿರತ ವಾಗಿರುವ ಪತ್ರಕರ್ತರ ಆರೋಗ್ಯ, ಮನ ರಂಜನೆಗೆ ಕ್ರೀಡೆ ತುಂಬಾ ಅಗತ್ಯ ವಾಗಿದೆ ಎಂದು ಶಾಸಕ ಎ.ಎಸ್ ಪೊನ್ನಣ್ಣ ತಿಳಿಸಿದ್ದಾರೆ.



ಕ್ರಿಕೆಟ್ ಆಡುವ ಮೂಲಕ ಪತ್ರಕರ್ತರ ಸಂಕ್ರಾಂತಿ ಸಂಭ್ರಮ ಕ್ರಿಕೆಟ್ ಪಂದ್ಯಾವಳಿಯನ್ನು ಶಾಸಕ ಪೊನ್ನಣ್ಣ ಉದ್ಘಾಟಿಸಿದರು.

ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡುವ ಮೂಲಕ ಪತ್ರಕರ್ತರ ಸಂಕ್ರಾಂತಿ ಸಂಭ್ರಮ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುಸ್ಥಿತಿ ಸಮಾಜ ನಿರ್ಮಾಣಕ್ಕೆ ಪತ್ರಕರ್ತರ ಕೊಡುಗೆ ಅಪಾರವಾದುದು. ಅಂತೆಯೇ ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಕೂಡ ಪತ್ರಕರ್ತರು ಮುಖ್ಯ ಪಾತ್ರ ನಿರ್ವಹಿಸುತ್ತಾರೆ ಸಮಾಜವನ್ನು ತಿದ್ದುವ ಮಹತ್ವದ ಜವಾಬ್ದಾರಿಯನ್ನು ನಿಭಾಯಿಸು ತ್ತಿರುವ ಪತ್ರಕರ್ತರ ಕ್ಷೇಮದ ಬಗ್ಗೆ ಸಮಾ ಜದ ಜನತೆ ಕಾಳಜಿ ವಹಿಸಬೇಕು. ಪತ್ರ ಕರ್ತರೂ ಸಹ ತಮಗಿರುವ ಹಕ್ಕನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷ ಮೆಹ ರೋಜ್ ಖಾನ್ ಮಾತನಾಡಿ, ಕೊಡಗು ಪತ್ರಕರ್ತರು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಕೊಡಗಿನಲ್ಲಿ ಹಲವಾರು ಧರ್ಮಗಳು ಇದ್ದು ಇವುಗಳ ನಡುವೆ ಮನೆ ಮನೆಗಳಲ್ಲಿ ಕ್ರೀಡೆಗೆ ಪ್ರೋತ್ಸಾಹ ನೀಡಿ ಕ್ರೀಡೆ ಕೂಡ ಒಂದು ಧರ್ಮವಾಗಿ ಸಹಬಾಳ್ವೆಯ ಸಂಕೇತವಾಗಿರುವುದು ಜಿಲ್ಲೆಯ ಸೊಬಗು ಎಂದು ಬಣ್ಣಿಸಿದರು. ವಿಧಾನ ಪರಿಷತ್ ಸದಸ್ಯ ಎಂ. ಪಿ. ಸುಜಾಕುಶಾಲಪ್ಪ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಚಂದ್ರಮೌಳಿ ಮಾತನಾಡಿದರು.

ಉದ್ಯಮಿಗಳಾದ ಕರ್ನಾಟಕ ಕ್ರಿಕೆಟ್ ಅಕಾಡೆಮಿ ಸಂಚಾಲಕ ಚೇನಂಡ ಪೃಥ್ವಿ ದೇವಯ್ಯ, ಹಾಜರಿದ್ದರು. ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಟಿ. ಅನಿಲ್, ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಜಿ. ವಿ ರವಿಕುಮಾರ್, ಕಾರ್ಯದರ್ಶಿ ಅರುಣ್ ಕೂರ್ಗ್, ಹೆಚ್ಚು ವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್, ಡಿವೈಎಸ್ಪಿ ಸೂರಜ್, ಉಪ ವಿಭಾಗಾಧಿಕಾರಿ ನಿತಿನ್ ಚಿಕ್ಕಿ, ನಗರಸಭೆ ಅಧ್ಯಕ್ಷೆ ಕಲಾವತಿ, ಮೂಡಾ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಮಹೇಶ್ ಜೈನಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ಕಾಳಪ್ಪ, ಪ್ರಮುಖರಾದ ಯಡಿಕೇರಿ ಪ್ರಸನ್ನ, ಅಪ್ಪು ರವೀಂದ್ರ, ತೆನ್ನಿರ ಮೈನಾ, ಸುರಯ್ಯ ಅಬ್ರಾರ್, ಇಸ್ಮಾಯಿಲ್, ಸೂರಜ್ ಹೊಸೂರು, ಮನು ಮುತ್ತಪ್ಪ, ಚುಮ್ಮಿ ದೇವಯ್ಯ, ಜಿಲ್ಲಾ ಯುವಜನ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕಿ ವಿಸ್ಮಯಿ ಚಕ್ರವರ್ತಿ, ಸೋಮವಾರಪೇಟೆ ತಹಸೀಲ್ದಾರ್ ಕೃಷ್ಣಮೂರ್ತಿ, ಮೈಸೂ ರಿನ ಉದ್ಯಮಿ ಮಹಮ್ಮದ್ ನಾಸಿರ್, ಕೊತ್ತೊಳಿರ ಕವನ್, ಮೊದಲಾದವರು ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ ಸ್ವಾಗತಿಸಿ, ವಿನೋದ್ ಮೂಡಗದ್ದೆ ಕಾರ್ಯಕ್ರಮ ನಿರೂಪಿಸಿದರು.

ವೈಯಕ್ತಿಕ ವಿಚಾರಗಳನ್ನು ಬದಿಗೊತ್ತಿ ಪಕ್ಷ ಕಟ್ಟಿ

ವಿರಾಜಪೇಟೆ, ಜ.18–ಕಾಂಗ್ರೆಸ್ ಕಾರ್ಯಕರ್ತರು ಪಕ್ಷದೊಳಗಿನ ಭಿನ್ನಾಭಿಪ್ರಾಯ ವೈಯಕ್ತಿಕ ವಿಚಾರ ಗಳನ್ನು ಮರೆತು ಹೊಂದಾಣಿಕೆಯಿಂದ ಪಕ್ಷವನ್ನು ಬೂತ್‌ಮಟ್ಟದಿಂದ ಕಟ್ಟು ವಂತಾಗಬೇಕು ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು. ನಗರದಲ್ಲಿರುವ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಆಯೋಜಿಸ ಲಾಗಿದ್ದ ನಗರ ಕಾಂಗ್ರೆಸ್ ಪದಾಧಿಕಾರಿಗಳ ಹಾಗೂ ಕಾರ್ಯ ಕರ್ತರ ಸಭೆ ಯನ್ನುದ್ದೇಶಿಸಿ ಪಕ್ಷದಲ್ಲಿ ದುಡಿಯು ವವರನ್ನು ಗುರುತಿಸಿ ಗೌರವಿಸುವುದು ಸಹಜ. ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟನೆ ಬಲಪಡಿಸಬೇಕು ಎಂದರು.

ಮೊಯಿದೀನ್ ಕುಂಞ ಹಾಜಿ ನಿಧನ



ನಾಪೋಕ್ಲು, ಜ.18–ಸಮೀಪದ ಬೇತು ಗ್ರಾಮದ ಗ್ರಾಪಂ ಮಾಜಿ ಅಧ್ಯಕ್ಷ ಪಿ.ಎಂ. ಸಲೀಮ್ ಹ್ಯಾರಿಸ್ ಅವರ ತಂದೆ ಪಿ.ಪಿ. ಮೊಯಿದೀನ್ ಕುಂಞ ಹಾಜಿ (78) ಶನಿವಾರ ನಿಧನರಾದರು. ಮೃತರು ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನಡೆಯಿತು.

ಶಂಭು ಸುಬ್ಬಯ್ಯ



ನಾಪೋಕ್ಲು: ಇಲ್ಲಿಯ ನಿವಾಸಿ ದಿವಂಗತ ಬಾಳೆಯಡ ತಿಮ್ಮಯ್ಯ ಅವರ ಪುತ್ರ ಶಂಭು ಸುಬ್ಬಯ್ಯ (52) ಭಾನುವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಜರುಗಲಿದೆ.

ಹುಲಿ ಸೆರೆಗೆ ಇಟ್ಟ ಬೋನ್ ಹೊಕ್ಕಿ ಕರು ತಿಂದರೂ ಸೆರೆ ಸಿಕ್ಕದ 'ಅದ್ಭುತ' ಪ್ರಾಣಿ

ಗ್ರಾಮಸ್ಥರಲ್ಲಿ ಆತಂಕ; ಬೋನ್ ಸುಭದ್ರತೆಗೆ ಆಕ್ರೋಶ

ಚಾಮರಾಜನಗರ, ಜ.18– ಹುಲಿ ಸೆರೆಗಾಗಿ ಇಟ್ಟಂತಹ ಬೋನಿ ನಲ್ಲಿದ್ದ ಕರುವನ್ನು ಯಾವುದೋ ಪ್ರಾಣಿ ಸದ್ದಿಲ್ಲದೆ ತಿಂದು ಹೋಗಿರುವ ಅಚ್ಚರಿ ತಾಲೂಕಿನ ನಂಜೇದೇವನಪುರ ಗ್ರಾಮದಲ್ಲಿ ನಡೆದಿದೆ. ಇದರೊಂದಿಗೆ ಬೋನಿನ ಸುಭದ್ರತೆ ಹತ್ತು ಹಲವು ಪ್ರಶ್ನೆಗೆ ಎಡೆಮಾಡಿ ಕೊಟ್ಟಿದೆ.



ಬೋನಿನಲ್ಲಿದ್ದ ಕರು ತಿಂದು ಹಾಕಿರುವುದು.

ಕಳೆದೊಂದು ತಿಂಗಳಿಂದ ಈ ಭಾಗದಲ್ಲಿ ತಾಯಿ ಹುಲಿಯೊಂದಿಗೆ 4 ಮರಿಗಳು ಕಾಣಿಸಿಕೊಂಡು ಆತಂಕ ಸೃಷ್ಟಿಸಿತ್ತು. ಅರಣ್ಯಾಧಿ ಕಾರಿಗಳು ಗ್ರಾಮದ ಹೊರವಲ ಯದ ಆನೆ ಮಡುವಿನ ಕೆರೆ ಬಳಿಯ ಜಮೀನೊಂದರಲ್ಲಿ ಹುಲಿ ಸೆರೆಗಾಗಿ ಬೋನ್ ಇಟ್ಟು, ಹುಲಿಗಳ ಸೆರೆಗಾಗಿ ಸಾಕಾನೆಗಳೊಂದಿಗೆ ಕಾರ್ಯಾಚರಣೆ ಕೈಗೊಂಡಿದ್ದರು.

ಡಿ.31ರಂದು 6 ವರ್ಷದ ಗಂಡು ಹುಲಿ, ಜ.9 ರಂದು 8 ವರ್ಷದ ಹೆಣ್ಣು ಹುಲಿ, ಜ.15 ರಂದು 10 ತಿಂಗಳ ಹೆಣ್ಣು ಹುಲಿ ಮರಿ ಹಾಗೂ ಇಂದು ಬೆಳಗ್ಗೆ ಮತ್ತೊಂದು ಗಂಡು ಹುಲಿ ಯನ್ನು ಯಶಸ್ವಿಯಾಗಿ ಸೆರೆ ಹಿಡಿದಿದ್ದು, ಮತ್ತೆರಡು ಹುಲಿ ಮರಿಗಳ ಸೆರೆಗಾಗಿ ಕಾರ್ಯಾಚರಣೆ ಮುಂದುವರೆದಿದೆ. ಆದರೆ ಶನಿವಾರ ರಾತ್ರಿ ಹುಲಿ ಸೆರೆಗಾಗಿ ಇಟ್ಟಿದ್ದ ಬೋನ್ ಹೊಕ್ಕಿರುವ ಯಾವುದೋ ಕಾಡುಪ್ರಾಣಿ ಅಲ್ಲಿದ್ದ ಕರುವನ್ನು ಅರ್ಧಂ ಬರ್ಧ ತಿಂದಿದೆ. ಆದರೆ ಬೋನ್ ಬಂದ್ ಆಗಿಲ್ಲ. ಹೀಗೆ ಬೋನ್ ಒಳಗೆ ನುಗ್ಗಿ ಕರು ತಿಂದು ಹೋಗಿರುವ ಪ್ರಾಣಿ ಹುಲಿಯೇ ಅಥವಾ ಬೇರೆ ಪ್ರಾಣಿಯೇ ಎಂಬುದು ಖಾತರಿಯಾಗಿಲ್ಲ.

ಗ್ರಾಮಸ್ಥರ ಆಕ್ರೋಶ: ಕಾಡು ಪ್ರಾಣಿ ಯೊಂದು ಹುಲಿ ಸೆರೆಗಾಗಿ ಇಟ್ಟ ಬೋನಿ ನಲ್ಲಿದ್ದ ಕರುವನ್ನು ಅರೆ ಬರೆ ತಿಂದು ಪರಾರಿಯಾಗಿರುವುದಕ್ಕೆ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾವುದೇ ಪ್ರಾಣಿ ಬೋನಿಗೆ ಹೋದ ತಕ್ಷಣ ಅದರ ಬಾಗಿಲು ತಕ್ಷಣ ಬಂದ್ ಆಗಲಿದೆ. ಆದರೆ ಕಾಡು ಪ್ರಾಣಿಯೊಂದು ಬೋನಿ ನೊಳಗೆ ತೆರಳಿ ಕಟ್ಟಿ ಹಾಕಿದ್ದ ಕರು ತಿಂದು ಹಾಕಿದರೂ ಬೋನ್ ಬಂದ್ ಆಗದಿರುವು ದನ್ನು ನೋಡಿ ದರೆ ಅರಣ್ಯ ಇಲಾಖೆ ವೈಫಲ್ಯ ಎದ್ದು ಕಾಣುತ್ತದೆ. ಈ ಬಗ್ಗೆ ಅವರನ್ನು ವಿಚಾರಿಸಿದರೆ ಬೋನ್ ಬಳಿ ಅಳ ವಡಿಸಿದ್ದ ಕ್ಯಾಮರಾದಲ್ಲಿ ಯಾವುದು ಸೆರೆಯಾಗಿಲ್ಲ ಎನ್ನುತ್ತಾರೆ. ಕಾಲ ಕಾಲಕ್ಕೆ ಹುಲಿ ಸೆರೆಗೆ ಅಳವಡಿ ಸುವ ಬೋನನ್ನು ಪರಿಶೀಲನೆ ನಡೆಸಿ, ಅದರ ನಿರ್ವ ಹಣೆ ಮಾಡುವಲ್ಲಿ ಅರಣ್ಯಾಧಿಕಾರಿ ಗಳು ವಿಫಲರಾಗಿದ್ದಾರೆ ಎಂದು ಈ ಭಾಗದ ಜನತೆ ಅರಣ್ಯಾಧಿಕಾರಿಗಳ ಮೇಲೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮತ್ತೆ ಆವರಿಸಿದ ಭಯ: ಗ್ರಾಮದಲ್ಲಿ ಕಳೆದೊಂದು ತಿಂಗಳಿ ನಿಂದ ಹುಲಿಗಳ ಭೀತಿಯುಂಟಾಗಿದ್ದು, ಗ್ರಾಮಸ್ಥರು ಭಯದಲ್ಲೇ ಜೀವನ ನಡೆಸುತ್ತಿದ್ದಾರೆ.

ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿ ಗಳು ಎಚ್ಚೆತ್ತು ಕರು ಕೊಂದ ಪ್ರಾಣಿ ಪತ್ತೆ ಹಚ್ಚಿ ಸೆರೆ ಹಿಡಿದು ಗ್ರಾಮಸ್ಥರ ಭಯ ದೂರ ಮಾಡಬೇಕು ಎಂದು ಗ್ರಾಮದ ಮುಖಂಡರು ಒತ್ತಾಯಿಸಿದ್ದಾರೆ.

ಯರಿಯೂರಲ್ಲಿ ಶ್ರೀಭಗೀರಥ ಮಹರ್ಷಿ ಪ್ರತಿಮೆ ಅನಾವರಣ

ಯಳಂದೂರು, ಜ.18– ತಾಲೂಕಿನ ಯರಿಯೂರು ಗ್ರಾಮದಲ್ಲಿ ಶ್ರೀಭಗೀರಥ ಮಹರ್ಷಿ ಪ್ರತಿಮೆಯನ್ನು ಉಪ್ಪಾರ ಸಮಾಜದ ರಾಜ್ಯಾಧ್ಯಕ್ಷರೂ ಆದ ಶಾಸಕ ಪುಟ್ಟರಂಗಶೆಟ್ಟಿ ಅನಾವರಣಗೊಳಿಸಿದರು.



ಯರಿಯೂರಲ್ಲಿ ಭಗೀರಥ ಪ್ರತಿಮೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ಮಾಡಿದರು.

ನಂತರ ಮಾತನಾಡಿದ ಶಾಸಕರು, ಯರಿಯೂರಲ್ಲಿ ನಮ್ಮ ಮೂಲ ಪುರುಷ ಭಗೀರಥರ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ. ನಾವು ಸೂರ್ಯ ವಂಶಸ್ಥರು. ನಾವು ಹೆಚ್ಚಾಗಿ ಭಗೀರಥ ಮಹರ್ಷಿಯನ್ನೇ ಪೂಜಿಸುತ್ತಾ ಬಂದಿದ್ದೇವೆ. ಧರೆಗೆ ಗಂಗೆಯನ್ನು ಇಳಿಸಿದ ಮಹಾ ಪುರುಷನ ವಂಶದವರಾದ ನಾವು ಇಂದು ಈ ಪ್ರತಿಮೆ ಅನಾವರಣಗೊಳಿಸುತ್ತಿರುವುದು ಸಂತಸ ತಂದಿದೆ ಎಂದರು.

ನಮ್ಮ ಸಮಾಜದಲ್ಲಿ ಕೆಲವು ಮೂಢ ನಂಬಿಕೆಗಳಿವೆ. ಅವುಗಳನ್ನೆಲ್ಲಾ ಈ ಭಗೀ ರಥ ಮಹರ್ಷಿ ಹೋಗಲಾಡಿಸಲಿ. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಸಮಾಜದ ಮುಖ್ಯ ವಾಹಿನಿಗೆ ಬರುವ ಮೂಲಕ ಮೂಢನಂಬಿಕೆಗಳಿಂದ ದೂರ ಇರ ಬೇಕು ಎಂದು ಕರೆ ನೀಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್ ಮಾತನಾಡಿ, ಗ್ರಾಮದಲ್ಲಿ ಭಗೀರಥ ಮಹರ್ಷಿ ಪ್ರತಿಮೆಯನ್ನು ಕಿರಣ್ ಅವರು ತಮ್ಮ ಸ್ವಂತ ಜಾಗದಲ್ಲಿ ಗ್ರಾಮಸ್ಥ ರೊಂದಿಗೆ ಸೇರಿ ನಿರ್ಮಿಸಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜಿಲ್ಲಾದ್ಯಂತ ಮುಖ್ಯ ರಸ್ತೆಗಳಲ್ಲಿ ಕಾಣುವಂತೆ ಉಪ್ಪಾರ ಜನಾಂಗದವರು ಭಗೀರಥ ಪ್ರತಿಮೆ ನಿರ್ಮಾಣ ಮಾಡಲಿ. ನಮ್ಮ ಸಮಾಜ ಯಾವುದಕ್ಕೂ ಕಡಿಮೆ ಇಲ್ಲ. ಭಗೀರಥ ಎಂದರೆ ನೆನಪಾಗುವುದು ಉಪ್ಪಾರ ಸಮಾಜ ಮಾತ್ರ ಎಂದರು.

ಯುವ ಮುಖಂಡ ಕುಸುಮರಾಜ್ ಮಾತನಾಡಿ, ನಮ್ಮ ಕುಲ ಗುರುಗಳಾದ ಭಗೀರಥ ಮಹರ್ಷಿ ಪ್ರತಿಮೆಯನ್ನು ನಮ್ಮ ಯಳಂದೂರು ತಾಲೂಕಿನಲ್ಲಿ ಚೆನ್ನಾಗಿ ನಿರ್ಮಿಸಿರುವುದು ಇದೇ ಮೊದಲು. ನಾನು ಇದಕ್ಕಾಗಿ ಯರಿಯೂರು ಗ್ರಾಮದ ಜನತೆಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಭಗೀರಥ ಸಮಾಜದ ಯಜ ಮಾನರು, ಮುಖಂಡರು, ಯುವಕರು ಸೇರಿದಂತೆ ಇತರರು ಹಾಜರಿದ್ದರು.

ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿ ಯಶಸ್ಸು ಸಾಧಿಸಿ

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಬಿ.ಸಣ್ಣಪ್ಪ ಸಲಹೆ



ಕಾರ್ಯ ಕ್ರಮದಲ್ಲಿ ವಿದ್ಯಾರ್ಥಿ ಗಳನ್ನು ಸನ್ಮಾನಿಸ ಲಾಯಿತು.

ಕೊಳ್ಳೇಗಾಲ, ಜ.18– ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗಬಾರದು. ಪರೀಕ್ಷಾ ಕೇಂದ್ರಕ್ಕೆ ತೆರಳಿ ಪ್ರಶ್ನೆ ಪತ್ರಿಕೆಯನ್ನು ಚೆನ್ನಾಗಿ ಓದಿ ಅರ್ಥೈಸಿಕೊಂಡು ಉತ್ತರಿ ಸುವ ಮೂಲಕ ಉತ್ತಮ ಅಂಕ ಗಳಿಸಿ ಯಶಸ್ಸು ಸಾಧಿಸಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಬಿ. ಸಣ್ಣಪ್ಪ ತಿಳಿಸಿದರು.

ಪಟ್ಟಣದಲ್ಲಿ ಭಾನುವಾರ ಮಾನಸ ಶಿಕ್ಷಣ ಸಂಸ್ಥೆಯ ನಿಸರ್ಗ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಾಗಾರ ಮತ್ತು ಪ್ರತಿಭಾನ್ವೇಷಣಾ ಸಂಸ್ಥೆಯಿಂದ ಪ್ರಪ್ರಥಮ ಬಾರಿಗೆ ಆಯೋಜಿಸಿದ್ದ ಪ್ರತಿಭಾನ್ವೇಷಣಾ ಸ್ಪರ್ಧಾ ಪರೀಕ್ಷೆಗೆ ಚಾಲನೆ ನೀಡಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಪ್ಪದೇ ಎಲ್ಲಾ ತರಗತಿಗಳಿಗೂ ಹಾಜರಾಗಬೇಕು. ಪಠ್ಯಕ್ರಮವನ್ನು ಚೆನ್ನಾಗಿ ಅರ್ಥ ಮಾಡಿ ಕೊಳ್ಳಬೇಕು. ವೇಳಾಪಟ್ಟಿ ಹಾಕಿಕೊಳ್ಳುವ ಮೂಲಕ ಅಧ್ಯಯನ ಮಾಡಬೇಕು. ವಿಷಯ ಪುನರಾವರ್ತನೆ ಮಾಡುವ ಬದಲು ಪ್ರತಿ ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಪರಾಮರ್ಶಿ ಸುವುದನ್ನು ರೂಢಿಸಿಕೊಳ್ಳಬೇಕು ಎಂದರು.

ಬಹುಮಾನ ವಿತರಿಸಿ ಮಾತನಾಡಿದ ಮಾನಸ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಕಾರ್ಯ ದರ್ಶಿ ಡಾ.ದತ್ತೇಶ್ ಕುಮಾರ್, ಮಾನಸ ಶಿಕ್ಷಣ ಸಂಸ್ಥೆಯಲ್ಲಿ ಪ್ರತಿಭಾನ್ವೇಷಣೆ ಪರೀಕ್ಷೆ ನಡೆಸುತ್ತಿರುವುದು ಮೊದಲ ಪ್ರಯತ್ನ. ಇಂದು 450ಕ್ಕೂ ಅಧಿಕ ವಿದ್ಯಾರ್ಥಿ ಗಳು ಪರೀಕ್ಷೆಯಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಯಾವ ವಿದ್ಯಾರ್ಥಿ ಗಳು ನನ್ನಿಂದ ಸಾಧ್ಯವಿಲ್ಲ ಎನ್ನಬಾರದು. ಸಾಧಿಸುವ ಕನಸು, ಸಾಧಿಸುವ ಗುರಿ, ಛಲ ಹೊಂದುವ ಮೂಲಕ ಜೀವನದಲ್ಲಿ ಯಶಸ್ಸು ಕಾಣಬೇಕು. ಪ್ರತಿಭಾನ್ವೇಷಣೆ ಪರೀಕ್ಷೆ ನಿಮ್ಮ ಮುಂದಿನ ಪರೀಕ್ಷೆ ಯಶಸ್ಸಿಗೆ ದಿಕ್ಸೂಚಿಯಾಗಲಿದೆ ಎಂದರು.

ಬಹುಮಾನ ವಿತರಣೆ: ಮಾನಸ ಪ್ರತಿಭಾನ್ವೇಷಣಾ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಾಸವಿ ವಿದ್ಯಾಸಂಸ್ಥೆಯ ರಿಷಿತಾಗೆ 10 ಸಾವಿರ, ವಿಸ್ಡಂ ಶಾಲೆಯ ನಿಧಿಶ್ರೀಗೆ ದ್ವಿತಿಯ ಬಹುಮಾನ 5 ಸಾವಿರ ಹಾಗೂ ಸರ್ಕಾರಿ ಆದರ್ಶ ವಿದ್ಯಾ ಲಯದ ನಿಹಾರಿಕಾಗೆ ತೃತೀಯ ಬಹುಮಾನ 3 ಸಾವಿರ, ಪರೀಕ್ಷೆಯಲ್ಲಿ ಪಾಲ್ಗೊಂಡ ಸಿಂಚನ ಸತೀಶ್, ಸಂಜೀವಿನಿ, ಗೀತಾ, ಪ್ರವೀಣ್, ಪ್ರಿಯಾಂಕ ಅವರಿಗೆ ಸಮಾಧಾನ ಕರ ಬಹುಮಾನ ವಿತರಿಸಲಾಯಿತು.

ಈ ವೇಳೆ ಡಾ.ಎಸ್.ಶಿವರಾಜಪ್ಪ, ಮಾನಸ ಸಂಸ್ಥೆ ಅಧ್ಯಕ್ಷ ಎಸ್.ನಾಗರಾಜು, ವಿಶೇಷಾಧಿಕಾರಿಗಳಾದ ಡಾ.ಆರ್.ನಾಗ ಭೂಷಣ್, ಎ.ಪಿ.ದಿನೇಶ್‌ಕುಮಾರ್, ಸಂಯೋಜನಾಧಿಕಾರಿ ಡಾ.ಎಂ.ಚನ್ನಶೆಟ್ಟಿ, ಪ್ರಾಂಶುಪಾಲ ಡಿ.ಕೃಷ್ಣೇಗೌಡ, ಶಂಕರ್, ಪತ್ರಿಕಾ ವಕ್ತಾರ ಬಾಬು ಇನ್ನಿತರಿದ್ದರು.

ನಾಳೆ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಪ್ರತಿಭಟನೆ


ಚಾಮರಾಜನಗರ, ಜ.18– ಶಾಲಾ ಮಾನ್ಯತೆ ನವೀಕರಣ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾ ಯಿಸಿ ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆ ಗಳ ಒಕ್ಕೂಟ ಜ.20ರಂದು ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಬಾಲಸುಬ್ರಹ್ಮಣ್ಯಂ ತಿಳಿಸಿದರು.

ಅಂದು ಬೆಳಗ್ಗೆ 10 ಗಂಟೆಗೆ ಮೆರ ವಣಿಗೆಯಲ್ಲಿ ಬಿ. ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಮನವಿ ಸಲ್ಲಿಸಲಾಗುವುದು. ಪ್ರತಿಭಟನೆಯಲ್ಲಿ ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷ ಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸುವಂತೆ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಶಾಲೆಗಳಿಗೆ ಭೂ ಪರಿವರ್ತನೆ ನಿಯಮ ಸಂಪೂರ್ಣ ಕೈ ಬಿಡಬೇಕು. ಶಾಲೆ ಗಳಿಂದ ತೆರಿಗೆ ಸೆಸ್ ಮಾತ್ರ ಪಡೆಯ ಬೇಕು. ಭೂ ಪರಿವರ್ತನೆ ಶುಲ್ಕ ವಿಧಿಸಬಾರದು. ಕೋರ್ಟ್‌ನ ಆದೇಶದಂತೆ 15 ಮೀ.ಗಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಸರಳ ಅಗ್ನಿ ಸುರಕ್ಷತಾ ನಿಯಮ ಅನ್ವಯಿಸಬೇಕು.

ಮಾನ್ಯತೆ ನವೀಕರಣ ಪ್ರಕ್ರಿಯೆ ಯನ್ನು ಏಕಗವಕ್ಷಿ ಯೋಜನೆಯಡಿ ಜಾರಿಗೊಳಿಸಬೇಕು. ಎಲ್ಲಾ ಶಾಲೆ ಗಳಿಗೂ ಮಾನ್ಯತೆ ನವೀಕರಣವನ್ನು ಕನಿಷ್ಠ 10 ವರ್ಷಗಳ ಅವಧಿಗೆ ನೀಡ ಬೇಕು. ಆರ್‌ಟಿಇ ಯೋಜನೆಯಡಿ ಬಾಕಿಯಿರುವ ಸಂಪೂರ್ಣ ಹಣ ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಕನ್ನಡಿಗರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ



ಕನ್ನಡಿಗರ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಜ.18–ಕರ್ನಾ ಟಕದ ಶಬರಿಮಲೆ ಯಾತ್ರಿಗಳ ವಾಹನ ತಡೆದು ಕನ್ನಡಿಗರ ಮೇಲೆ ಹಲ್ಲೆ ನಡೆಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾ ಯಿಸಿದ ಕರ್ನಾಟಕ ಸೇನಾಪಡೆ ಕಾರ್ಯ ಕರ್ತರು ತಮಿಳುನಾಡು, ಕೇರಳ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿ ಸಿದರು. ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ತಮಿಳು ನಾಡು, ಕೇರಳ ಸರ್ಕಾರಗಳು ಕನ್ನಡಿಗರ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸು ತ್ತಿದ್ದಾರೆ. ಎರಡೂ ರಾಜ್ಯಗಳಲ್ಲೂ ಕನ್ನಡ ವಿರೋಧಿ ನೀತಿ ಅನುಸರಿಸಲಾಗುತ್ತಿದೆ. ತಮಿಳುನಾಡಿನಲ್ಲಿ ಕರ್ನಾಟಕದ ವಾಹನ ಗಳು ಕರ್ನಾಟಕ ಬಾವುಟ ಕಟ್ಟಿಕೊಂಡು ಹೋದರೆ ಅದನ್ನು ಕಿತ್ತುಹಾಕಿ ಅವರ ಮೇಲೆ ದೌರ್ಜನ್ಯ ನಡೆಸಿ ದಬ್ಬಾಳಿಕೆ ಮಾಡುತ್ತಿರು ವುದರ ವಿರುದ್ಧ ಇಂದು ನಗರದಲ್ಲಿ ಕನ್ನಡಪರ ಸಂಘಟನೆಗಳಿಂದ ರಾಷ್ಟ್ರೀಯ ಹೆದ್ದಾರಿ ತಡೆದು ಕೇರಳ, ತಮಿಳುನಾಡು ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುತ್ತಿದೆ ಎಂದರು.

ಮಹಾಜನ ವರದಿ ಪ್ರಕಾರ ಕಾಸರ ಗೋಡು ನಮ್ಮದೆ. ಆದರೆ ಅದು ಕರ್ನಾಟಕ ದಿಂದ ವಂಚಿತವಾಗಿದೆ. ಇಂತಹ ಗಂಡು ಮೆಟ್ಟಿನ ನೆಲದಲ್ಲಿ ಕೇರಳ, ತಮಿಳು ನಾಡು ಸರ್ಕಾರದವರು ಚುನಾವಣೆ ಹತ್ತಿರ ಬರುತ್ತಿದೆ ಎಂದು ಹೇಳಿ ಕನ್ನಡಿಗರ ಮೇಲೆ ಹಲ್ಲೆ ನಡೆಸುತ್ತಿರುವುದು ಅತ್ಯಂತ ಖಂಡ ನೀಯ. ಮುಂದಿನ ದಿನಗಳಲ್ಲಿ ಕನ್ನಡಿಗರ ಮೇಲೆ ಕೇರಳ, ತಮಿಳು ನಾಡಿನವರು ದೌರ್ಜನ್ಯ ನಡೆಸಿದರೆ ನಿಮ್ಮ ಎರಡೂ ರಾಜ್ಯಗಳ ಗಡಿಬಂದ್ ಮಾಡ ಬೇಕಾಗುತ್ತದೆ. ಕರ್ನಾಟಕ ಸರ್ಕಾರ ಕೂಡ ತಮಿಳುನಾಡು, ಕೇರಳ ಸರ್ಕಾರ ಗಳ ಜೊತೆ ಮಾತ ನಾಡಿ ಕನ್ನಡಿಗರಿಗೆ ರಕ್ಷಣೆ ಕೊಡಿಸಬೇಕು ಎಂದು ಒತ್ತಾಯಿ ಸಿದರು. ಶಾ.ಮುರಳಿ, ಪ್ಯಾದಹುಂಡಿ ರಾಜು, ಸುವರ್ಣ ಕರ್ನಾಟಕದ ಸುರೇಶ್ ವಾಜ ಪೇಯಿ, ರಾಚಪ್ಪ, ರಾ.ಜಗದೀಶ್, ಕೆಂಪ ರಾಜು, ರಾಜೇಂದ್ರ ಜಗದೀಶ್, ಲೋಕೇಶ್, ಜಿ.ಮಹೇಶ್, ಚಾ.ಸಿ.ಸಿದ್ದರಾಜು ಇತರರಿದ್ದರು.

ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ

ಸಚಿವರ ರಾಜೀನಾಮೆ ಪಡೆಯಿರಿ ಇಲ್ಲ ನೀವೇ ರಾಜೀನಾಮೆ ನೀಡಿ

ಸಿಎಂ ಸಿದ್ದರಾಮಯ್ಯರಿಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಗ್ರಹ

ಮೈಸೂರು, ಜ.18(ಎಸ್‌ಪಿಎನ್)– ಅಬಕಾರಿ ಇಲಾಖೆ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಲ್ಲಿ ನೈತಿಕತೆ ಉಳಿದಿದ್ದರೆ ಸಂಬಂಧಿಸಿದ ಸಚಿವರ ರಾಜೀನಾಮೆ ಪಡೆಯಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.



ಸುತ್ತೂರು ಜಾತ್ರೆಯಲ್ಲಿ ಭಾಗವಹಿಸಲು ತೆರಳುವ ಮುನ್ನ ಮೈಸೂರು ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಭ್ರಷ್ಟಾಚಾರ ಪ್ರಕರಣದಲ್ಲಿ ಉದ್ದುದ್ದ ಭಾಷಣ ಮಾಡುವ ಸಿಎಂ ಸಿದ್ದರಾಮಯ್ಯನವರು ಅಬಕಾರಿ ಸಚಿವರ ರಾಜೀನಾಮೆ ಪಡೆಯಬೇಕು. ಅದು ಸಾಧ್ಯವಾಗದಿದ್ದಲ್ಲಿ ತಾವೇ ರಾಜೀನಾಮೆ ನೀಡಬೇಕು ಎಂದರು.

ಅಬಕಾರಿ ಇಲಾಖೆಯ ಓರ್ವ ಹಿರಿಯ ಅಧಿಕಾರಿ ಖುದ್ದು ಲೋಕಾಯುಕ್ತ ದಾಳಿಯಲ್ಲಿ ದಾಖಲೆ ಸಮೇತ ಸಿಕ್ಕಿದ್ದಾರೆ. ಜೊತೆಗೆ ಸ್ಥಳದಲ್ಲಿ 25 ಲಕ್ಷ ನಗದು ದೊರೆತಿದೆ. ಕೋಟ್ಯಾಂತರ ರೂಪಾಯಿ ಮೊತ್ತದ ಭ್ರಷ್ಟಾಚಾರ ನಡೆಯುತ್ತಿರುವ ಕುರಿತು ಆಡಿಯೊ ಸಾಕ್ಷ್ಯ ಲಭ್ಯವಾಗಿದೆ. ಸಚಿವರ ಮೇಲೆ ನೇರ ಆಪಾದನೆ ಬಂದಿದೆ. ಆದರೂ ಈ ಕುರಿತು ಮಾತನಾಡುತ್ತಿಲ್ಲ ಎಂದು ಹೇಳಿದರು.

ಮನರೇಗಾ ಬಗ್ಗೆ ಚರ್ಚಿಸುವುದೇ ಆಗಿದ್ದರೆ ಮುಂದಿನ ತಿಂಗಳು ನಡೆಯಲಿರುವ ಬಜೆಟ್ ಅಧಿವೇಶನದಲ್ಲಿ ಮಾಡಬಹುದಿತ್ತು. ವಿಶೇಷ ಅಧಿವೇಶನ ಕರೆದಿರುವುದು ಸಿದ್ದರಾಮಯ್ಯ ಅವರ ಚಾಣಾಕ್ಷ ನಡೆ. ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ದಾವೋಸ್‌ಗೆ ಕಳುಹಿಸಿ ತಾವು ರಾಜಕೀಯ ಚದುರಂಗದಾಟ ಆಡಲು ಹೊರಟಿದ್ದರು. ಇದು ಗೊತ್ತಾಗಿಯೇ ಶಿವಕುಮಾರ್ ತಮ್ಮ ಪ್ರವಾಸ ಮೊಟಕುಗೊಳಿಸಿದರು. ಈಗ ಸದನದ ಗೌರವ ಹಾಳು ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಇವರ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಸಿಎಂ ತವರು ಕ್ಷೇತ್ರದಲ್ಲಿ ದಾದಾಗಿರಿ: ದಾವೋಸ್ ಹೂಡಿಕೆ ಸಮಾವೇಶಕ್ಕೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಯಾರೂ ಹೋಗಿಲ್ಲ. ರಾಜ್ಯದ ಹಿತದೃಷ್ಟಿ ಬಗ್ಗೆ ಅವರಿಗೆ ಆಸಕ್ತಿ ಇಲ್ಲ. ಇಂತಹ ನಿರಾಸಕ್ತಿ ರಾಜ್ಯಕ್ಕೆ ಮಾಡುವ ಮಹಾಮೋಸ ಎಂದು ದೂರಿದರಲ್ಲದೆ, ಮುಖ್ಯಮಂತ್ರಿ ತವರು ಕ್ಷೇತ್ರ ವರುಣದಲ್ಲಿ ಕಾಂಗ್ರೆಸ್ ಗೂಂಡಾಗಳು ಮಹಿಳಾ ಅಧಿಕಾರಿಗಳನ್ನು ಬೆದರಿಸುವ ಕೆಲಸ ಮಾಡಿರುವುದು ಮೊದಲೇನಲ್ಲ.

ಸ್ವತಃ ಸಿದ್ದರಾಮಯ್ಯ ಅವರೇ ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿ ಮೇಲೆ ಕೈ ಎತ್ತಿದ್ದರು. ಜಿಲ್ಲಾಧಿಕಾರಿಗೆ ವೇದಿಕೆಯಲ್ಲೇ ಅಪಮಾನ ಮಾಡಿದ್ದರು. ಶಿಡ್ಲಘಟ್ಟದಲ್ಲಿ ಪೌರಾಯುಕ್ತೆ ಮೇಲೆ ಕಾಂಗ್ರೆಸ್ ಮುಖಂಡನೊಬ್ಬ ದುಂಡಾವರ್ತನೆ ಮಾಡಿದ್ದಾನೆ. ಕಳೆದ ಎರಡೂವರೆ ವರ್ಷದಲ್ಲಿ ಈ ಸರ್ಕಾರ ಅಧಿಕಾರಿಗಳನ್ನು ಬೆದರಿಸುವ ಕೆಲಸ ಮಾಡುತ್ತಿದೆ ಎಂದರು.

ಯಜಮಾನಿಕೆ ಶೋಷಣೆಯಿಂದ ಪಾರಾಗಲು

ತಳಸಮುದಾಯಗಳ ಸಾಂಸ್ಕೃತಿಕ ಪ್ರತಿರೋಧ ನಿರಂತರವಾಗಿರಬೇಕು

ಸಂಸ್ಕೃತಿ ಚಿಂತಕ ಪ್ರೊ.ರಾಜೇಂದ್ರ ಚೆನ್ನಿ ಪ್ರತಿಪಾದನೆ

ಮೈಸೂರು, ಜ.18(ಎಂಕೆ)– ಅಧಿಕಾರ ಮತ್ತು ಸಂಸ್ಕೃತಿಯನ್ನೊಳಗೊಂಡ ಯಜಮಾನಿಕೆಯ ಶೋಷಣೆಯಿಂದ ಹೊರಬರಲು ತಳಸಮುದಾಯಗಳ ಸಾಂಸ್ಕೃತಿಕ ಪ್ರತಿರೋಧ ನಿರಂತರವಾಗಿರಬೇಕು ಎಂದು ಸಂಸ್ಕೃತಿ ಚಿಂತಕ ಪ್ರೊ.ರಾಜೇಂದ್ರ ಚೆನ್ನಿ ಹೇಳಿದರು.



ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಬಹುರೂಪಿ ಬಾಬಾ ಸಾಹೇಬ್ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ತಳ ಸಮುದಾಯಗಳ ಸಾಂಸ್ಕೃತಿಕ ಪ್ರತಿರೋಧ'ದ ಕುರಿತು ಮಾತನಾಡಿದ ಅವರು, ಯಜಮಾನಿಕೆ ಎಂಬುದು ಸಾಂಸ್ಕೃತಿಕ ಮೂಲದ್ದಾಗಿರುವುದರಿಂದ ಸಾಂಸ್ಕೃತಿಕ ಪ್ರತಿರೋಧದ ಮೂಲಕವೇ ಬದಲಾವಣೆ ಕಾಣಬೇಕಿದೆ ಎಂದರು.

ಎಲ್ಲಿಯವರೆಗೆ ಯಜಮಾನಿಕೆ ಎಂಬುದು ಇರಲಿದೆಯೋ ಅಲ್ಲಿಯವರೆಗೆ ಶೋಷಣೆ ನಡೆಯುತ್ತಿರುತ್ತದೆ. ಅಂಬೇಡ್ಕರ್ ಅವರ ಕಾಲಘಟ್ಟದಲ್ಲಿ ದನ–ಕರುಗಳು ತಿಂದು ಸಗಣಿ ಮೂಲಕ ಹೊರಬಂದಿದ್ದ ಜೀರ್ಣವಾಗದ ಕಾಳುಗಳನ್ನು ಕೂಲಿ ಮಾಡುವವರಿಗೆ ನೀಡುತ್ತಿದ್ದರು ಎಂದರೆ, ದಲಿತರ ಮೇಲಾಗುತ್ತಿದ್ದ ಶೋಷಣೆಗಳು ಕಲ್ಪನೆಗೂ ಮೀರಿದ್ದಾಗಿದ್ದವು. ಇದೆಲ್ಲವನ್ನೂ ಕಂಡಿದ್ದರಿಂದ ಅಂಬೇಡ್ಕರ್ ಅವರು, ಜಾತಿ ವ್ಯವಸ್ಥೆ ತೊಲಗಬೇಕಾದರೆ, ಮೊದಲು ಶಾಸ್ತ್ರಗಳನ್ನು ತೊಲಗಿಸಬೇಕು ಎಂದಿದ್ದು, ದಲಿತ ವ್ಯಕ್ತಿತ್ವವನ್ನು ಪುನರ್ ನಿರ್ಮಿಸಿ, ದಲಿತ ವ್ಯಕ್ತಿತ್ವಕ್ಕೆ ರಾಜಕೀಯ ವ್ಯಕ್ತಿತ್ವವನ್ನು ದೊರಕಿಸಿಕೊಡುವ ಮೂಲಕ ವೈಚಾರಿಕ ಸಾಧನೆ ಮಾಡಿದವರು ಅಂಬೇಡ್ಕರ್ ಎಂದು ಸ್ಮರಿಸಿದರು.


ಹಿಂದುತ್ವದ ಶತ್ರು ದಲಿತ...

ಹಿಂದುತ್ವದ ಶತ್ರು ಮುಸ್ಲಿಂ ಎಂದು ಗುರ್ತಿಸುವುದು ಬರೀ ಭ್ರಮೆಯಷ್ಟೆ. ಹಿಂದುತ್ವದ ಪ್ರಧಾನ ಶತ್ರು ದಲಿತರು. ಎಲ್ಲಿಯವರೆಗೆ ದಲಿತ ದಲಿತ ನಾಗಿಯೇ ಇರುತ್ತಾನೋ ಅಲ್ಲಿಯವರೆಗೂ ಈ ಯಜಮಾನಿಕೆ ಎಂಬುದು ಇರಲಿದೆ.

- ಪ್ರೊ.ರಾಜೇಂದ್ರ ಚೆನ್ನಿ,
ಸಂಸ್ಕೃತಿ ಚಿಂತಕ, ಶಿವಮೊಗ್ಗ

ದಲಿತರೆಂಬುವರಲ್ಲಿ ಕ್ರೀಯಾಶೀಲತೆ ಇಲ್ಲ. ಅವರಿಂದ ಹೊರಬರುವ ಪ್ರತಿರೋಧವೂ ಸಿಮೀತವಾಗಿರಲಿದೆ ಎನ್ನುವ ತಪ್ಪು ಕಲ್ಪನೆಯಿಂದಲೇ ಕೆಲ ಸಿದ್ಧಾಂತಿಗಳು ಪ್ರಭುತ್ವ ಸಾಧಿಸುತ್ತಿದ್ದಾರೆ. ಆದ್ದರಿಂದ ದಲಿತರು ಶಿಕ್ಷಣ ಪಡೆದುಕೊಳ್ಳಬೇಕು. ಅನುಭವಿಸಿದ ನೋವನ್ನು ಮನದಲ್ಲಿಟ್ಟುಕೊಂಡು ಶಿಕ್ಷಣ ಪಡೆದಾಗಲೇ ಕ್ರಾಂತಿ ಸಾಧ್ಯವಾಗಲಿದೆ. ಆದ್ದರಿಂದ ಅಂಬೇಡ್ಕರ್ ಅವರ ಮಾರ್ಗದರ್ಶನ ಅವಶ್ಯವಾಗಿ ಬೇಕಾಗಿದೆ ಎಂದರು.

ಸ್ವಚ್ಛತೆ ಸಂದೇಶ ಸಾರಬೇಕಿರುವ ಪಾಲಿಕೆಯ ಹಿಂದೆಯೇ ಹೇಸಿಗೆ, ದುರ್ವಾಸನೆ!



ಮೈಸೂರು ಮಹಾನಗರ ಪಾಲಿಕೆ ಹಿಂಭಾಗದ ಡಿ.ಬನುಮಯ್ಯ ರಸ್ತೆಯ ಶೋಚನೀಯ ಸ್ಥಿತಿ.

ಮೈಸೂರು, ಜ.18– ಸ್ವಚ್ಛ ಸರ್ವೇಕ್ಷಣೆಯಲ್ಲಿ ಮತ್ತೆ ದೇಶದ ಪ್ರಥಮ ಸ್ವಚ್ಛ ನಗರವೆಂಬ ಗರಿ ಮುಡಿಯಬೇಕೆಂಬ ಆಶಯ ಹೊಂದಿರುವ ಮೈಸೂರು ಮಹಾನಗರ ಪಾಲಿಕೆಯ ಹಿಂಭಾಗವೇ ಅನೈರ್ಮಲ್ಯ ತಾಂಡವವಾಡುತ್ತಿದೆ.

ನಗರ ಪಾಲಿಕೆ ಪ್ರಧಾನ ಕಚೇರಿ ಹಿಂಭಾಗದ ಡಿ.ಬನುಮಯ್ಯ ರಸ್ತೆಯಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಚಾಮರಾಜ ಜೋಡಿ ರಸ್ತೆ–ಸಂತೆಪೇಟೆ–ಡಿ.ದೇವರಾಜ ಅರಸು ರಸ್ತೆ ಸಂಪರ್ಕಿಸುವ ಈ ಮಾರ್ಗದಲ್ಲಿ ಸದಾ ವಾಹನ ಹಾಗೂ ಜನ ಸಂಚಾರವಿದ್ದರೂ ಕಸದ ಗುಂಡಿಯಾಗಿರುವುದು ವಿಷಾದನೀಯ. ಸಾಲುಗಟ್ಟಿ ನಿಲ್ಲುವ ಲಾರಿ, ಟೆಂಪೋ ಇನ್ನಿತರ ವಾಹನಗಳ ಮರೆಯಲ್ಲಿ ಕಾಂಪೌಂಡ್‌ಗೆ ಮೂತ್ರ ವಿಸರ್ಜನೆ ಮಾಡುವುದರಿಂದ ಇಡೀ ರಸ್ತೆ ಗಬ್ಬೆದ್ದು ನಾರುತ್ತಿದೆ.

ಪಾಲಿಕೆ ಕಾಂಪೌಂಡ್ ಉದ್ದಕ್ಕೂ ಪ್ಲಾಸ್ಟಿಕ್ ಕವರ್‌ಗಳು, ಬಾಟಲಿಗಳು ಇನ್ನಿತರ ತ್ಯಾಜ್ಯಗಳ ರಾಶಿ ಕಣ್ಣಿಗೆ ರಾಚುತ್ತಿದೆ. ಸಂಜೆ ಯಾದರೆ ಹರಿದ ರಟ್ಟಿನ ಬಾಕ್ಸ್‌ಗಳು, ಆಹಾರ ತ್ಯಾಜ್ಯ ಗುಡ್ಡೆ ಬೀಳುತ್ತದೆ. ರಾಸುಗಳು ಹಾಗೂ ನಾಯಿಗಳು ಆಹಾರಕ್ಕಾಗಿ ಹೆಕ್ಕುವುದರಿಂದ ತ್ಯಾಜ್ಯವೆಲ್ಲಾ ರಸ್ತೆಗೆ ಹರಡುತ್ತದೆ ಗಂಟು ಹಾಕಿದ ಪ್ಲಾಸ್ಟಿಕ್ ಕವರ್‌ಗಳನ್ನು ನಾಯಿಗಳು ಕಚ್ಚಿ ಓಡಾಡುವ ದೃಶ್ಯ ಸಾಮಾನ್ಯವಾಗಿದೆ. ಕೆಲವೊಮ್ಮೆ ಪ್ಲಾಸ್ಟಿಕ್ ರಾಶಿಗೆ ಯಾರೋ ಬೆಂಕಿ ಹಾಕುವುದರಿಂದ ಕೆಟ್ಟ ಹೊಗೆ ಪಸರಿಸಿ, ಜನರ ಉಸಿರಾಟಕ್ಕೂ ಸಂಚಕಾರ ಉಂಟಾಗುತ್ತದೆ.

ಸ್ವಚ್ಛ ನಗರಿ ಪ್ರಶಸ್ತಿಗಾಗಿ ಪಾಲಿಕೆಯು ತವಕಿಸುತ್ತಿದೆ ಈ ನಿಟ್ಟಿನಲ್ಲಿ ಹಲವಾರು ಜಾಗೃತಿ ಕಾರ್ಯಕ್ರಮ, ಸಭೆಗಳನ್ನು ಆಯೋಜಿಸುತ್ತಿದೆ. ಆದರೆ ತಮ್ಮ ಕಚೇರಿ ಹಿಂಬದಿಯಲ್ಲಿರುವ ಕಸ ತೆಗೆಯುವುದಿಲ್ಲ. ಇಲ್ಲಿನ ನೈರ್ಮಲ್ಯ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಯಾವುದೇ ಕ್ರಮ ವಹಿಸಿಲ್ಲ. ತಮ್ಮ ಮನೆ ಬಳಿಯೇ ಕೊಳಚೆ ಇಟ್ಟುಕೊಂಡು ಬೇರೆಯವರಿಗೆ ಸ್ವಚ್ಛತೆ ಪಾಠ ಮಾಡುವುದರಲ್ಲಿ ಅರ್ಥವಿಲ್ಲ. ಪಾಲಿಕೆಯು ಸುತ್ತಮುತ್ತಲಿನ ಪರಿಸರವನ್ನು ಪ್ರತಿನಿತ್ಯವೂ ಸ್ವಚ್ಛವಾಗಿಟ್ಟುಕೊಳ್ಳಲು ಈಗಲಾದರೂ ಕ್ರಮ ವಹಿಸಬೇಕು. ನಾವು ಜೀವಿಸುವ ಪರಿಸರದ ಸ್ವಚ್ಛತೆ ಬಗ್ಗೆ ಜನರಲ್ಲೂ ಅರಿವಿರಬೇಕು ಎಂದು ಸ್ಥಳೀಯ ಸಿದ್ದೇಶ್ ಬೇಸರದಿಂದ ನುಡಿದರು.

ಮೈಸೂರು ಮಿತ್ರ

ಸೋಮವಾರ 19 ಜನವರಿ 2026

ಡಣಾಯಕನಪುರದಲ್ಲಿ ನೂತನ ಡೇರಿ ಕಟ್ಟಡ ಉದ್ಘಾಟನೆ

ಡೇರಿಗೆ ನೀಡುತ್ತಿರುವ ಹಾಲು ಸಾಲದು, ಸಾವಿರ ಲೀಟರ್‌ಗೆ ಹೆಚ್ಚಿಸಿ



ತಿ.ನರಸೀಪುರ ತಾಲೂಕು ಡಣಾಯಕನಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡವನ್ನು ಸಂಘದ ಅಧ್ಯಕ್ಷ ಡಿ.ಎಲ್.ಮಹದೇವಪ್ಪ ಉದ್ಘಾಟಿಸಿದರು.

ತಿ.ನರಸೀಪುರ. ಜ.18– ತಾಲೂಕಿನಲ್ಲಿಯೇ ದೊಡ್ಡ ಗ್ರಾಮವಾಗಿರುವ ಡಣಾಯಕನಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ರೈತರು ನೀಡುತ್ತಿರುವ ಹಾಲು ಸಾಲದಾಗಿದ್ದು ಒಂದು ಸಾವಿರ ಲೀಟರ್ ಹಾಲು ನೀಡಲು ರೈತರು ಪ್ರಯತ್ನ ಪಡಬೇಕೆಂದು ಡಣಾಯಕನಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಡಿ.ಎಲ್.ಮಹದೇವಪ್ಪ ತಿಳಿಸಿದರು.

ಡಣಾಯಕನಪುರ ಗ್ರಾಮದಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಡೈರಿ ಕಟ್ಟಡದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ನಮ್ಮಗ್ರಾಮ ಬಹು ದೊಡ್ಡ ಗ್ರಾಮವಾಗಿದೆ.ಇಲ್ಲಿ ಬಹು ಜನರು ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೂ ಪ್ರತಿ ನಿತ್ಯ 350 ಲೀಟರ್ ಹಾಲು ಮಾತ್ರವೇ ಶೇಖರಣೆಯಾಗುತ್ತಿದೆ. ರೈತರು ಒಂದು ಸಾವಿರ ಲೀಟರ್ ಹಾಲು ಉತ್ಪಾದನೆ ಮಾಡಲು ಶ್ರಮ ಹಾಕಬೇಕು. ಹೆಚ್ಚಾಗಿ ದನಕರುಗಳನ್ನು ಸಾಕುವ ಮೂಲಕ ಹೆಚ್ಚು ಹಾಲು ಉತ್ಪಾದಿಸಿ ಡೈರಿಗೆ ಹಾಕುವ ಮೂಲಕ ರೈತರು ಆರ್ಥಿಕವಾಗಿ ಸದೃಢರಾಗುವ ಜೊತೆಗೆ ಸಂಘವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಯತ್ನ ಪಡಬೇಕೆಂದು ಮನವಿ ಮಾಡಿದರು.

ಉತ್ತಮವಾದ ಸ್ವಂತ ಕಟ್ಟಡ: ಗ್ರಾಮದ ಡೈರಿಯು ಈವರೆಗೆ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು ಈಗ ಮೈಮೂಲ್‌ನಿಂದ 18.50 ಲಕ್ಷ ರೂ, ಧರ್ಮಸ್ಥಳ ಸಂಸ್ಥೆಯಿಂದ 1 ಲಕ್ಷ ಹಾಗು ಸಂಘದ ಸದಸ್ಯರಿಂದ 50 ಸಾವಿರ ಪಡೆದು, ಸಂಘದ ವತಿಯಿಂದಲೇ ಖರೀದಿ ಮಾಡಿದ ನಿವೇಶನದಲ್ಲಿ ಉತ್ತಮವಾದ ಕಟ್ಟಡ ನಿರ್ಮಿಸಲಾಗಿದೆ.ಹಾಗಾಗಿ ಸಂಘವು ಮುಂದೆ ಸ್ವಂತ ಸೂರಿನಡಿ ಕಾರ್ಯ ನಿರ್ವಹಿಸಲಿದೆ ಎಂದರು.

ಮುಖ್ಯಮಂತ್ರಿಗಳ ಅನುದಾನ: ಯತೀಂದ್ರ ಸಿದ್ದರಾಮಯ್ಯ ರವರೇ ನೂತನ ಕಟ್ಟಡ ಉದ್ಘಾಟನೆ ಮಾಡಬೇಕಿತ್ತಾದರೂ ಅವರು ಕಾರ್ಯ ಒತ್ತಡದಿಂದ ಬರಲಾಗದ ಹಿನ್ನೆಲೆಯಲ್ಲಿ ನೂತನ ಕಟ್ಟಡ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮೈಮೂಲ್ ನಿರ್ದೇಶಕರ ಉಪಸ್ಥಿತಿಯಲ್ಲಿ ಉದ್ಘಾಟನೆ ಮಾಡಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರು ನಮ್ಮ ಗ್ರಾಮಕ್ಕೆ 5–6 ಕೋಟಿ ರೂ.ಗಳ ಅನುದಾನ ನೀಡಿ ಇಡೀ ಗ್ರಾಮವನ್ನು ಅಭಿವೃದ್ಧಿ ಪಡಿಸಿದ್ದಾರೆ.ರಸ್ತೆ,ಜಮೀನಿಗೆ ತೆರಳುವ ರಸ್ತೆಗಳು, ಜಮೀನಿನಮೇಲೆ ಸ್ಮಶಾನಕ್ಕೆ ಹೋಗುವ ರಸ್ತೆಗಳು,ನೀರಾವರಿ ವ್ಯವಸ್ಥೆ ಸೇರಿದಂತೆ ಗ್ರಾಮದ ರಸ್ತೆಗಳನ್ನು ಪೂರ್ತಿಯಾಗಿ ಕಾಂಕ್ರೀಟ್ ರಸ್ತೆ ಮಾಡಿದ್ದಾರೆ. ಹಾಗಾಗಿ ಗ್ರಾಮಸ್ಥರು ಅವರಿಗೆ ಆಭಾರಿಯಾಗಿದ್ದೇವೆ ಎಂದು ಡಿಎಲ್.ಮಹದೇವಪ್ಪ ಹೇಳಿದರು.

ಮೈಮೂಲ್ ಮಾಜಿ ಅಧ್ಯಕ್ಷರಾದ ಓಂ ಪ್ರಕಾಶ್,ಕೆ.ಜಿ.ಮಹೇಶ್, ಕೆ.ಉಮಾ ಶಂಕರ್ ಬಿ.ಎನ್.ಸದಾನಂದ ಮಾತನಾಡಿದರು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಮೈಮೂಲ್ ನಿರ್ದೇಶಕಿ ನೀಲಾಂಬಿಕೆ ಮಹೇಶ್, ತಾಲೂಕು ಮೇಲ್ವಿಚಾರಕ ಆರ್.ಪ್ರಮೋದ್, ಕಿರಗಸೂರು ಗ್ರಾ.ಪಂ.ಉಪಾಧ್ಯಕ್ಷೆ ಚಿನ್ನತಾಯಮ್ಮ, ಪಿಡಿಓ ಜಿ.ಧರಣೇಶ್, ಸದಸ್ಯ ಗಿರೀಶ್, ವಸಂತ್, ಸಂಘದ ಉಪಾಧ್ಯಕ್ಷೆ ಶಿವರುದ್ರಮ್ಮ, ನಿರ್ದೇಶಕರಾದ ಪಿ.ಚಿನ್ನ ಬುದ್ಧಿ, ಎಂ. ನಂಜುಂಡಸ್ವಾಮಿ, ಸಿದ್ದಪ್ಪ, ಡಿ.ಬಿ.ನೀಲಕಂಠಸ್ವಾಮಿ, ನಾಗರಾಜು, ನಾಗಮ್ಮ, ಎಸ್.ಸುಶೀಲ, ಲಕ್ಷ್ಮಮ್ಮ, ಪಿ.ಸರೋಜ, ಮುಖ್ಯ ಕಾರ್ಯನಿರ್ವಾಹಕ ಆರ್.ಗಿರೀಶ್, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನಾಧಿಕಾರಿ ನಾಗೇಶ್ ನಾಯಕ್, ಹಾಲು ಪರೀಕ್ಷಕ ಎಂ.ಬಸವಣ್ಣ ಹಾಜರಿದ್ದರು.

ಕಿಡಿಗೇಡಿಗಳ ಕೃತ್ಯದಿಂದ 30 ಎಕರೆ ಅರಣ್ಯ ಪ್ರದೇಶ ಬೆಂಕಿಗಾಹುತಿ

ಹುಲಿ ಕಾಟ ತಡೆಯಲು ಬೆಂಕಿ ಹಚ್ಚಿರುವ ಶಂಕೆ



ಸೊಳ್ಳೇಪುರ ಅರಣ್ಯದಲ್ಲಿ ಬಿದ್ದ ಬೆಂಕಿ ನಂದಿಸುತ್ತಿರುವ ಅರಣ್ಯ ಸಿಬ್ಬಂದಿ.

ಹನಗೋಡು ಹೋಬಳಿಯ ಸೊಳ್ಳೇಪುರ ಅರಣ್ಯ ಪ್ರದೇಶದಲ್ಲಿ ಕಿಡಿಗೇಡಿಗಳ ಕೃತ್ಯಕ್ಕೆ ಸುಮಾರು 30ಎಕರೆಯಷ್ಟು ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿದೆ.

ಹುಣಸೂರು–ಎಚ್.ಡಿ.ಕೋಟೆ ಮುಖ್ಯ ರಸ್ತೆ ಹೊಸೂರು ಗೇಟ್ ಬಳಿಯ ಹುಣಸೆಕಟ್ಟೆ ಹಳ್ಳದ ಟಿಬೆಟ್ ಕ್ಯಾಂಪ್ ಬಳಿಯಲ್ಲಿ ಭಾನುವಾರ ಮಧ್ಯಾಹ್ನ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಸೊಳ್ಳೇಪುರ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅರಣ್ಯ ಪ್ರದೇಶದಲ್ಲಿ ಮೂರು ವರ್ಷಗಳ ಹಿಂದೆ ಅರಣ್ಯ ಇಲಾಖೆ ವತಿಯಿಂದ ಬೆಳೆಸಿದ್ದ ಹಣ್ಣಿನ ಗಿಡ, ಬಿದಿರು ಸಸಿಗಳು ಸಹ ಬೆಂಕಿಗಾಹುತಿಯಾಗಿದೆ ಅಲ್ಲದೆ ಅರಣ್ಯ ಪಕ್ಕದ ಜಮೀನಿನಲ್ಲಿ ಅಳವಡಿಸಿದ್ದ ನೀರು ಹಾಯಿಸುವ ಪೈಪ್‌ಗಳು ಬೆಂಕಿಗಾಹುತಿಯಾಗಿದೆ.

ಬೆಂಕಿ ಬಿದ್ದಿರುವ ಮಾಹಿತಿ ಮೇರೆಗೆ ಆರ್.ಎಫ್.ಓ.ನಂದಕುಮಾರ್ ನೇತೃತ್ವದ 20ಕ್ಕೂ ಹೆಚ್ಚಿನ ಸಿಬ್ಬಂದಿ ಹಾಗೂ ಅಗ್ನಿಶಾಮಕ ಸಿಬ್ಬಂದಿ ಹಾಗೂ ಹೊಸೂರು ಗೇಟ್‌ನ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷ ಗೋವಿಂದ ಹಾಗೂ ಸದಸ್ಯರು, ಗ್ರಾ.ಪಂ.ಮಾಜಿ ಅಧ್ಯಕ್ಷ ಪ್ರಶಾಂತ್ ಸೇರಿದಂತೆ ಯುವಕರ ತಂಡ ಬೆಂಕಿ ನಂದಿಸಲು ನೆರವಾದರು. ಇಲ್ಲಿ ಸಾಕಷ್ಟು ಹುಲಿ ಕಾಟ ಇದ್ದುದರಿಂದ ಕಿಡಿಗೇಡಿಗಳು ಬೆಂಕಿ ಹಾಕಿರಬಹುದೆಂದು ಶಂಕಿಸಲಾಗಿದೆ.

ಯಶಸ್ವಿಯಾಗಿ ಸ್ವಚ್ಛತಾ ಕಾರ್ಯ ನಡೆಸಿಕೊಟ್ಟ ಪೌರ ಕಾರ್ಮಿಕರಿಗೆ ಸನ್ಮಾನ



ಶ್ರೀ ಈರಣ್ಣೇಶ್ವರ ಜಾತ್ರಾ ಮಹೋತ್ಸವ ಮತ್ತು ಸಂಕ್ರಾಂತಿ ಹಬ್ಬದ ಪ್ರಯುಕ್ತ ಗ್ರಾಮದಲ್ಲಿ ಸಂಪೂರ್ಣ ಸ್ವಚ್ಛತೆ ಕಾರ್ಯ ನಡೆಸಿಕೊಟ್ಟ ಪೌರಕಾರ್ಮಿಕರನ್ನು ಗ್ರಾಮಸ್ಥರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು

ಹುಣಸೂರು, ಜ.18– ತಾಲೂಕಿನ ಹೊಸರಾಮನಹಳ್ಳಿ ಗ್ರಾಮದಲ್ಲಿ ಶ್ರೀ ಈರಣ್ಣೇಶ್ವರ ಜಾತ್ರಾ ಮಹೋತ್ಸವ ಮತ್ತು ಸಂಕ್ರಾಂತಿ ಹಬ್ಬದ ಪ್ರಯುಕ್ತ ಗ್ರಾಮವನ್ನು ಸಂಪೂರ್ಣ ಸ್ವಚ್ಛತೆ ಕಾಯಕವನ್ನು ಅತ್ಯಂತ ಸಮರ್ಪಕವಾಗಿ ನಡೆಸಿಕೊಟ್ಟ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರಶುರಾಮ್, ಕಾರ್ಯದರ್ಶಿ ಶೇಖರ್ ಮತ್ತು ಪೌರಕಾರ್ಮಿಕರು, ನೀರುಗಂಟಿ ಅವರನ್ನು ಹೊಸರಾಮನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅಭಿನಂದಿಸಲಾಯಿತು.

ಮೈಸೂರು ಜಿಲ್ಲಾ ಪರಿಶಿಷ್ಟ ಪಂಗಡ ವಿಭಾಗದ ಪ್ರಧಾನ ಕಾರ್ಯದರ್ಶಿ (ಆಡಳಿತ) ಪ್ರಶಾಂತ್ ಕುಮಾರ್ ನಾಯಕ್, ಈರನೇಶ್ವರ ಗ್ರಾಮ ಅಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಜೆ.ಮಾದನಾಯ್ಕ, ಉಪಾಧ್ಯಕ್ಷ ಎಚ್.ಎಸ್.ಮಾದನಾಯಕ, ಪ್ರಧಾನ ಕಾರ್ಯದರ್ಶಿ ಚಂದ್ರನಾಯಕ, ನಿರ್ದೇಶಕ ಎಸ್.ದೇವನಾಯಕ, ಟ್ರಾಫಿಕ್ ಸಬ್ ಇನ್ಸ್‌ಪೆಕ್ಟರ್ ಶಿವರಾಜ್ ನಾಯಕ, ರೈತರ ಸಂಘದ ಉಪಾಧ್ಯಕ್ಷ ಸೋಮಣ್ಣ, ಅಧಿಕಾರಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.ಇದೇ ರೀತಿ ನಿಮ್ಮ ಕೆಲಸ ಪ್ರಾಮಾಣಿಕತೆ ಶ್ರದ್ಧೆ ಮತ್ತೆ ಗ್ರಾಮದ ಅಭಿವೃದ್ಧಿ ಕಡೆ ಸದಾ ನಿಮ್ಮ ಸೇವೆ ಇರಲಿ ಎಂದು ಕೋರಿದರು.

ವಿಸಿ ನಾಲೆಗೆ ನೀರು ಬಿಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ



ಬನ್ನೂರು, ಜ.18– ರೈತರು ವಿವಿಧ ಬಗೆಯ ಬೆಳೆ ಬೆಳೆಯಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ವಿಸಿ ನಾಲೆಗಳಿಗೆ ನೀರು ಬಿಡಬೇಕು. ಇದರಿಂದ ತುರಗನೂರು ಶಾಖೆ ಹಾಗೂ ಹೆಬ್ಬಕವಾಡಿ ಶಾಖೆಗಳಿಗೆ ನೀರು ದೊರೆಯುವುದರಿಂದ ನೂರಾರು ಎಕರೆ ಪ್ರದೇಶಗಳನ್ನು ಉಳಿಸಿದಂತಾಗುತ್ತದೆ. ನೀರು ಬಿಡಲು ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಈಚೆಗೆ ಸಚಿವ ಚೆಲುವರಾಯಸ್ವಾಮಿಯವರು ವಿಸಿ ನಾಲೆಗಳಿಗೆ ನೀರು ಬಿಡುವುದಿಲ್ಲ ಎನ್ನುವ ಹೇಳಿಕೆಯನ್ನು ನೀಡಿದ್ದು ವಿಸಿ ನಾಲೆ ವ್ಯಾಪ್ತಿಯಲ್ಲಿ ಬನ್ನೂರು ಸಮೀಪದ ತುರಗನೂರು ಶಾಖೆ ಹಾಗೂ ಹೆಬ್ಬಕವಾಡಿ ಶಾಖೆಗಳು ಬರುವುದರಿಂದ ನೀರು ಬಿಡದೇ ಇದ್ದರೆ ಬಹಳಷ್ಟು ಅನಾನುಕೂಲವಾಗುತ್ತದೆ. ಇದರಿಂದ ಸರ್ಕಾರ ಈ ಭಾಗದ ನಾಲೆಗಳಿಗೆ ನೀರು ಬಿಡಲು ಕ್ರಮ ಕೈಗೊಳ್ಳಬೇಕೆಂದು ಅವರು ಮನವಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮೂಲಸಂಘಟನೆಯ ಜಿಲ್ಲಾಧ್ಯಕ್ಷ ಹಿಂಡುವಾಳ್ ಚಂದ್ರಶೇಖರ್, ಶಿವಳ್ಳಿ ಚಂದ್ರು, ಬೂರನೂರು ಪುಟ್ಟಸ್ವಾಮಿ, ಸೋಶಿ ಪ್ರಕಾಶ್, ಪ್ರಭುಲಿಂಗ, ಮಂಜೇಶ್ ಗೌಡ, ಹೇಮಂತ್, ಮಾದೇಶ, ಶಿವರಾಂ, ಬಸವರಾಜ್, ಮಹೇಂದ್ರ, ತಮ್ಮಯ್ಯ ಸೇರಿದಂತೆ ಪ್ರಮುಖ ರೈತ ಮುಖಂಡರು ಇದ್ದರು.

ಮುಖ್ಯಮಂತ್ರಿಗೆ ಬೆಳ್ಳಿ ಖಡ್ಗ ನೀಡಿ ಸನ್ಮಾನ



ಟಿ. ನರಸೀಪುರ ತಾಲೂಕಿನ ಕುಪ್ಯಾ ಗ್ರಾಮದಲ್ಲಿ ಆಯೋಜಿಸಲಾಗಿದ್ದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ್ ಬಾಬು ಮತ್ತು ಅವರ ಬೆಂಬಲಿಗರು ಬೆಳ್ಳಿ ಖಡ್ಗ ನೀಡಿ ಸನ್ಮಾನಿಸಿದರು.

'ಸಂಕ್ರಾಂತಿ ಸಮ್ಮಿಲನ ಪದಾಧಿಕಾರಿಗಳ ಮಿಲನ' ಕಾರ್ಯಕ್ರಮ



'ಸಂಕ್ರಾಂತಿ ಸಮ್ಮಿಲನ ಪದಾಧಿಕಾರಿಗಳ ಮಿಲನ' ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಅವರನ್ನು ವಿಶ್ವಕರ್ಮ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಹುಣಸೂರು, ಜ.18– ಸಂಕ್ರಾಂತಿ ಹಬ್ಬವು ಪ್ರತಿಯೊಬ್ಬರಿಗೂ ವಿಶೇಷವಾದ ಹಬ್ಬವಾಗಿದ್ದು ದಕ್ಷಿಣದ ಕಡೆಗೆ ಚಲಿಸುತ್ತಿದ್ದ ಸೂರ್ಯ ತನ್ನ ಪಥವನ್ನು ಉತ್ತರದ ಕಡೆಗೆ ಬದಲಿಸುವ ವಿಶೇಷ ದಿನವಾಗಿದ್ದು ಎಲ್ಲರ ಜೀವನದಲ್ಲಿ ಹೊಸ ಬೆಳಕನ್ನು ಚೆಲ್ಲುವ ಶುಭ ದಿನಗಳಾಗಿವೆ ಎಂದು ಮಾಜಿ ಶಾಸಕ ಹೆಚ್. ಪಿ.ಮಂಜುನಾಥ್ ತಿಳಿಸಿದರು.

ನಗರದ ಕಲ್ಕುಣಿಕೆಯಲ್ಲಿರುವ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ತಾಲೂಕು ವಿಶ್ವಕರ್ಮ ಸಂಘವು ಏರ್ಪಡಿಸಿದ್ದ 'ಸಂಕ್ರಾಂತಿ ಸಮ್ಮಿಲನ ಪದಾಧಿಕಾರಿಗಳ ಮಿಲನ' ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ನಂತರ ಮಾತನಾಡಿದ ಅವರು ಸಿಹಿ ಸಂಕೇತವಾದ ಸಂಕ್ರಾಂತಿ ಹಬ್ಬದಲ್ಲಿ ಪ್ರತಿಯೊಬ್ಬರು ಹೊಸ ದಾನ್ಯದಿಂದ ಸಿಹಿ ಪೊಂಗಲ್ ಮಾಡಿ ತಿನ್ನುವ ಮೂಲಕ ತಂದೆ ಸೂರ್ಯ ದೇವ ಮಗ ಶನಿದೇವ ಇಬ್ಬರೂ ಒಂದೆಡೆ ಸೇರುವ ಈ ಸಂದರ್ಭವೇ ಉತ್ತರಾಯಣದ ಪುಣ್ಯ ಕಾಲದ ಸಂಕ್ರಾಂತಿಯ ಶುಭ ದಿನವಾಗಿದೆ. ಈ ದಿನ ಎಲ್ಲರೂ ಸೂರ್ಯ ದೇವನ ಪ್ರತಿಕವಾಗಿ ಬೆಲ್ಲ ಶನಿದೇವರ ಪ್ರತಿಕವಾಗಿ ಎಳ್ಳು ಎರಡನ್ನು ಸೇರಿಸಿ ಎಲ್ಲರಿಗೂ ಹಂಚಿ ಸಂಭ್ರಮಿಸುವ ದಿನವಾಗಿದೆ. ಇದಕ್ಕಾಗಿ ಈ ಹಬ್ಬ ಎಲ್ಲರಿಗೂ ಸಿಹಿ ಸಂಕೇತವಾಗಿ ಸಂಭ್ರಮಿಸುದ ದಿನವಾಗಿದೆ ಎಂದರು.

ನಂತರ ತಾಲೂಕು ವಿಶ್ವಕರ್ಮ ಸಂಘದ ಅದ್ಯಕ್ಷ ಕೆ.ಎನ್.ಕುಮಾರ್ ಮಾತನಾಡಿ ನಮ್ಮ ಪೂರ್ವಿಕರು ಮತ್ತು ಹಿರಿಯರು ಅಚರಿಸುವ ಅಚರಣೆ ಹಿಂದೆ ಸಮಾಜದಲ್ಲಿನ ಸಾಮರಸ್ಯ ಮತ್ತು ಸೌಹಾರ್ದತೆ ಬಾಳ್ವೆ ನಡೆಸುವ ಸಂದೇಶವಿದೆ. ಅದರಂತೆ ಈಗಲೂ ಸಹ ಬಹಳ ಸಂತೋಷ ಸಂಭ್ರಮದಿಂದ ಎಳ್ಳು–ಬೆಲ್ಲದ ಸಮಾಗಮದ ಸಂಕೇತವಾಗಿ ಸುಗ್ಗಿ ಸಂಕ್ರಾಂತಿಯ ದಿನ ಎಲ್ಲರು ಎಳ್ಳು–ಬೆಲ್ಲವನ್ನು ಹಂಚುವುದರೊಂದಿಗೆ ಸಂಭ್ರಮಿಸುತ್ತಾರೆ ಎಂದರು.

ಈ ಸಂದರ್ಭದಲ್ಲಿ ತಾಲೂಕು ಮಹಿಳಾ ವಿಶ್ವಕರ್ಮ ಸಮಾಜದ ಅಧ್ಯಕ್ಷೆ ಶ್ರೀಮತಿ ಯಶೋದ ತಾಂಡವಮೂರ್ತಿ, ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮಿ ಮಹದೇವ್, ತಾಲೂಕು ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಶ್ರೀಕಂಠ, ಕಾರ್ಯಾಧ್ಯಕ್ಷರಾದ ಕೆಂಡಗಣ್ಣ, ನಿರ್ದೇಶಕರಾದ ವೀರಭದ್ರ, ರಾಜು, ಸುಹಾಸ್, ಶಿವರುದ್ರಚಾರ್, ಸುರೇಶ್.ಎನ್, ಡಾ.ಭರತ್ ಕುಮಾರ್.ಪಿ.ಅರ್., ನಾರಾಯಣ್, ರಾಜಚಾರ್, ಸುಬ್ಬಣ್ಣ, ಲೋಕೇಶ್, ಗಂಗಾಧರಚಾರ್, ಮಲ್ಲಿಕಾರ್ಜುನಚಾರ್, ವೇಕಟೇಶಚಾರ್, ಭೋಗಚಾರ್, ರೇವಣ್ಣ, ಶರವಣ್ಣ, ಕುಭೇರ, ನಾರಾಯಣ, ಅಥನ್, ಶೇಖರ್, ಆಣ್ಣಯಚಾರ್, ನಾಗರಾಜು.ಬಿ.ಕೆ. ಇನ್ನೂ ಅನೇಕರು ಉಪಸ್ಥಿತರಿದ್ದರು.

ತಾಲೂಕು ಮಟ್ಟದಲ್ಲೂ ಕನ್ನಡ ಸೇನೆ ಅಸ್ತಿತ್ವಕ್ಕೆ



ತಿ.ನರಸೀಪುರ, ಜ.18– ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಾಚರಿಸುತ್ತಿದ್ದ ಕನ್ನಡ ಸೇನೆ –ಕರ್ನಾಟಕ ಸಂಘಟನೆ ಇನ್ನು ಮುಂದೆ ತಾಲೂಕು ಮಟ್ಟದಲ್ಲಿ ಕಾರ್ಯಾಚರಿಸಲಿದ್ದು, ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಹಮ್ಮಿಕೊಳ್ಳಲಾಗುತ್ತದೆ ಎಂದು ಸಂಘಟನೆಯ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಬೈರಾಪುರ ಕೆ.ರಾಜು ತಿಳಿಸಿದರು.

ತಾಲೂಕಿನ ಕುಬದ ರಾಮದೇವರ ಬೆಟ್ಟದ ತಪ್ಪಲಿನಲ್ಲಿ ಬೆಂಬಲಿಗರು, ಅಭಿಮಾನಿಗಳು ಆಯೋಜಿಸಲಾಗಿದ್ದ ಔತಣಕೂಟದಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ.ಆರ್. ಕುಮಾರ್ ರವರ ಆದೇಶದ ಮೇರೆಗೆ ತಾಲೂಕು ಮಟ್ಟದಲ್ಲಿ ಸಂಘಟನೆಯನ್ನು ರಚಿಸಿ ಪದಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ತಾಲೂಕಿನಲ್ಲಿ ಮಹಿಳಾ ಘಟಕ, ಅಂಗವಿಕಲ ಘಟಕ, ರೈತ ಘಟಕ ಸೇರಿದಂತೆ ನಾನಾ ಘಟಕಗಳನ್ನು ರಚಿಸಲಾಗುತ್ತದೆ,ಕನ್ನಡ ಸೇನೆಯು ಜಾತ್ಯತೀತ ಸಂಘಟನೆಯಾಗಿದ್ದು , ಕನ್ನಡ ನೆಲ, ಜಲದ ರಕ್ಷಣೆಗಾಗಿ ಹೋರಾಡುವ ಹಾಗೂ ಜನ ಜಾಗೃತಿ ಮೂಡಿಸುವ ಸಂಘಟನೆಯಾಗಿದೆ. ತಾಲೂಕಿನಲ್ಲಿ ಪ್ರತಿಯೊಬ್ಬ ಕನ್ನಡಿಗರೆಲ್ಲರೂ ಸೇನೆಯ ಸದಸ್ಯರಾಗಬೇಕು ಎಂದು ಮನವಿ ಮಾಡಿದ ಅವರು ತಾಲೂಕು ಮಟ್ಟದಲ್ಲಿ ಸಂಘಟನೆಯನ್ನು ಸ್ಥಾಪಿಸಿ ಅಲ್ಲಿಂದ ಬರುವ ಪ್ರತಿಕ್ರಿಯೆ ಆಧಾರದ ಮೇಲೆ ಹೋಬಳಿ ಮಟ್ಟದಲ್ಲೂ ಸಂಘ ರಚಿಸಿ ಕನ್ನಡ ನೆಲ ಜಲ ಭಾಷೆಗಾಗಿ ಹೋರಾಟ ಮಾಡಲಾಗುತ್ತದೆ,

ಕನ್ನಡ ಪರ ಸಂಘಟನೆಯಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿ ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಅವಿರತ ಹೋರಾಟ ಮಾಡಿಕೊಂಡು ಬಂದಿರುವ ಸಂಘಟನೆಯು ತಾಲೂಕಿನಲ್ಲಿ ಜನಪರ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಕನ್ನಡ ಭಾಷೆಯ ಬಗ್ಗೆ ಪ್ರೀತಿ ಕಾಳಜಿ ಹೊಂದಿರುವ ಯುವಕರ ಪಡೆ ಗುರುತಿಸಿ ಉತ್ತಮವಾದ ತಂಡ ರಚನೆ ಮಾಡಲಾಗುತ್ತದೆ ಎಂದರು.

ಈ ವೇಳೆ ಕಳ್ಳೀಪುರ ಕಾಂತರಾಜು, ವಡ್ಗಲ್ಲಪ್ಪ, ತುಂಬ್ಲಾ ಗಣೇಶ್,ಮಹದೇವು, ಮಧು, ಪುಟ್ಟಸುಂದರ, ತಬಲಾ ರಾಚಪ್ಪ, ಗೋಪಾಲಪುರ ರಾಜೇಶ್, ಹಿಟ್ಟುವಳ್ಳಿ ರಮೇಶ್ ಮಹದೇವಸ್ವಾಮಿ, ನಾಗರಾಜು, ಕೇಬಲ್ ಸ್ವಾಮಿ ಹಾಜರಿದ್ದರು.

ಅಭಿನಂದನೆ



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಬಿಜೆಪಿಯ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನ ಅಖಿಲ ಭಾರತ ವೀರಶೈವ ಮಹಾಸಭಾ ಉಪಾಧ್ಯಕ್ಷ ಹಾಗೂ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಅಭಿನಂದಿಸಿದರು. ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ , ಬೆನಕನಹಳ್ಳಿ ವಿಜಯಕುಮಾರ್, ಅಡುಗೆ ಸುರೇಶ್, ರಾಜಶೇಖರ್, ರಮೇಶ್ ಇದ್ದರು.

ಯರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆ

ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಿ: ಶಾಸಕ ಅನಿಲ್



ಹೆಚ್.ಡಿ.ಕೋಟೆ ತಾಲೂಕಿನ ಯರಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜ.18– ತಾಲೂಕಿನ ರೈತರು ಕೃಷಿ ಜೊತೆಗೆ ಹೈನುಗಾರಿಕೆಯನ್ನು ಅಳವಡಿಸಿಕೊಂಡಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಕಾಣಬಹುದು ಎಂದು ಶಾಸಕ ಅನಿಲ್ ಚಿಕ್ಕಮಾದು ಕರೆ ನೀಡಿದರು.

ತಾಲೂಕಿನ ಯರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತಾಲೂಕಿನ ಸಾಕಷ್ಟು ರೈತರುಗಳು ಕೃಷಿ ಜೊತೆಗೆ ಹೈನುಗಾರಿಕೆಯನ್ನು ಅವಲಂಬಿಸಿಕೊಂಡು ಅಭಿವೃದ್ಧಿ ಕಂಡಿದ್ದಾರೆ. ಮೈಮುಲ್ ಅಧ್ಯಕ್ಷರಾದ ಈರೇಗೌಡ ಅವರು ತಾಲೂಕಿನಲ್ಲಿ ಅತಿ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಿರುವುದೆ ಕಾರಣವಾಗಿದೆ ಎಂದರು.

ಮೈಮುಲ್ ಅಧ್ಯಕ್ಷರಾದ ಈರೇಗೌಡ ಅವರು ನಿರ್ದೇಶಕರಾಗಿ ರೈತರುಗಳಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರತಿ ಗ್ರಾಮಗಳಲ್ಲೂ ಹೆಚ್ಚು ಸ್ಥಾಪಿಸುವುದರ ಮೂಲಕ ರೈತರ ಕುಟುಂಬಗಳಿಗೆ ಬೆನ್ನೆಲುಬಾಗಿ ನಿಂತು ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿವೇತನ, ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿ ನಿಲಯ, ಹಾಲು ಸಂಸ್ಕರಣ ಘಟಕಗಳು, ಕಾರ್ಯದರ್ಶಿಗಳಿಗೆ ಅಧ್ಯಯನ ಪ್ರವಾಸ, ರೈತರುಗಳಿಗೆ ಉಪಕರಣಗಳು ಒದಗಿಸಿ ಸಾಕಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ. ಇವರು ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ, ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಹೈನುಗಾರಿಕೆಗೆ ಹೆಚ್ಚು ಒತ್ತು ನೀಡುವ ಭರವಸೆ ನಮಗಿದೆ ಎಂದರು.

ಮೈಮುಲ್ ಅಧ್ಯಕ್ಷ ಈರೇಗೌಡ ಮಾತನಾಡಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲ್ಲೂಕಿನಲ್ಲಿ 184 ಹಾಲು ಉತ್ಪಾದಕರ ಸಹಕಾರ ಸಂಘಗಳು ರಚಿಸಲಾಗಿದ್ದು 33 ಬಿಎಂಸಿ ಕೇಂದ್ರಗಳು ಮತ್ತು 1 ಶೀಥಲೀಕರಣ ಘಟಕ ಇದ್ದು ದಿನವೊಂದಕ್ಕೆ 1,25,000 ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸ್ತ್ರೀ ಸಂಘಗಳಿಗೆ ರಾಸು ಖರೀದಿಸಲು ಬಡ್ಡಿ ರಹಿತ ಸಾಲ ಕೊಡಿಸಲಾಗುತ್ತಿದ್ದು, ಸಂಘದ ಸದಸ್ಯರಿಗೆ ಯಶಸ್ವಿನಿ ಯೋಜನೆ ಇದ್ದು ತಪ್ಪದೇ ನೋಂದಾಯಿಸಿಕೊಳ್ಳಲು ತಿಳಿಸಿದರು.

ಮೈಮುಲ್ ನಿರ್ದೇಶಕರಾದ ದಾಕ್ಷಾಯಿಣಿ, ಬೂದುನೂರು ಬಸವರಾಜಪ್ಪ, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಅಧ್ಯಕ್ಷರಾದ ವಿಮಲ, ಕಾರ್ಯದರ್ಶಿ ಲತಾ, ಸಂಘದ ನಿರ್ದೇಶಕರು ಹಾಜರಿದ್ದರು.

ಬಾಳು ಬೆಳಗಿದ ಗುರುಗಳಿಗೆ ಹಳೇ ವಿದ್ಯಾರ್ಥಿಗಳಿಂದ ಗುರುವಂದನೆ



ಸರಗೂರು ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಸರಗೂರು, ಜ.18– ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 1988–89ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಓದಿದ ವಿದ್ಯಾರ್ಥಿಗಳಿಂದ 35 ವರ್ಷಗಳ ನಂತರ ಗುರುವಂದನೆ ಹಾಗೂ ಸ್ನೇಹ ಸಂಗಮ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ಭಾನುವಾರ ಹಳೇ ವಿದ್ಯಾರ್ಥಿಗಳ ಸಮೂಹದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷವಾಗಿ ಗುರುಗಳಿಗೆ ಪುಷ್ಪ ನಮನ ಸಲ್ಲಿಸಿ, ವೇದಿಕೆವರೆಗೂ ಭವ್ಯ ಸ್ವಾಗತ ನೀಡುವುದರ ಮೂಲಕ ವಿದ್ಯೆ ಕಲಿಸಿದ ಗುರುಗಳಿಗೆ ವಿದ್ಯಾರ್ಥಿಗಳು ಗೌರವ ಸಲ್ಲಿಸಿ ಬರಮಾಡಿಕೊಂಡರು. ನಂತರ ವಂದಿಸಿದರು. ಇದಲ್ಲದೆ ತಾವುಗಳು ಓದಿದ ಶಾಲೆಯ ದಿನಗಳನ್ನು ನೆನಪಿಸಿಕೊಂಡು ತಮ್ಮ ಉನ್ನತ ಶಿಕ್ಷಣ, ನೌಕರಿ ಪಡೆದ ಸಂಗತಿಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಬಿಡುಗಲು ಪಡುವಲು ವಿರಕ್ತಮಠದ ಮಹದೇವಸ್ವಾಮೀಜಿ ಮಾತನಾಡಿ, ಪಾಠ ಹೇಳಿ, ಜ್ಞಾನಾರ್ಜನೆ ಮಾಡಿಸಿ, ಬದುಕಿಗೆ ಬೆಳಕಾದ ಪ್ರಾಥಮಿಕ, ಪ್ರೌಢಶಾಲಾ, ಪಿಯು ಶಿಕ್ಷಕರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಗುರುಗಳ ಸೇವೆಯನ್ನು ಸ್ಮರಿಸುವುದು ಮತ್ತು ಅವರಿಗೆ ಪ್ರತ್ಯಕ್ಷವಾಗಿ ಧನ್ಯತೆ ಸಮರ್ಪಣೆ ಮಾಡುವುದು ಸಾರ್ಥಕ ಕಾರ್ಯ. ಗುರುಗಳು ಕಲಿಸಿಕೊಟ್ಟ ದಾರಿಯಲ್ಲಿ ನಡೆದು ಜೀವನದಲ್ಲಿ ಸಾಧನೆ ಮಾಡಿದಾಗ ಮಾತ್ರ ಕಲಿಸಿದ ವಿದ್ಯೆ ಸಾರ್ಥಕವಾಗಲಿದೆ ಎಂದು ಹೇಳಿದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು 35 ವರ್ಷಗಳ ನಂತರ ಒಂದೆಡೆ ಸೇರಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಸಂತಸ ತಂದಿದೆ. ಪ್ರತಿಯೊಬ್ಬರೂ ಗುರು ಋಣ, ಪಿತೃ ಋಣವನ್ನು ಸಾಕಷ್ಟು ತೀರಿಸುವ ಕಾರ್ಯ ಮಾಡಬೇಕು. ಗುರುಗಳಿಂದ ಪಾಠ ಕಲಿತ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿರುವುದು ಗುರುಗಳಿಗೆ ಅದಕ್ಕಿಂತ ಖುಷಿ ಮತ್ತೊಂದಿಲ್ಲ ಎಂದು ಹೇಳಿದರು.

ಗುರುವಂದನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಮೂಹ ಕುರಿತು ಡಾ. ಸೋಮಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಗೌರವ ಸಮರ್ಪಣೆ: ಪ್ರಾಥಮಿಕ, ಪ್ರೌಢಶಾಲಾ, ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಕಲಿಸಿದ 23 ಶಿಕ್ಷಕರು, ಉಪನ್ಯಾಸಕರನ್ನು ಅಭಿನಂದಿಸಲಾಯಿತು. ನೆನಪಿನ ಕಾಣಿಕೆ ನೀಡಲಾಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಗುರುಗಳು, ಅಂದು ಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ನಡೆಸಲಾದ ಸಂಭಾಷಣೆ, ಪಾಠ ಕೇಳದ ವಿದ್ಯಾರ್ಥಿಗಳಿಗೆ ಬೈದುದನ್ನು ತಮ್ಮದೇ ಭಾಷೆಯಲ್ಲಿ ಹಂಚಿಕೊಂಡರು. 35 ವರ್ಷಗಳ ನಂತರ ಮಿಲನಗೊಂಡ ಸಹಪಾಠಿಗಳು ಹಳೆಯ ದಿನಗಳನ್ನು ಮೆಲುಕು ಹಾಕಿ ಸಂಭ್ರಮಿಸಿದ್ದು, ವಿಶೇಷವಾಗಿತ್ತು.

ಹಳೆದ ವಿದ್ಯಾರ್ಥಿಗಳಾದ ಜಿಪಂ ಮಾಜಿ ಸದಸ್ಯ ಪಿ.ರವಿ, ಎಂ.ಸಿ.ಬಾಬು, ಡಾ.ಸೋಮಣ್ಣ, ಡಾ.ಟಿ.ರವಿಕುಮಾರ್, ಕೃಷ್ಣಕುಮಾರ್, ಇದಾಯತ್, ರಮೇಶ್, ಗೋವಿಂದರಾಜು, ಎಸ್.ಆರ್. ಜಗದೀಶ್, ರೇಖಾ, ರೇಣುಕಾ, ಪುಷ್ಪಾಂಜಲಿ, ಕೋಟೆ ಪರಶಿವಮೂರ್ತಿ, ಗಿರೀಶ್, ಚಂದ್ರಕುಮಾರ್, ಎಇಇ ವಸಂತಕುಮಾರ್, ಡಿವೈಎಸ್ಪಿ ರಾಜಣ್ಣ, ಬಿಇಓ ಮಹದೇವ್, ಮಹದೇವಶೆಟ್ಟಿ, ಎಸ್.ಎ.ನಾಗೇಂದ್ರ, ಸಣ್ಣಕೂಸು, ಎಸ್.ವಿ.ಮಂಜುನಾಥ್ ಜೈನ್, ಸನ್ಮತಿಜೈನ್, ಮಹಾವೀರಜೈನ್, ರಾಘವೇಂದ್ರ, ಕಾಳಣ್ಣ ಕುಮಾರ್, ಗೌರಿಶ್, ಪ್ರಸನ್ನ, ಕುಮಾರ್, ಪ್ರಕಾಶ್, ಗೋಪಾಲಯ್ಯ, ಅಶೋಕ, ಸತೀಶ್, ಸೇರಿದಂತೆ ವಿದ್ಯಾರ್ಥಿಗಳ ಸಮೂಹ ಸೇರಿದಂತೆ ಕುಟುಂಬವರ್ಗದವರು ಇನ್ನಿತರರು ಹಾಜರಿದ್ದರು.

ದ್ವಾದಶ ಗರುಡೋತ್ಸವ ಧಾರ್ಮಿಕ ಸಮಾರಂಭ

ರಾಮಾನುಜರ ತತ್ವ ನೆಲೆ ಇರುವಲ್ಲಿ ಸಮಾನತೆ, ಸಹೋದರತ್ವ ನೆಲೆಸುತ್ತದೆ

ಮೇಲುಕೋಟೆ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಅಭಿಮತ



ಪಂಚ ಗರುಡೋತ್ಸವದ ಮೆರವಣಿಗೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಸುದರ್ಶನ ನರಸಿಂಹ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಭಾಷ್ಯಂ ಸ್ವಾಮೀಜಿ, ಮೇಲುಕೋಟೆಯ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಹೈದರಬಾದ್ ಶಂಷಾಬಾದ್‌ನ ಚಿನ್ನ ಜೀಯರ್ ಸ್ವಾಮಿ ಆಶ್ರಮದ ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನ ಜೀಯರ್ ಸ್ವಾಮೀಜಿ ಹಾಗೂ ವಿಪ್ರ ಮುಖಂಡರಿದ್ದರು.

ಮೈಸೂರು, ಜ.18(ಎಸ್‌ಪಿಎನ್)–ರಾಮಾನುಜರ ತತ್ವಾದರ್ಶಗಳು ಎಲ್ಲೆಲ್ಲಿ ನೆಲೆಸಿರುವುದೋ ಅಲ್ಲೆಲ್ಲಾ ಸಮಾನತೆ, ಸಹೋದರತ್ವ ನೆಲೆಸುತ್ತದೆ ಎಂದು ಮೇಲುಕೋಟೆಯ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಅಭಿಮತ ವ್ಯಕ್ತಪಡಿಸಿದರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ಕಾಳಿದಾಸ ರಸ್ತೆಯ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯದ ಪಂಚ ಗರುಡೋತ್ಸವ ಸೇವಾ ಸಮಿತಿ, ರಾಮಾನುಜ ವೇದಿಕೆ ಗರುಡ ಸಭಾ ಸಹಯೋಗದೊಂದಿಗೆ ತೃತೀಯ ಬಾರಿಗೆ ಆಯೋಜಿಸಿದ್ದ ದ್ವಾದಶ(12) ಗರುಡೋತ್ಸವ ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು, ದೈವಿಕ ಪರಂಪರೆಯನ್ನು ಆಚರಣೆಯಾಗಿ ರೂಪಿಸುವ ಕ್ರಿಯೆಯೇ ಗರುಡೋತ್ಸವ ಎಂದರು.

ದ್ವಾದಶ ಗರುಡೋತ್ಸವ ವೈಷ್ಣವ ಪರಂಪರೆ ಪ್ರತಿಬಿಂಬಿಸುತ್ತದೆ. ಶ್ರೀರಂಗಂ, ತಿರುಪತಿ, ಕಾಂಚಿಪುರಂ, ಮೇಲುಕೋಟೆ ದಿವ್ಯ ಕ್ಷೇತ್ರಗಳ ಗರುಡೋತ್ಸವದ ಪರಂಪರೆಯನ್ನು ಒಂದೇ ವೇದಿಕೆಯಲ್ಲಿ ಪ್ರತಿಷ್ಠಾಪಿಸಲಾಗಿರುವ ಧಾರ್ಮಿಕ ಉತ್ಸವ ಇದಾಗಿದೆ. ರಾಮಾನುಜರ ತತ್ವ, ಆದರ್ಶ ಸರ್ವಕಾಲಿಕ. ಮುಂಬರುವ 2027ರ ಫೆ.6ರಂದು ಮೈಸೂರಿನ ಅರಮನೆ ಮುಂಭಾಗ ಹದಿನೆಂಟು ಗರುಡೋತ್ಸವ ಆಚರಿಸಲಾಗುವುದು. ಗರುಡ ಕೇವಲ ಭಗವಂತನ ವಾಹನ ಮಾತ್ರವಲ್ಲ. ಅದೊಂದು ಭಗವಂತನ ಸೇವೆಯ ಸಂಕೇತ ಎಂದರು.

ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, ಉನ್ನತ ಭಕ್ತಿಯಿಂದ ದೇವರೆಡೆಗೆ ಕರೆದುಕೊಂಡು ಹೋಗುವ ಉತ್ಸವ ಇದಾಗಿದೆ. ಗರುಡೋತ್ಸವ ಭಕ್ತಿಯಡೆಗೆ ದಾರಿಯಾಗಿದೆ. ಹರಿಭಕ್ತಿ ಇಲ್ಲದಿದ್ದಲ್ಲಿ ಏನಿದ್ದರೂ ಶೂನ್ಯ. ಅಂತೆಯೇ ಹರಿಭಕ್ತಿ ಉಂಟು ಮಾಡುವ ಮಹೋತ್ಸವ ನಡೆಯುತ್ತಿರುವುದು ಪುಣ್ಯದ ಕೆಲಸ ಎಂದರು.

ಹೈದರಬಾದ್ ಶಂಷಾಬಾದ್‌ನ ಚಿನ್ನ ಜೀಯರ್ ಸ್ವಾಮಿ ಆಶ್ರಮದ ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನ ಜೀಯರ್ ಸ್ವಾಮೀಜಿ ಮಾತನಾಡಿ, ದೇವರ ಸ್ಮರಣೆಯಿಂದ ಭೂಲೋಕವನ್ನು ವೈಕುಂಠವಾಗಿಸಬಹುದು. ಗರುಡ ಅಂದರೆ ವೇದ. ಗರುಡೋತ್ಸವದಲ್ಲಿನ ದಿವ್ಯ ನಾದ, ವೇದಮಂತ್ರಗಳ ಘೋಷ, ಇಂತಹ ಉತ್ಸವಗಳು ಸರ್ವರಲ್ಲಿಯೂ ಜಾತ್ಯತೀತತೆ ಮೂಡಿಸಿ, ಸೌಹಾರ್ದತೆ ಬೆಳೆಸುತ್ತದೆ. ಧರ್ಮದ ಉಳಿವಿಗೆ ಉತ್ಸವ ಅಗತ್ಯವಿದೆ ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಪ್ರಾಸ್ತಾವಿಕವಾಗಿ ಮಾತನಾಡಿ, ಗುರುಗಳ ಆದೇಶ ಹಾಗೂ ಮಾರ್ಗದರ್ಶನದಂತೆ ಗರಡೋತ್ಸವ ಆರಂಭವಾಗಿದೆ. 2024ರಲ್ಲಿ ಪಂಚ ಗರುಡೋತ್ಸವ, 2025ರಲ್ಲಿ ಷಷ್ಠಿ ಗರುಡೋತ್ಸವ ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡಲಾಗಿದೆ. ಇದೀಗ 2026ರಲ್ಲಿ ದ್ವಾದಶ ಉತ್ಸವ ಜರುಗಿದೆ ಎಂದರು.

ಈ ವೇಳೆ ಸುದರ್ಶನ ನರಸಿಂಹ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಭಾಷ್ಯಂ ಸ್ವಾಮೀಜಿ, ಪ್ರಮತಿ ವಿದ್ಯಾ ಸಂಸ್ಥೆ ಅಧ್ಯಕ್ಷ ಎಚ್.ವಿ.ರಾಜೀವ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯರಾದ ಭಾಗ್ಯ ಮಾದೇಶ್, ನಮ್ರತಾ ಸುರೇಶ್, ಪಂಚಗರುಡೋತ್ಸವ ಸೇವಾ ಸಮಿತಿ ಅಧ್ಯಕ್ಷ ಕೆ.ಆರ್.ಲಕ್ಷ್ಮೀಶ್, ಅರ್ಚಕರಾದ ಕಶ್ಯಪ್, ಮುರಳಿ, ಆನಂದ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಆರ್.ಯೋಗಾನರಸಿಂಹನ್, ಎಸ್.ಸುದರ್ಶನ್, ಪಿ.ರಾಮಾನುಜಂ, ಮಣಿವಣ್ಣನ್, ಶ್ರೀರಂಗರಾಜನ್ ಉತ್ತಮನಂಬಿ, ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್, ಪದ್ಮಶ್ರೀ, ಜಿ.ಕೆ.ಕಮಲ, ಎಂ.ಆರ್.ನಾಗಮಣಿ, ಜಾನಕಿ ಕೃಷ್ಣಮೂರ್ತಿ, ವೀರರಾಘವನ್, ರಾಮಪ್ರಿಯನ್, ವೈಯ್ಯಾಕರಣಿ ರಾಮಾನುಜಂ, ರಂಗರಾಜು, ಶ್ರೀನಿಧಿ ಶಾಂತಾರಾಂ, ಎಂ.ಆನಂದ್, ಜೆ.ಕೃಷ್ಣಮೂರ್ತಿ ಇದ್ದರು. ಇದೇ ವೇಳೆ ಶಾಸಕ ಕೆ.ಹರೀಶಗೌಡರು ಪಂಚ ಗರುಡೋತ್ಸವದಲ್ಲಿ ಭಾಗವಹಿಸಿ ಯತಿಗಳ ಆಶೀರ್ವಾದ ಪಡೆದರು.

ವಿಶ್ವಾಸ್ ಇನ್ಸ್ಟಿಟ್ಯೂಟ್ ಆಫ್ ಶ್ರೀ ವಿಷ್ಣು ಸಹಸ್ರನಾಮಂ ತಂಡದಿಂದ ವಿಷ್ಣು ಸಹಸ್ರನಾಮ ಪಾರಾಯಣ, ವಿದ್ವಾನ್ ಎಂ.ಜಿ.ರಂಗನಾಥ್ ಅವರಿಂದ ಭಕ್ತಿ ಗೀತೆಗಳು, ವಿದುಷಿ ರಾಜ್ಯಶ್ರೀ ಜ್ಯೋಷ್ಯರ್ ಮತ್ತು ವಿದುಷಿ ಐಶ್ವರ್ಯ ಮಣಿಕರ್ಣಿಕೆ ಅವರಿಂದ ಯುಗಳ ವೀಣಾ ವಾದನ, ಸರಸ್ವತಿಪುರಂ ಕಲಾಂದಿಕ ಅಕಾಡೆಮಿ ಆಫ್ ಆರ್ಟ್ಸ್ ವಿದ್ಯಾರ್ಥಿಗಳಿಂದ ಭರತನಾಟ್ಯ, ಮೈಸೂರಿನ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಮತ್ತು ಪುಸ್ತಕಂ ದೇವಸ್ಥಾನದ ಗೋಷ್ಠಿಯವರಿಂದ ವಿಶೇಷ ನೃತ್ಯರೂಪಕ, ಬಳಿಕ ಜಯಲಕ್ಷ್ಮೀಪುರಂ ಪ್ರಮುಖ ಬೀದಿಗಳಲ್ಲಿ ಪಂಚಗರುಡೋತ್ಸವ ಮೆರವಣಿಗೆ ನಡೆಯಿತು.

ಮೈಸೂರಿನ ಜಯಲಕ್ಷ್ಮೀಪುರಂ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಹಳೇ ಬಂಡಿಕೇರಿಯ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ, ತಿಲಕ್‌ನಗರದ ಶ್ರೀನಿವಾಸಸ್ವಾಮಿ ದೇವಸ್ಥಾನ, ಒಂಟಿಕೊಪ್ಪಲಿನ ಶ್ರೀ ಆಂಡಾಳ್ ಮಂದಿರ, ಮೇಟಗಳ್ಳಿಯ ಶ್ರೀ ಚಲುವನಾರಾಯಣಸ್ವಾಮಿ ದೇವಸ್ಥಾನ, ಎನ್.ಆರ್.ಮೊಹಲ್ಲಾದ ಶ್ರೀ ಪದ್ಮಾವತಿ ಸಮೇತ ಶ್ರೀನಿವಾಸ ಸ್ವಾಮಿ ದೇವಸ್ಥಾನ, ಕಲ್ಯಾಣ ಗಿರಿಯ ಶ್ರೀ ಕಲ್ಯಾಣ ವೆಂಕಟೇಶ ಸ್ವಾಮಿ ದೇವಸ್ಥಾನ ಹಾಗೂ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಲ್ಲಳ್ಳಿ ಭೂದೇವಿ ಸಮೇತ ಲಕ್ಷ್ಮೀ ವರಾಹ ಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಶ್ರೀ ಲಕ್ಷ್ಮೀನರಸಿಂಹ ಕ್ಷೇತ್ರ ಇಲವಾಲದ ಶ್ರೀ ಲಕ್ಷ್ಮೀವರದರಾಜಸ್ವಾಮಿ ದೇವಸ್ಥಾನ, ಚಾಮರಾಜನಗರದ ಉಮ್ಮತ್ತೂರಿನ ಶ್ರೀರಂಗನಾಥಸ್ವಾಮಿ ದೇವಸ್ಥಾನಗಳು ದ್ವಾದಶ(12) ಗರುಡೋತ್ಸವ ಸೇವೆಯಲ್ಲಿ ಭಾಗವಹಿಸಿದ್ದವು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ ದರೋಡೆ ಪ್ರಕರಣ; ಬಿಹಾರದಲ್ಲಿ ಇಬ್ಬರು ಖದೀಮರ ಸೆರೆ



ಮೈಸೂರು, ಜ.18– ಹುಣಸೂರು ಚಿನ್ನಾಭರಣ ಅಂಗಡಿ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅಂತಾ ರಾಜ್ಯ ಖದೀಮರನ್ನು ಬಿಹಾರದಲ್ಲಿ ಬಂಧಿಸಿರುವುದಾಗಿ ತಿಳಿದುಬಂದಿದೆ.

ಹುಣಸೂರು ಪೊಲೀಸರು ಹಾಗೂ ಬಿಹಾರ ಎಸ್‌ಟಿಎಫ್‌ನ ವಿಶೇಷ ತಂಡ ಜಂಟಿಯಾಗಿ ಬಿಹಾರದ ದರ್ಭಾಂಗ ಮತ್ತು ಭಾಗಲ್ಪುರದ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ವೇಳೆ ಖರಾರಿ ನಿವಾಸಿ ರಿಷಿಕೇಶ್ ಸಿಂಗ್ ಅಲಿಯಾಸ್ ಛೋಟು ಸಿಂಗ್ ಮತ್ತು ಪಕ್ರಾ ನಿವಾಸಿ ಪಂಕಜ್ ಕುಮಾರ್‌ನನ್ನು ಬಂಧಿಸಿದ್ದಾರೆ ಎಂದು ಎಸ್‌ಟಿಎಫ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆಂದು ವರದಿಯಾಗಿದೆ.

ಹುಣಸೂರು ನಗರದ ಬೈಪಾಸ್ ರಸ್ತೆಯಲ್ಲಿರುವ ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಅಂಗಡಿಗೆ ಡಿ.28ರ ಮಧ್ಯಾಹ್ನ ಐವರು ದರೋಡೆಕೋರರು ನುಗ್ಗಿ, ಸಿಬ್ಬಂದಿಯನ್ನು ರಿವಲ್ವಾರ್‌ನಿಂದ ಬೆದರಿಸಿ ಸುಮಾರು 10 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಹುಣಸೂರು ಪೊಲೀಸರು, ಐದು ತಂಡಗಳಲ್ಲಿ ಆರೋಪಿಗಳಿಗೆ ಶೋಧ ನಡೆಸುತ್ತಿದ್ದರು.

ಸದ್ಯ ಬಿಹಾರದ ಎಸ್‌ಟಿಎಫ್ ವಿಶೇಷ ತಂಡದ ಸಹಕಾರದಿಂದ ಇಬ್ಬರು ಖದೀಮರನ್ನು ಬಂಧಿಸಿ, ಚಿನ್ನದ ಸರ, 1 ಲಕ್ಷ ನಗದು, ದ್ವಿಚಕ್ರ ವಾಹನ, ಆಭರಣ ಪೆಟ್ಟಿಗೆ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಕೊಲೆಯತ್ನ, ದರೋಡೆ, ಡಕಾಯಿತಿ ಮತ್ತು ಶಸ್ತ್ರಾಸ್ತ್ರ ಕಾಯ್ದೆ ಆರೋಪದಡಿ ಪಂಕಜ್ ಕುಮಾರ್ ವಿರುದ್ಧ ಕರ್ನಾಟಕ, ಬಿಹಾರ, ಜಾರ್ಖಂಡ್, ರಾಜಸ್ಥಾನದಲ್ಲಿ 16ಕ್ಕೂ ಹೆಚ್ಚು ಪ್ರಕರಣಗಳು ಹಾಗೂ ರಿಷಿಕೇಶ್ ಸಿಂಗ್ ವಿರುದ್ಧ ಬಿಹಾರ ಹಾಗೂ ಕರ್ನಾಟಕದಲ್ಲಿ ನಾಲ್ಕಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ತಿಳಿದುಬಂದಿದೆ.

ರಾಜೇಂದ್ರನಗರದಲ್ಲಿ ಶೋಭಾಯಾತ್ರೆ



ಮೈಸೂರಿನ ರಾಜೇಂದ್ರನಗರದಲ್ಲಿ ಭಾನುವಾರ ಶೋಭಾಯಾತ್ರೆ ನಡೆಸಲಾಯಿತು

ಮೈಸೂರು, ಜ.18(ಎಂಕೆ)– ಮೈಸೂರಿನ ರಾಜೇಂದ್ರನಗರದಲ್ಲಿ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಭಾನುವಾರ ಶೋಭಾಯಾತ್ರೆ ನಡೆಸಲಾಯಿತು.

ಇಲ್ಲಿನ 1008 ಗಣಪತಿ ವೃತ್ತದಿಂದ ಆರಂಭವಾದ ಶೋಭಾಯಾತ್ರೆ ಕೆಪಿಟಿಸಿಎಲ್ ಸಮುದಾಯ ಭವನದವರೆಗೆ ನಡೆಯಿತು. ಯಾತ್ರೆಯಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣ, ಸ್ವಾಮಿ ವಿವೇಕಾನಂದ, ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ.ಬಿ.ಆರ್.ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್ ಸೇರಿದಂತೆ ಇನ್ನಿತರೆ ಮಹನೀಯರ ವೇಷಭೂಷಣ ತೊಟ್ಟ ಚಿಣ್ಣರು ಪ್ರಮುಖ ಆಕರ್ಷಣೆಯಾಗಿದ್ದರು.

ದಿಕ್ಸೂಚಿ ಭಾಷಣ ಮಾಡಿದ ಆರ್‌ಎಸ್‌ಎಸ್ ಸಹ ಸಂಯೋಜಕ ರಾಜೇಶ್, ಹಿಂದೂ ಸಮಾಜದ ಉಳಿವಿನ ದೃಷ್ಟಿಯಲ್ಲಿ ಸಾಮರಸ್ಯ, ಸಹಬಾಳ್ವೆ ಮುಖ್ಯವಾಗಿದ್ದು, ಹಿಂದೂ ಸಮಾಜವೇ ಎಲ್ಲರೂ ಒಂದೆಂಬುದನ್ನು ತಿಳಿಸಿಕೊಟ್ಟಿದೆ. ಸಂಕ್ರಾಂತಿ ಇನ್ನಿತರೆ ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಸಾಮರಸ್ಯ ಮೂಡಿಸಲಿವೆ ಎಂದು ತಿಳಿಸಿದರು.

ಶ್ರೀ ಮಾತಾ ಅಮೃತಾ ನಂದಮಯಿ ಮಠ ಬೆಂಗಳೂರು ಶಾಖೆ ಅಧ್ಯಕ್ಷ ಶ್ರೀ ಆತ್ಮನಿರತಾಮೃತ ಚೈತನ್ಯ ಸ್ವಾಮೀಜಿ ಶೋಭಾಯಾತ್ರೆಗೆ ಚಾಲನೆ ನೀಡಿದರು. ನಿವೃತ್ತ ಸೈನಿಕ ಬಸಪ್ಪ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಸಮಿತಿ ಕಾರ್ಯದರ್ಶಿ ಸತೀಶ್ ಜೋಗಿ, ಸದಸ್ಯರಾದ ರೋಹಿತ್, ಸ್ಮಾರ್ಟ್ ಮಂಜುನಾಥ್, ಸು.ಮುರುಳಿ, ಪ್ರೇಮ್, ಪ್ರಶಾಂತ್, ಎಸ್.ಎಲ್.ಆನಂದ ಮತ್ತಿತರರಿದ್ದರು.

ಭಾರತದ ಹಬ್ಬಗಳು ಸಂಭ್ರಮ ಸಂಸ್ಕೃತಿಯ ಸೊಬಗು

ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಮತ



ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿಯ ಅಧಿವೇಶನದಲ್ಲಿ ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ದೀಪ ಬೆಳಗಿದರು.

ಮೈಸೂರು, ಜ.18– ಭಾರತ ಹಬ್ಬಗಳ ತವರು. ನಮ್ಮ ಹಬ್ಬಗಳಲ್ಲಿ ಸಂಭ್ರಮದ ಜೊತೆಗೆ ಸಂಸ್ಕೃತಿಯ ಸೊಬಗು ಮನೆ ಮಾಡಿದೆ. ಸಂಸ್ಕೃತಿ ಸಂಪನ್ನತೆಗಳು ಭಾರತೀಯರ ರಕ್ತದಲ್ಲಿ ಹಾಸು ಹೊಕ್ಕಾಗಿವೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಇಂದು ಸಿದ್ಧಾರ್ಥನಗರದ ಡಾ.ರಾಘವೇಂದ್ರ ಅವರ 'ಬೃಂದಾವನ ನಿವಾಸ'ದ ಸಭಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಅಧಿವೇಶನದಲ್ಲಿ ಅವರು, ಸಂಕ್ರಾಂತಿ ಕುರಿತು ಉಪನ್ಯಾಸ ನೀಡಿದರು.

ಸಮಗ್ರ ಕ್ರಾಂತಿ ಎಂಬುದೇ ಸಂಕ್ರಾಂತಿ. ಬದಲಾವಣೆ ಕ್ರಮೇಣ ಆಗುವಂತಹ ಪ್ರಕ್ರಿಯೆ. ಕೊಡುವುದರಿಂದ ಆನಂದವೋ, ತೆಗೆದುಕೊಳ್ಳುವುದರಿಂದ ಆನಂದವೋ ಎಂದು ಮಗುವನ್ನು ಕೇಳಿದರೆ, ಆ ಮಗು ಕೊಡುವುದರಿಂದ ಎಂದು ಪ್ರತಿಕ್ರಿಯಿಸುವ ಸಂಸ್ಕೃತಿ ಕಲಿತಿರಬೇಕು. ಚಿಕ್ಕ ವಯಸ್ಸಿನಿಂದಲೇ ಮಕ್ಕಳ ಮನಸ್ಸಿನಲ್ಲಿ ಉತ್ತಮ ಸಂಸ್ಕೃತಿಯನ್ನು ಬಿತ್ತಿ ಪೋಷಿಸಬೇಕು ಎಂದು ಆಶಿಸಿದರು.

ಇದೇ ವೇಳೆ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ ಅವರ 'ಚರಿತ ಚಂಪಕ', 'ಸಾಹಿತ್ಯದ ಸ್ವತ್ವ', ಕೊ.ಲಾ.ನಾಗರಾಜು ಅವರ 'ಕೊಪ್ಪಲಿನ ಕತೆಗಳು' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಗೂಗಲ್ ಉಪನ್ಯಾಸ ಮಾಲಿಕೆಯ ಐವತ್ತು ಸಂಪನ್ಮೂಲ ವ್ಯಕ್ತಿಗಳನ್ನು ಅಭಿನಂದಿಸಲಾಯಿತು. ವಿವಿಧ ಕೂಟಗಳಿಂದ ಹಾಸ್ಯ ರಸಾಯನ ಹಾಗೂ ಮಕ್ಕಳ ಕೂಟದ ವತಿಯಿಂದ ಛದ್ಮವೇಷ ಸ್ಪರ್ಧೆ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರಾಂತ ಸಂಪರ್ಕ ಪ್ರಮುಖ್ ಡಾ.ವಿ.ರಂಗನಾಥ್, ರಾಜ್ಯ ಉಪಾಧ್ಯಕ್ಷ ಬೆಳಗೋಡು ರಮೇಶ್ ಭಟ್, ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ, ಮಹಾರಾಜ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲರಾದ ಡಾ.ಎಸ್.ಮುರಳಿ, ಡಾ.ರಾಘವೇಂದ್ರ ಶೆಟ್ಟಿ, ಜಿಲ್ಲಾ ಅಧ್ಯಕ್ಷ ಸುಬ್ರಹ್ಮಣ್ಯ, ಕಾರ್ಯದರ್ಶಿ ಸು.ಸುಬ್ರಹ್ಮಣ್ಯ, ಮಾಧ್ಯಮ ಪ್ರಮುಖ್ ಗಾಯತ್ರಿ ಸುಂದರೇಶ್ ಮತ್ತಿತರರು ಉಪಸ್ಥಿತರಿದ್ದರು.

ಭದ್ರಾ ನಾಲೆಯಲ್ಲಿ ಒಂದೇ ಕುಟುಂಬದ ನಾಲ್ವರು ನೀರುಪಾಲು

ಶಿವಮೊಗ್ಗ, ಜ.18– ಬಟ್ಟೆ ತೊಳೆಯಲು ಹೋಗಿ ಒಂದೇ ಕುಟುಂಬದ ನಾಲ್ವರು ನೀರುಪಾಲಾಗಿರುವ ಘಟನೆ ಶಿವಮೊಗ್ಗ ಜಿಲ್ಲೆಯ ಅರಬಿಳಚಿ ಕ್ಯಾಂಪ್ ಬಳಿ ನಡೆದಿದೆ.

ಬಟ್ಟೆ ತೊಳೆಯಲು ಭದ್ರಾ ನಾಲೆಗೆ ಇಳಿದಿದ್ದಾಗ ಒಬ್ಬರು ಕಾಲು ಜಾರಿ ನಾಲೆಗೆ ಬಿದ್ದಿದ್ದರು. ಅವರನ್ನು ರಕ್ಷಿಸಲು ಇನ್ನೊಬ್ಬರು, ಮತ್ತೊಬ್ಬರು ನೀರಿಗೆ ಇಳಿದರು. ಹೀಗೆ ನಾಲ್ವರು ನೀರುಪಾಲಾಗಿದ್ದಾರೆ. ಮೃತರನ್ನು ನೀಲಾಬಾಯಿ, ಮಗ ರವಿಕುಮಾರ್, ಮಗಳು ಶ್ವೇತಾ ಹಾಗೂ ಅಳಿಯ ಪರಶುರಾಮ ಎಂದು ಗುರುತಿಸಲಾಗಿದೆ.

ಮಚ್ಚು, ಲಾಂಗ್ ಹಿಡಿದು ಗುಂಪುಗಳ ನಡುವೆ ಗಲಾಟೆ

ಮೈಸೂರು, ಜ.18(ವಿವಿಹೆಚ್)– ಕ್ರಿಕೆಟ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಗಲಾಟೆಯಾಗಿ ಹಾಡಹಗಲೇ ರಸ್ತೆಯಲ್ಲಿ ಲಾಂಗು, ಮಚ್ಚುಗಳು ಆರ್ಭಟಿಸಿ, ವ್ಯಕ್ತಿ ಮೇಲೆ ಹಲ್ಲೆ ನಡೆಸಿರುವ ಘಟನೆ ಉದಯಗಿರಿಯ ರಾಜೀವ್‌ನಗರದಲ್ಲಿಂದು (ಜ.18) ನಡೆದಿದೆ. ಹಿಂದೆಯೂ ಇದೇ ರೀತಿಯ ಘಟನೆಗಳು ನಡೆದಿದ್ದರೂ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದ ಕಾರಣ, ಈಗ ಪುಡಿರೌಡಿಗಳು ಅಟ್ಟಹಾಸ ಮೆರೆಯುತ್ತಿದ್ದಾರೆ.

ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಿದ್ದರೂ, ಮತ್ತೊಂದೆಡೆ ಪುಟ್ಟ ಮಕ್ಕಳು ಆಟವಾಡುತ್ತಿರುವುದನ್ನೂ ಲೆಕ್ಕಿಸದೇ ಪುಂಡರು ಗೂಂಡಾ ವರ್ತನೆ ಮೆರೆದಿದ್ದಾರೆ. ಮಹಿಳೆಯರ ಮುಂದೆಯೇ ಅವಾಚ್ಯ ಶಬ್ದಗಳ ಬಳಸಿ ನಿಂದಿಸುತ್ತಿರುವ ದೃಶ್ಯವೂ ಮೊಬೈಲ್‌ನಲ್ಲಿ ಸೆರೆಯಾಗಿದೆ. ವ್ಯಕ್ತಿಯೊಬ್ಬ ಕೈಯಲ್ಲಿ ಲಾಂಗ್ ಹಿಡಿದು ಬೈಕ್ ಮೇಲೆ ಕುಳಿತಿರುವವನ ಕಡೆಗೆ ನುಗ್ಗಿ ಬಂದು ಹಲ್ಲೆಗೆ ಯತ್ನಿಸುತ್ತಾನೆ. ಆಗ ಮತ್ತೊರ್ವ ಬಂದು ಅವನನ್ನು ತಡೆದು ವಾಪಸ್ ಕರೆದುಕೊಂಡು ಹೋಗುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಈ ವೇಳೆ ಗಾಯಗೊಂಡವನ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಪೊಲೀಸರ ಬಳಿ ಈ ಬಗ್ಗೆ ಮಾಹಿತಿ ಇದ್ದು, ಅವರು ಇದೊಂದು ಕ್ರಿಕೆಟ್ ವಿಚಾರಕ್ಕೆ ನಡೆದ ಗಲಾಟೆ ಅಷ್ಟೇ ಎಂದು ತಿಳಿಸಿದ್ದಾರೆ.

ಕುರುಬ ಸಮುದಾಯದ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ತರಬೇತಿ ಕೇಂದ್ರ ಸ್ಥಾಪನೆಗೆ ಚಿಂತನೆ

ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ಮಾಹಿತಿ



ಶಾಸಕ ಡಿ.ರವಿಶಂಕರ್ ಅವರು ಭಕ್ತ ಕನಕದಾಸರ ತತ್ವದರ್ಶನ ಕೃತಿ ಬಿಡುಗಡೆ ಮಾಡಿದರು.

ಮೈಸೂರು, ಜ.18(ವಿವಿಹೆಚ್)– ಕುರುಬ ಸಮುದಾಯದ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಜಿಲ್ಲಾ ಮಟ್ಟದಲ್ಲಿ ಐಎಎಸ್, ಕೆಎಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಕೇಂದ್ರವೊಂದನ್ನು ಸ್ಥಾಪನೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅಭಿಪ್ರಾಯಪಟ್ಟರು.

ಕೆಪಿಟಿಸಿಎಲ್ ಶ್ರೀ ಕನಕ ನೌಕರರ ಹಿತರಕ್ಷಣಾ ಸಮಿತಿ ವತಿಯಿಂದ ಮೈಸೂರಿನ ಸಿದ್ಧಾರ್ಥನಗರದ ಕನಕ ಸಮುದಾಯ ಭವನದಲ್ಲಿ ಭಾನುವಾರ ನಡೆದ ಸಂತ ಶ್ರೇಷ್ಠ ಕವಿ ಶ್ರೀ ಕನಕದಾಸರ ಜಯಂತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ನಗರದಲ್ಲಿ ಸಮಾಜದ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಅನುಕೂಲವಾಗುವಂತೆ ಈ ಕೇಂದ್ರ ಸ್ಥಾಪಿಸಲಾಗುತ್ತಿದ್ದು, ಆ ಮೂಲಕ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುತ್ತದೆ ಎಂದರು.

ಈಗಿನ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ನಮ್ಮ ಸಮಾಜವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗುವ ಪ್ರಜ್ಞಾವಂತ ಪ್ರಜೆಗಳಾಗಲಿ. ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಸಮುದಾಯವನ್ನು ಮೇಲೆತ್ತುವ ಕೆಲಸ ಆಗಬೇಕು. ಇದಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಾಧಕರ ಸಾಧನೆಗಳ ಗುರುತಿಸಿ ಪ್ರೋತ್ಸಾಹಿಸುವಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಆಯೋಜನೆಯಾಗಬೇಕು ಎಂದು ಸಲಹೆ ನೀಡಿದರು.

ಶ್ರೇಷ್ಠ ಕನಕರು ಕಟ್ಟಿದ ಸಮುದಾಯದ ಹೆಸರನ್ನು ಹೇಳಲು ಹಿಂಜರಿಯುವ ಕಾಲವೊಂದಿತ್ತು. ಆದರೆ ಈಗ ಸ್ವತಂತ್ರವಾಗಿ ಅವರ ಸ್ಮರಣಾರ್ಥ ಜಯಂತಿ ಆಚರಣೆಗೆ ಸಿಎಂ ಸಿದ್ದರಾಮಯ್ಯ ಅವರ ಪ್ರೇರಣೆ ಇದೆ. ಕುಲ ಕುಲ ಎಂದು ಹೊಡೆದಾಡುವಿರಿ, ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ ಎಂದು ಕನಕರು ಹೇಳಿರುವಂತೆ, ನಮ್ಮ ಸಮುದಾಯದ ಬಗ್ಗೆ ಹೆಮ್ಮೆಪಡುವ ಜೊತೆಗೆ ಇತರೆ ಸಮುದಾಯವನ್ನು ಒಟ್ಟಾಗಿ ಕೊಂಡೊಯ್ಯುವ ಕೆಲಸ ಮಾಡಬೇಕು. ಆಗ ಕನಕರ ಕನಸಿನ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಇನ್‌ಸೈಟ್ ಐಎಎಸ್ ತರಬೇತಿ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ.ಬಿ.ವಿನಯ್ ಕುಮಾರ್ ಮಾತನಾಡಿ, ಬಹಳ ವಿಭಿನ್ನ, ಸಮೃದ್ಧ ಸಂಸ್ಕೃತಿ ನಮ್ಮದಾಗಿದ್ದರೂ, ಎಲ್ಲೋ ಒಂದು ರೀತಿಯಲ್ಲಿ ಇದನ್ನು ಮರೆತು ಬದುಕುವ ಕೆಲಸ ಆಗುತ್ತಿದೆ. ನಮ್ಮ ಮೂಲ ಸಂಸ್ಕೃತಿ ಬಗ್ಗೆ ಅರಿವಿದ್ದಾಗ ಮಾತ್ರ ನಮ್ಮಲ್ಲಿ ಒಗ್ಗಟ್ಟು ಬರುತ್ತದೆ. ಇದಕ್ಕೆ ಯುವ ಮನಸ್ಸುಗಳು ಕೈಜೋಡಿಸಬೇಕು ಎಂದರು.

> ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳು, ನೆರೆಯ ಕೊಡಗು, ಮಂಡ್ಯ, ಹಾಸನ ಜಿಲ್ಲೆ ಸೇರಿದಂತೆ ಹಲವು ಭಾಗಗಳಿಂದ ದತ್ತಿ ನೀಡಿದ ಹಣದಿಂದ ನಾನು ಚುನಾವಣೆಯಲ್ಲಿ ಖರ್ಚು ಮಾಡಿ ಗೆದ್ದಿದ್ದೇನೆ. ನಿಮ್ಮೆಲ್ಲರ ಋಣ ನನ್ನ ಮೇಲಿದ್ದು, ಅದನ್ನು ತೀರಿಸುವ ನಿಟ್ಟಿನಲ್ಲಿ ಸಮುದಾಯದ ಕಟ್ಟಕಡೆಯ ವ್ಯಕ್ತಿಯ ಸೇವೆಗೂ ನನ್ನ ಜೀವನ ಮುಡುಪಾಗಿಟ್ಟಿದ್ದೇನೆ. ನಿಮ್ಮ ಜೊತೆ ನಿರಂತರ ಸಂಪರ್ಕದಲ್ಲಿರುತ್ತೇನೆ.
> -ಡಿ.ರವಿಶಂಕರ್, ಶಾಸಕ

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯ ತಲಾ 10 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಹೊಸದುರ್ಗದ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿಸ್ವಾಮಿ ದಿವ್ಯ ಸಾನಿಧ್ಯ ವಹಿಸಿದ್ದರು. ಸಂಘದ ಅಧ್ಯಕ್ಷ ಕೆ.ಗಿರೀಶ್, ಗೌರವಾಧ್ಯಕ್ಷ ಜೆ.ಶಿವಣ್ಣ, ಬೆಂ.ವಿ.ಕಂನ ಅಧೀಕ್ಷಕ ಅಭಿಯಂತರ ಸಿ.ಬಸವಣ್ಣ, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘದ ಅಧ್ಯಕ್ಷ ಎಂ.ರಮೇಶ್, ಕೈಗಾರಿಕಾ, ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಜಂಟಿ ನಿರ್ದೇಶಕ ಡಾ.ಪಿ.ಮಾಲೇಗೌಡ, ಮೈಸೂರು ವಿವಿ ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಡಾ.ಹೆಚ್.ಎಂ.ಲೀಲಾವತಿ, ಹೇಮಾ ಶೇಖರ್, ಕರ್ನಾಟಕ ಪ್ರದೇಶ ಕುರುಬ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಮಣ್ಯ, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ರಾಘವೇಂದ್ರ (ರಘು ಹುಯಿಲಾಳು), ಕೆ.ಬಿ.ಆರ್. ಸೆಂಟ್ರಿಂಗ್ ಮಾಲೀಕ ಕೆ.ಬಿ.ರವಿಕುಮಾರ್, ಕರ್ನಾಟಕ ಪ್ರದೇಶ ಕುರುಬ ಸಂಘದ ಉಪಾಧ್ಯಕ್ಷ ಬಿ.ಕೆ.ರಾಜೇಶ್, ಕನಕ ನೌಕರರ ಹಿತರಕ್ಷಣಾ ಸಮಿತಿ ಉಪಾಧ್ಯಕ್ಷ ಸಣ್ಣಸ್ವಾಮಿ, ಕಾರ್ಯದರ್ಶಿ ಕೆ.ಎಸ್.ಸಿದ್ದರಾಜು, ಖಜಾಂಚಿ ಟಿ.ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಎಸ್.ಬಿ.ಚಂದ್ರಶೇಖರ್, ಸಲಹೆಗಾರರಾದ ಎ.ಎಸ್.ಬಸವರಾಜು, ಪಿ.ಮಂಜು, ಕೆ.ನಾಗೇಂದ್ರ ಉಪಸ್ಥಿತರಿದ್ದರು.

ವಿರಾಟ್ ಕೊಹ್ಲಿ ಶತಕ ವ್ಯರ್ಥ; 2–1 ಅಂತರದಿಂದ ಸರಣಿ ಗೆದ್ದ ಕಿವೀಸ್

ಇಂಧೋರ್, ಜ.18(ವಿವಿಹೆಚ್)– ಇಲ್ಲಿನ ಹೊಲ್ಕರ್ ಕ್ರೀಡಾಂಗಣದಲ್ಲಿ ನಡೆದ ಭಾರತ ಹಾಗೂ ನ್ಯೂಜಿಲೆಂಡ್ ನಡುವಿನ ಮೂರನೇ ಏಕದಿನ ಪಂದ್ಯಗಳ ಸರಣಿಯ ಅಂತಿಮ ಪಂದ್ಯದಲ್ಲಿ ನ್ಯೂಜಿಲೆಂಡ್ 41 ರನ್‌ಗಳಿಂದ ಗೆದ್ದು ಸರಣಿಯನ್ನು 2–1 ಅಂತರದಿಂದ ವಶಪಡಿಸಿಕೊಂಡಿದೆ.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 337 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನಟ್ಟುವಲ್ಲಿ ವಿಫಲವಾದ ಭಾರತ 46 ಓವರ್‌ಗಳಿಗೆ ಆಲೌಟ್ ಆಗಿ 296 ರನ್ ಗಳಿಸಿ ಸರಣಿ ಸೋಲನುಭವಿಸಿತು.

ಬ್ಯಾಟಿಂಗ್‌ಗೆ ಇಳಿದ ಕಿವೀಸ್‌ನ ನಿಕೋಲ್ಸ್ ಡಕ್‌ಔಟ್ ಆದರೆ, ಡಿವಾನ್ ಕಾನ್ವೆ 5 ರನ್ ಗಳಿಸಿ ಪೆವಿಲಿಯನ್ ಸೇರಿದರು. ಬಳಿಕ ಬಂದ ವಿಲ್ ಯಂಗ್ 30 ರನ್ ಗಳಿಸಿ ಔಟಾದರು.

ನಾಲ್ಕನೇ ವಿಕೆಟ್‌ಗೆ ಜೊತೆಯಾದ ಡ್ಯಾರಿಲ್ ಮಿಚೆಲ್ ಹಾಗೂ ಗ್ಲೆನ್ ಫಿಲಿಪ್ಸ್ ಜೋಡಿ 219 ರನ್‌ಗಳ ಜತೆಯಾಟವಾಡಿ ತಂಡಕ್ಕೆ ಆಸರೆಯಾದರು. ಗ್ಲೆನ್ ಫಿಲಿಪ್ಸ್ 88 ಎಸೆತಗಳಲ್ಲಿ 106 ರನ್ ಬಾರಿಸಿದರೆ, ಡ್ಯಾರಿಲ್ ಮಿಚೆಲ್ 137 ರನ್ ಬಾರಿಸಿದರು. ಇನ್ನುಳಿದಂತೆ ಮಿಚೆಲ್ ಹೇ 2, ಜೇಕರಿ ಫೌಕ್ಸ್ 10, ಕ್ರಿಸ್ಟಿಯನ್ ಕ್ಲಾರ್ಕ್ 11, ಮಿಚೆಲ್ ಬ್ರೇಸ್‌ವೆಲ್ ಅಜೇಯ 22 ರನ್ ಹಾಗೂ ಯಾವುದೇ ರನ್ ಗಳಿಸದ ಜೇಮಿಸನ್ ಅಜೇಯರಾಗಿ ಉಳಿದರು.



ಟ್ರೋಫಿಯೊಂದಿಗೆ ನ್ಯೂಜಿಲೆಂಡ್ ತಂಡದ ಆಟಗಾರರ ಸಂಭ್ರಮ

ಭಾರತದ ಪರ ಅರ್ಷ್ ದೀಪ್ ಸಿಂಗ್ 3 ವಿಕೆಟ್, ಹರ್ಷಿತ್ ರಾಣಾ 3 ವಿಕೆಟ್, ಮೊಹಮ್ಮದ್ ಸಿರಾಜ್ ಹಾಗೂ ಕುಲ್‌ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ಸವಾಲಿನ ಗುರಿಯನ್ನು ಬೆನ್ನಟ್ಟಲು ಮುಂದಾದ ಭಾರತ 71 ರನ್‌ಗೆ ಪ್ರಮುಖ 4 ವಿಕೆಟ್ ಕಳೆದುಕೊಂಡು ಆರಂಭಿಕ ಹಿನ್ನಡೆ ಅನುಭವಿಸಿತು. ರೋಹಿತ್ ಶರ್ಮಾ 11 ರನ್ ಗಳಿಸಿದರೆ, ನಾಯಕ ಶುಬ್‌ಮನ್ ಗಿಲ್ 23 ರನ್, ಶ್ರೇಯಸ್ ಐಯ್ಯರ್ 3, ಕೆಎಲ್ ರಾಹುಲ್ 1 ರನ್ ಕಲೆಹಾಕಿ ಬೇಗನೆ ಪೆವಿಲಿಯನ್ ಸೇರಿಕೊಂಡರು.

ಬಳಿಕ ಬಂದ ನಿತಿಶ್ ಕುಮಾರ್ ರೆಡ್ಡಿ 53 ರನ್, ರವೀಂದ್ರ ಜಡೇಜಾ 12 ರನ್, ಹರ್ಷಿತ್ ರಾಣಾ 43 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 4 ಬೌಂಡರಿಗಳನ್ನೊಳಗೊಂಡಂತೆ 52 ರನ್ ಬಾರಿಸಿ ಔಟಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಸುಭದ್ರ ಇನ್ನಿಂಗ್ಸ್ ಆಡಿದ ಕೊಹ್ಲಿಯಿಂದಲೂ ಪಂದ್ಯ ಗೆಲ್ಲಿಸಿಕೊಡಲು ಸಾಧ್ಯವಾಗಲಿಲ್ಲ. ಕೊಹ್ಲಿ 108 ಎಸೆತಗಳಲ್ಲಿ 10 ಬೌಂಡರಿ ಹಾಗೂ 3 ಸಿಕ್ಸರ್ ಸೇರಿದಂತೆ 124 ರನ್ ಬಾರಿಸಿದರು. ಇನ್ನು ಮೊಹಮ್ಮದ್ ಸಿರಾಜ್ ಗೋಲ್ಡನ್ ಡಕ್‌ಔಟ್, ಕುಲ್‌ದೀಪ್ ಯಾದವ್ 5 ರನ್, ಅರ್ಷ್‌ದೀಪ್ ಸಿಂಗ್ ಅಜೇಯ 4 ರನ್ ಗಳಿಸಿದರು.

ನ್ಯೂಜಿಲೆಂಡ್ ಪರ ಜೇಕರಿ ಫೋಕ್ಸ್ ಹಾಗೂ ಕ್ರಿಸ್ಟಿಯನ್ ಕ್ಲಾರ್ಕ್ ತಲಾ 3 ವಿಕೆಟ್ ಪಡೆದರೆ, ಜೇಡನ್ ಲೆನ್ನಾಕ್ಸ್ 2 ವಿಕೆಟ್ ಹಾಗೂ ಕೈಲ್ ಜೇಮಿಸನ್ ಒಂದು ವಿಕೆಟ್ ಪಡೆದು ಮಿಂಚಿದರು.

ಕೊನೆಯ ಪಂದ್ಯದ ಶತಕ ಹಾಗೂ ಟೂರ್ನಿಯಲ್ಲಿ 2 ಶತಕ ದಾಖಲಿಸಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಡ್ಯಾರಿಲ್ ಮಿಚೆಲ್ ಪಂದ್ಯಶ್ರೇಷ್ಠ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಎರಡೂವರೆ ವರ್ಷದಲ್ಲಿ 3 ಸಾವಿರ ರೈತರ ಆತ್ಮಹತ್ಯೆ

ಸುತ್ತೂರು ಜಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಳವಳ



ನಂಜನಗೂಡು, ಜ.18(ರಂಗಸ್ವಾಮಿ)– ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದೆ, ಬರ, ಪ್ರಾಕೃತಿಕ ವಿಕೋಪಗಳಿಂದಾಗಿ ರೈತರು ಸಂಕಷ್ಟದಲ್ಲಿ ಸಿಲುಕಿದ್ದು, ಕಳೆದ ಎರಡುವರೆ ವರ್ಷಗಳಲ್ಲಿ ರಾಜ್ಯದಲ್ಲಿ ಸುಮಾರು 3 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಆದರೆ ರೈತರ ಸಂಕಷ್ಟವನ್ನು ಕೇಳುವವರು ಯಾರು ಇಲ್ಲದಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಕೃಷಿಮೇಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ದೇಶಕ್ಕೆ ಅನ್ನ ನೀಡುವ ರೈತ ಹಾಗೂ ಯೋಧ ಎರಡು ಕಣ್ಣುಗಳಿದ್ದಂತೆ, ರೈತರ ಸಂಕಷ್ಟವನ್ನು ಕೇಳಲು ಯಾರು ಇಲ್ಲದಂತಾಗಿದೆ, ಕಬ್ಬಿನ ವೈಜ್ಞಾನಿಕ ಬೆಲೆಗಾಗಿ ಬೆಳಗಾವಿಯಲ್ಲಿ ರೈತರು ಪ್ರತಿಭಟನೆಗೆ ಮುಂದಾದಾಗ, ರಾಜ್ಯ ಸರ್ಕಾರ ರೈತರ ಪ್ರತಿಭಟನೆ ಕಡೆಗಣಿಸಿದಾಗ ಆತ್ಮಹತ್ಯೆ ಪ್ರಯತ್ನಕ್ಕೆ ಮುಂದಾದ ವೇಳೆ, ನನ್ನ ಹುಟ್ಟುಹಬ್ಬವನ್ನು ಬದಿಗೊತ್ತಿ ಪ್ರತಿಭಟನೆಯಲ್ಲಿ ಭಾಗಿಯಾಗಿ ರೈತರ ಪ್ರತಿಭಟನೆಗೆ ಬೆಂಬಲ ನೀಡುವ ಮೂಲಕ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇನೆ, ದೇಶದ ಇತಿಹಾಸದಲ್ಲೇ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ, ರೈತರಿಗೆ ಪ್ರತ್ಯೇಕ ಬಜೆಟ್ ಮಂಡಿಸಿ, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸಿದ ಹೆಗ್ಗಳಿಕೆ ಬಿ.ಎಸ್.ಯಡಿಯೂರಪ್ಪರವರಿಗೆ ಸಲ್ಲುತ್ತದೆ ಅಲ್ಲದೆ ಚಾಮರಾಜನಗರ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಮಾಡಿದ್ದರು. ರಾಜ್ಯದಲ್ಲಿ ಮುಖ್ಯಮಂತ್ರಿಗಳಾದವರು ಅವರವರ ಜಿಲ್ಲೆಗಳಲ್ಲಿ ರೈತರಿಗೆ ನೆರವಾಗಿ ರೈತರ ಬಾಳನ್ನು ಹಸನುಗೊಳಿಸುವ ಯೋಜನೆಗಳನ್ನು ರೂಪಿಸಿದ್ದಲ್ಲಿ ಇಂದು ರೈತರ ಆತ್ಮಹತ್ಯೆಗಳು ನಡೆಯುತ್ತಿರಲಿಲ್ಲ. ಉದ್ಯಮಿಗಳು ನೆಮ್ಮದಿ ಜೀವನ ನಡೆಸುತ್ತಿರುವುದಂತೆ, ರೈತರು ಕೂಡ ನೆಮ್ಮದಿ ಜೀವನ ಸಾಗಿಸಿದಾಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ರೈತಾಪಿ ವರ್ಗಕ್ಕೆ ದಿಕ್ಕು ತೋರಿಸುವ ಕೆಲಸವನ್ನು ಜಾತ್ರೆಯ ಮುಖೇನ ನಡೆಸುವ ಮೂಲಕ ದೇಶಕ್ಕೆ ಮಾದರಿಯಾಗಿ ಶ್ರೀಮಠದ ಕಾರ್ಯ ಶ್ಲಾಘನೀಯ ಎಂದರು.

ಕೃಷಿ ಲಾಭದಾಯಕವಾಗಿಸಿ, ರೈತರು ಉದ್ಯಮಿಗಳಾಗಬಹುದು

ರೈತರಿಗೆ ಜಾಗೃತಿ ಮೂಡಿಸುತ್ತಿರುವ ಸುತ್ತೂರು ಮಠ: ಕೃಷಿ ಸಚಿವ ಚಲುವರಾಯಸ್ವಾಮಿ



ಕೃಷಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು.



ಸಚಿವ ಚಲುವರಾಯಸ್ವಾಮಿ ಅವರನ್ನು ಸನ್ಮಾನಿಸುತ್ತಿರುವುದು.

ನಂಜನಗೂಡು, ಜ.18– ಸುತ್ತೂರು ಮಠವು ಕೃಷಿ, ಕ್ಷೇತ್ರದಲ್ಲಿ ಸಾವಯವ ಕೃಷಿ ಸುಸ್ಥಿರ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ ಕೃಷಿಯನ್ನು ಹೇಗೆ ಲಾಭ ದಾಯಕವಾಗಿಸಬಹುದು. ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ರೈತರು ಸಹ ಉದ್ಯಮಿಗಳಾಗಬಹುದು ಎಂಬ ಬಗ್ಗೆ ತಿಳುವಳಿಕೆ ಮೂಡಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಕೃಷಿ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿ ಮಾತನಾಡಿದರು.

ಸುತ್ತೂರು ಮಠವು ಕೂಡ ಈ ಭಾಗದ ರೈತರಿಗೆ ಕೃಷಿ ಕ್ಷೇತ್ರದಲ್ಲಿ ನೆರವಾಗುವ ಉದ್ದೇಶದಿಂದ ಕೃಷಿ ಸಂಶೋಧನೆ ಕೇಂದ್ರವನ್ನು ಸ್ಥಾಪಿಸಿ ಆಧುನಿಕ ಕೃಷಿ ಪದ್ಧತಿ, ಕೃಷಿಯಲ್ಲಿ ಆಗಿರುವ ಆಧುನಿಕ ಆವಿಷ್ಕಾರ, ತಂತ್ರಜ್ಞಾನ, ಕೃಷಿ ಸುಸ್ಥಿರತೆ, ಸಾವಯವ ಕೃಷಿ ಪದ್ಧತಿಯ ಬಗ್ಗೆ ಸಲಹೆ ನೀಡುವ ಕೆಲಸವನ್ನು ಮಾಡುವ ಮೂಲಕ ರೈತರನ್ನು ಸಬಲೀಕರಣ ಗೊಳಿಸಲು ಶ್ರಮಿಸುತ್ತಿದೆ, ಶ್ರೀಮಠವು ರೈತ ವರ್ಗ ಮೇಲೆ ತೋರುತ್ತಿರುವ ಕಾಳಜಿಯಿಂದಾಗಿ ಮುಂದಿನ ದಿನಗಳಲ್ಲಿ ರೈತ ವರ್ಗ ಸಂಪೂರ್ಣವಾಗಿ ಸದೃಢಗೊಳ್ಳಲಿದೆ ಎಂದು ಹೇಳಿದರು.

ರಾಜ್ಯ ಸರ್ಕಾರವು ಕೂಡ ರೈತರನ್ನು ಆರ್ಥಿಕವಾಗಿ ಸದೃಢಗೊಳಿಸಿ, ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಹಲವಾರು ಬದಲಾವಣೆಗಳನ್ನು ತಂದಿದೆ. ಈ ಕಾರಣದಿಂದಲೇ ರಾಜ್ಯದಲ್ಲಿ ಸುಮಾರು 27 ಲಕ್ಷ ರೈತರು ಬೆಳೆವಿಮೆ ಯೋಜನೆಯಡಿ ನೋಂದಾವಣೆ ಮಾಡಿಕೊಂಡಿದ್ದಾರೆ. ಪ್ರಾಕೃತಿಕ ವಿಕೋಪದಿಂದ ಬೆಳೆ ನಷ್ಟಕ್ಕೀಡಾದ ರೈತರಿಗೆ 1 ಸಾವಿರದ 500 ಕೋಟಿಯಷ್ಟು ಬೆಳೆ ಪರಿಹಾರ ವಿಮೆಯನ್ನು ಒದಗಿಸಲಾಗಿದೆ. 27 ಲಕ್ಷ ರೈತರು ಬೆಳೆ ವಿಮೆ ಯೋಜನೆಯಲ್ಲಿ ನೋಂದಾವಣೆ ಮಾಡಿಕೊಂಡಿದ್ದಾರೆ, ಈ ಹಿನ್ನೆಲೆಯಲ್ಲಿ ಬೆಳೆ ವಿಮೆ ಸದ್ಬಳಕೆ ಮಾಡಿಕೊಂಡ ಎರಡನೇ ರಾಜ್ಯ ಎಂಬ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ನೀಡಿ ರಾಜ್ಯ ಸರ್ಕಾರಕ್ಕೆ ಪ್ರಶಸ್ತಿ ನೀಡಿ ಗೌರವಿಸಿದೆ, ನಾನು ಕೃಷಿ ಸಚಿವನಾದ ನಂತರ ನೀರಾವರಿ ಕ್ಷೇತ್ರದಲ್ಲೂ ಸಹ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ಪ್ರಗತಿಪರ ರೈತ ಮಹಿಳೆ ರಾಜೇಶ್ವರಿ ವಿ.ಪಾಟೀಲ್ ಕೃಷಿ ಉಪನ್ಯಾಸ ಕುರಿತು ಮಾತನಾಡಿ ಮಹಿಳೆಯರು ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು, ಹಿಂಜರಿಕೆ ಭಾವನೆ ಬಿಟ್ಟು ಮಾರುಕಟ್ಟೆಗಳಿಗೆ ತೆರಳಿ ತಮ್ಮ ಬೆಳೆಗಳನ್ನು ಮಾರಲು ತಮ್ಮನ್ನು ತೊಡಗಿಸಿಕೊಳ್ಳಬೇಕು, ಅಲ್ಲದೆ ಸಮಗ್ರ ಕೃಷಿ ಪದ್ಧತಿ, ಪಶುಸಂಗೋಪನೆ ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢಗೊಳ್ಳಬಹುದು ಎಂದರು.

ಕೃಷಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತರಾದ ರೈತರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು, ಮೊದಲನೇ ಬಹುಮಾನವನ್ನು ಗಾಯಿತ್ರಿ, ಸುತ್ತೂರಿನ ಲಕ್ಷ್ಮಣನಾಯಕ, ಹಾಗೂ ಅಂಬಳೆ ಗ್ರಾಮದ ಪುಷ್ಪಲತಾ, ಶಿವಮಲ್ಲು ದ್ವಿತೀಯ ಬಹುಮಾನವನ್ನು ಪ್ರಶಸ್ತಿಯನ್ನು, ಕಿರಣ್ ನಾಯಕ್, ಜಿ.ಎಂ. ರೇವಣ್ಣ ತೃತೀಯ ಬಹುಮಾನ ಪಡೆದರು.

ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ, ವಿಜಯಪುರ ವನಶ್ರೀ ಸಂಸ್ಥಾನ ಮಠದ ಡಾ. ಶ್ರೀ ಬಸವಕುಮಾರಸ್ವಾಮಿಜೀ, ಮೈಸೂರು ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠದ ಅರ್ಜುನ ಅವಧೂತ ಗುರೂಜಿ, ದಿವ್ಯ ಸಾನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ನಾಗೇಂದ್ರ, ಮಾಜಿ ಶಾಸಕ ಬಿ.ಹರ್ಷವರ್ಧನ್, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಮುಖಂಡ ಕೌಟಿಲ್ಯ ರಘು, ಮೈಸೂರು ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯೆ ಮಂಗಳಾ ಸೋಮಶೇಖರ್, ಸದಾನಂದ, ಎಸ್.ಎಂ. ಕೆಂಪಣ್ಣ, ವೀರೇಶ್, ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿಗಳಾದ ಗಂಗಾಧರ್, ಎಸ್. ಗುರುಸ್ವಾಮಿ ಉಪಸ್ಥಿತರಿದ್ದರು.

> “ ರೈತರು ಉತ್ಪಾದನೆಯಲ್ಲಿ ಗೆಲ್ಲುತ್ತಿದ್ದಾರೆ, ಆದರೆ ಮಾರುಕಟ್ಟೆಯಲ್ಲಿ ಸೋಲುತ್ತಿದ್ದಾರೆ, ರೈತರು ಉತ್ಪಾದನೆಗೆ ಸೀಮಿತರಾಗದೆ, ಬೆಳೆಗಳನ್ನು ಸಂಸ್ಕರಣೆ, ಮೌಲ್ಯವರ್ಧನೆ ಮಾಡಿ ಉದ್ಯಮಿಗಳಾಗುವ ಮೂಲಕ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುವ ಮೂಲಕ ಗೆಲ್ಲಬೇಕು. ಕೃಷಿ ಉದ್ಯಮಿಯಾಗಲು ಇಂದಿನ ದಿನಗಳಲ್ಲಿ ಮಾಹಿತಿ ಕೊರತೆಯಿಲ್ಲ, ರೈತರಲ್ಲಿ ಇರುವುದು ಆಸಕ್ತಿಯ ಕೊರತೆ. ಆದ್ದರಿಂದ ರೈತರು ತರಬೇತಿ ಪಡೆದು ನಿಮ್ಮ ಬೆಳೆಗಳನ್ನು ಸಂಸ್ಕರಣೆ ಮಾಡಿ ಉದ್ಯಮಿಗಳಾಗಿ ಆರ್ಥಿಕವಾಗಿ ಸದೃಢಗೊಳ್ಳಬೇಕು.
>
> –ಯೋಗಿಶ್ ಅಪ್ಪಾಜಯ್ಯ, ಸಾವಯುವ ಕೃಷಿ ಉದ್ಯಮಿ



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಸಿಎಂ ಸಿದ್ದರಾಮಯ್ಯ ಅವರನ್ನು ಸುತ್ತೂರು ಶ್ರೀಗಳು ಸನ್ಮಾನಿಸಿದರು. ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ ಇನ್ನಿತರರು ಚಿತ್ರದಲ್ಲಿದ್ದಾರೆ. –ಚಿತ್ರ: ಸುತ್ತೂರು ನಂಜುಂಡ ನಾಯಕ

ಸುತ್ತೂರಲ್ಲಿ ದೇಸಿ ಆಟಗಳ ಕಲರವ

ರಾಗಿ ಬೀಸುವ ಸ್ಪರ್ಧೆಯಲ್ಲಿ ಗ್ರಾಮೀಣ ಮಹಿಳೆಯರ ಆಸಕ್ತಿ

ನಂಜನಗೂಡು, ಜ.18–ಗ್ರಾಮೀಣ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ ಕಾಯಕಕ್ಕೆ ಮುಂದಾಗಿರುವ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳ ಕಲರವ ಹೆಚ್ಚಾಗಿದ್ದು ಗ್ರಾಮೀಣ ಸಂಸ್ಕೃತಿಯ ಪರಂಪರೆಯನ್ನು ಉಳಿಸುವ ರಾಗಿ ಬೀಸುವ ಸ್ಪರ್ಧೆಯಲ್ಲಿ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು.

ಸುತ್ತೂರು ಕ್ಷೇತ್ರದಲ್ಲಿ ಮಹದೇಶ್ವರರು ರಾಗಿ ಬೀಸಿದ್ದರು ಎಂಬ ಪ್ರತೀತಿಯಿದ್ದು ಮಹದೇಶ್ವರರು ಬೀಸಿದ ರಾಗಿಯ ಕಲ್ಲನ್ನು ಶ್ರೀಮಠದಲ್ಲಿ ಈಗಲೂ ಪೂಜಿಸಿಕೊಂಡು ಬರಲಾಗುತ್ತಿದೆ. ಗ್ರಾಮೀಣ ಭಾಗದ ಮಹಿಳೆಯರ ಶ್ರಮ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಇದೇ ಮೊದಲ ಬಾರಿಗೆ ಜಾತ್ರಾ ಮಹೋತ್ಸವದಲ್ಲಿ ರಾಗಿ ಬೀಸುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ನೂರಾರು ಮಹಿಳೆಯರು ಉತ್ಸಾಹದಿಂದ ಭಾಗಿಯಾಗಿ ಪ್ರೇಕ್ಷಕರ ಚಪ್ಪಾಳೆ, ಪ್ರಶಂಸೆಯನ್ನು ಗಳಿಸಿಕೊಂಡರು. ರಾಗಿ ಬೀಸುವ ಸ್ಪರ್ಧೆಯಲ್ಲಿ ಚಾಮರಾಜನಗರ ತಾಲೂಕಿನ ಕೆಂಪನಪುರದ ತಾಯಿಮಣಿ ಪ್ರಥಮ ಬಹುಮಾನ, ನಂಜನಗೂಡು ತಾಲೂಕಿನ ಸೋನಹಳ್ಳಿಯ ಜ್ಯೋತಿ ದ್ವಿತೀಯ ಬಹುಮಾನ ಹಾಗೂ ಸೂರಹಳ್ಳಿಯ ನಿರ್ಮಲ ತೃತಿಯ ಬಹುಮಾನ ಪಡೆದುಕೊಂಡರು. ರಾಗಿ ಬೀಸುವ ಸ್ಪರ್ಧೆಯಲ್ಲಿ ವಿಜೇತರಾದ ರೈತ ಮಹಿಳೆಯರಿಗೆ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ನಗದು ಬಹುಮಾನ ನೀಡಿ, ಗೌರವಿಸಲಾಯಿತು.

ಅಲ್ಲದೆ ಮಹಿಳೆಯರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಟಿನ್ನುಗಳನ್ನು ಕೋಲಿನಿಂದ ಹೊಡೆದು ಗೆಲ್ಲುವ ಆಟದಲ್ಲಿ ಪಾಲ್ಗೊಂಡು ಸಂಭ್ರಮಪಟ್ಟರು. ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿ ಇಟ್ಟುಕೊಂಡು ಓಡುವ ಆಟವು ಪ್ರೇಕ್ಷಕರನ್ನು ರಂಜಿಸಿತು. ಅಲ್ಲದೆ ನೀರು ತುಂಬಿದ ಬಿಂದಿಗೆಯನ್ನು ತಲೆ ಮೇಲೆ ಇಟ್ಟುಕೊಂಡು ಓಡುವ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗಿಯಾದರು.

ಇನ್ನೊಂದೆಡೆ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಗಾಳಿಪಟ ಸ್ಪರ್ಧೆ, ಬುಗುರಿ, ಕುಂಟೆಬಿಲ್ಲೆ ಅಳುಗುಳಿ ಮನೆ, ಆನೆಕಲ್ಲು, ಚೌಕಬಾರ, ಹುಲಿ ಕುರಿ ಆಟ, ನವಂಕರಿ ಆಟಗಳು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸಿದವು.





ರಾಗಿ ಬೀಸುವ ಸ್ಪರ್ಧೆಯಲ್ಲಿ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗ ವಹಿಸಲು ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಎಟ್ರಿಯಾ ಹೋಟೆಲ್ ಬಳಿ ಮಾಜಿ ಶಾಸಕ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಹಾಗೂ ಪಕ್ಷದ ಮುಖಂಡರು ಸ್ವಾಗತಿಸಿದರು.

ಪ್ರಗತಿಪರ ರೈತರು, ರೈತ ಮಹಿಳೆಯರಿಗೆ ಸನ್ಮಾನ



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪ್ರಗತಿಪರ ರೈತರು, ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಜ.18– ಯಳಂದೂರು ತಾಲೂಕು ದುಗ್ಗಹಟ್ಟಿ ಗ್ರಾಮದ ಶ್ರೀಮತಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಪ್ರತಿವರ್ಷ ಚಾಮರಾಜನಗರ ಜಿಲ್ಲೆಗಳಲ್ಲಿ ಅತ್ಯುತ್ತಮವಾಗಿ ಬೆಳೆ ಬೆಳೆದ ರೈತರಿಗೆ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸನ್ಮಾನಿಸಲಾಯಿತು.

ಈ ವರ್ಷವೂ ಅತ್ಯುತ್ತಮ ಇಳುವರಿ ಪಡೆದ ಚಾಮರಾಜನಗರ ಜಿಲ್ಲೆಯ ರೈತರ ತಾಕುಗಳಿಗೆ ತಜ್ಞರು ಭೇಟಿ ನೀಡಿ ಇಳುವರಿಯನ್ನು ಪರೀಕ್ಷಿಸಿ ಉತ್ತಮ ಇಳುವರಿ ಪಡೆದ ರೈತರನ್ನು ಆಯ್ಕೆ ಮಾಡಿ ಬಾಳೆ, ಕಬ್ಬು ಟೊಮ್ಯಾಟೊ, ಮೆಕ್ಕೆ ಜೋಳ, ಪೋಲ್ ಬೀನ್ಸ್, ಬೆಳೆದ ಒಟ್ಟು 10 ರೈತರಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು.

ಬಾಳೆ ಬೆಳೆಗೆ ಯಳಂದೂರು ತಾಲೂಕು ಗೌಡಹಳ್ಳಿಯ ಶಿವಮಲ್ಲಪ್ಪ ಗುರುಸಿದ್ಧದೇವರು ಪ್ರಥಮ ಬಹುಮಾನವನ್ನು, ಯಳಂದೂರು ತಾಲೂಕಿನ ಮಲಾರಪಾಳ್ಯದ ಎಂ.ಗುರುಸ್ವಾಮಿ ದ್ವಿತೀಯ ಬಹುಮಾನ, ಮುಸುಕಿನ ಜೋಳ ಬೆಳೆಗೆ ಹನೂರು ತಾಲ್ಲೂಕಿನ ಲೋಕ್ಕನಹಳ್ಳಿಯ ವೆಂಕಟೇಶ್ ವಿ. ಪ್ರಥಮ, ಹನೂರು ತಾಲೂಕಿನ ಆಂಡಿಪಾಳ್ಯದ ಮೂರ್ತಿ ಎಂ. ದ್ವಿತೀಯ, ಕಬ್ಬು ಬೆಳೆಯಲ್ಲಿ ಕೊಳ್ಳೇಗಾಲ ತಾಲೂಕಿನ ಅಣಗಳ್ಳಿ ಗ್ರಾಮದ ಎಂ.ಮಾದಯ್ಯ ಪ್ರಥಮ, ಕೊಳ್ಳೇಗಾಲ ತಾಲೂಕಿನ ಸುರಪುರ ಗ್ರಾಮದ ಎಲ್. ರವಿ ದ್ವಿತೀಯ, ಟೊಮ್ಯಾಟೊ ಬೆಳೆಯ ಚಾಮರಾಜನಗರ ತಾಲೂಕಿನ ವೀರನಪುರ ಗ್ರಾಮದ ಸಿದ್ದರಾಜು.ಪಿ. ಪ್ರಥಮ, ಕೆಬ್ಬೆಪುರ ಗ್ರಾಮದ ಪ್ರಭುಸ್ವಾಮಿ ದ್ವಿತೀಯ, ಪೋಲ್ ಬೀನ್ಸ್ ಬೆಳೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಕುರುಬಗೇರಿಯ ಕೃಷ್ಣಗೌಡ ಪ್ರಥಮ ಹಾಗೂ ನೇನೆಕಟ್ಟೆಯ ಬಸವಣ್ಣ ದ್ವಿತೀಯ ಬಹುಮಾನ ಪಡೆದಿರುತ್ತಾರೆ.

ಮಾದಾಪುರ ಕೆಂದಾವರೆ ಪದ್ಮಭೂಷಣ ಮಹದೇವಪ್ಪ ಸೇವಾ ಟ್ರಸ್ಟ್ ಚಾಮರಾಜನಗರ ಸಹಯೋಗದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿ ಸಾಧನೆಗೈದ 5 ರೈತ ಮಹಿಳೆಯರಿಗೆ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸನ್ಮಾನಿಸಿ ಪ್ರಶಸ್ತಿ ನೀಡಲಾಯಿತು.

ಭತ್ತದ ಬೆಳೆಯಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹರತಲೆ ಗ್ರಾಮದ ಚಿಕ್ಕತಾಯಮ್ಮ ಮಾದೇಗೌಡ, ಹುಣಸೂರು ತಾಲೂಕಿನ ಬೀರನಹಳ್ಳಿ ಶಿವಮ್ಮ ಮಹದೇವಪ್ಪ, ಬಾಳೆ ಬೆಳೆಯಲ್ಲಿ ಚಾಮರಾಜನಗರ ತಾಲೂಕಿನ ಕುಂಬಾರ ಗುಂಡಿ ಗ್ರಾಮದ ರತ್ನಮ್ಮ ಗುರುಸ್ವಾಮಪ್ಪ, ರೇಷ್ಮೆ ಬೆಳೆ ಯಲ್ಲಿ ಕೊಳ್ಳೇಗಾಲ ತಾಲೂಕಿನ ಕುಂತೂರು ಗ್ರಾಮದ ಗುಣಸಾಗರಿ ಮಹದೇವಸ್ವಾಮಿ ಹಾಗೂ ಉದ್ಯಮಿ ಪ್ರಶಸ್ತಿಯನ್ನು ಮೈಸೂರು ತಾಲೂಕಿನ ದೂರ ಗ್ರಾಮದ ಅಶ್ವಿನಿ ಎಸ್.ಲೋಕೇಶ್ ಪಡೆದಿರುತ್ತಾರೆ. ಈ ಎಲ್ಲಾ ರೈತರಿಗೂ ಕೃಷಿ ವಿಚಾರ ಸಂಕೀರ್ಣ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಸ್ಮಾರ್ಟ್ ಸಿಟಿ ಬದಲಿಗೆ ಸ್ಮಾರ್ಟ್ ವಿಲೇಜ್ ನಿರ್ಮಿಸಿ

ಕೃಷಿ ವಿಚಾರ ಸಂಕಿರಣದಲ್ಲಿ ಪ್ರಗತಿಪರ ರೈತ ಮಹಿಳೆ ಆಶಾ ಶೇಷಾದ್ರಿ ಮನವಿ



ನಂಜನಗೂಡು, ಜ.18–ಪ್ರಸ್ತುತ ದಿನದಲ್ಲಿ ಗ್ರಾಮೀಣ ಜೀವನ ಮತ್ತು ಕೃಷಿ ಬದುಕಿಗೆ ಹೆಚ್ಚಿನ ಒತ್ತು ನೀಡುವ ದೃಷ್ಟಿಯಿಂದ ಸ್ಮಾರ್ಟ್ ಸಿಟಿಗಳ ಬದಲಿಗೆ ಸ್ಮಾರ್ಟ್ ವಿಲೇಜ್‌ಗಳನ್ನು ನಿರ್ಮಾಣ ಮಾಡಬೇಕಿದೆ. ಸ್ಮಾರ್ಟ್ ವಿಲೇಜ್‌ನಲ್ಲಿ ಕೃಷಿಗೆ ಬೇಕಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವ ಕೆಲಸ ಆಗಬೇಕು ಎಂದು ಪ್ರಗತಿಪರ ರೈತ ಮಹಿಳೆ ಆಶಾ ಶೇಷಾದ್ರಿ ಹೇಳಿದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ಆಯೋಜಿಸಿದ್ದ ಕೃಷಿ ವಿಚಾರ ಸಂಕಿರಣದಲ್ಲಿ ಕೃಷಿಯಲ್ಲಿ ಮಹಿಳೆ: ಸುಸ್ಥಿರ ಅಭಿವೃದ್ಧಿ ಮತ್ತು ಆಹಾರ ಭದ್ರತೆ ಕುರಿತು ಉಪನ್ಯಾಸ ನೀಡಿದರು. ಇಂದಿನ ಯುವಕರು ಹಳ್ಳಿಗಳನ್ನು ಬಿಟ್ಟು ನಗರದ ಕಡೆ ವಲಸೆ ಹೋಗುತ್ತಿದ್ದಾರೆ. ಇದಕ್ಕೆ ಆರ್ಥಿಕ ಉದಾರೀಕರಣ, ನಗರೀಕರಣ, ಸಾಮಾಜಿಕ ಸಮಸ್ಯೆ, ಕೃಷಿಯಲ್ಲಿ ಕೂಲಿಕಾರ್ಮಿಕರ ಸಮಸ್ಯೆ, ಹಳ್ಳಿಗಳಲ್ಲಿ ಮೂಲ ಸೌಲಭ್ಯ ಇಲ್ಲದಿರುವುದು ಪ್ರಮುಖ ಕಾರಣವಾಗಿದೆ. ವೃತ್ತಿಯಲ್ಲಿ ಎಷ್ಟು ಕಷ್ಟಪಡುತ್ತೇವೆ ಅಷ್ಟು ಪ್ರಮಾಣದಲ್ಲಿ ಬೆಲೆ ಸಿಗುತ್ತದೆ. ಆದರೆ, ಕೃಷಿಯಲ್ಲಿ ಕಷ್ಟಕ್ಕೆ ತಕ್ಕ ಫಲ ಸಿಗುತ್ತಿಲ್ಲ. ಕೃಷಿಯಲ್ಲಿ ಎದುರಾಗುವ ನಾನಾ ಸಮಸ್ಯೆಗಳಿಂದಾಗಿ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ. ಇದನ್ನು ಆಯಾಯ ಸಂದರ್ಭದಲ್ಲಿ ಸರಿಪಡಿಸುವ ಕೆಲಸ ಮಾಡಬೇಕಿದೆ ಎಂದರು.

ಮುಂದಿನ ಕೆಲ ವರ್ಷಗಳಲ್ಲಿ ಗ್ರಾಮಾಂತರ ಭಾಗದ ಜನಸಂಖ್ಯೆ ಶೇ30ಕ್ಕೆ ಇಳಿಯಲಿದೆ. ಅದೇ ರೀತಿ ನಗರ ಪ್ರದೇಶದ ಜನಸಂಖ್ಯೆ ಶೇ.70ಕ್ಕೆ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ದೇಶದಲ್ಲಿ ಅಲ್ಲೋಲ ಕಲ್ಲೋಲ ಆಗುತ್ತದೆ. ದೇಶದಲ್ಲಿ ಶೇ.70 ರಷ್ಟು ಜನರಿಗೆ ಕೃಷಿ ಉದ್ಯೋಗ ನೀಡುತ್ತಿದೆ. ಒಂದು ವೇಳೆ ಗ್ರಾಮಾಂತರ ಪ್ರದೇಶದ ಜನ ಸಂಖ್ಯೆ ಕಡಿಮೆಯಾದರೆ ಆಹಾರ ಉತ್ಪಾದನೆ ಮೇಲೆ ಪೆಟ್ಟು ಬೀಳುತ್ತದೆ ಎಂದರು.

ವಲಸೆಯನ್ನು ತಪ್ಪಿಸುವ ದೃಷ್ಟಿಯಿಂದ ಕೃಷಿಯನ್ನು ಆದಾಯ ತರುವ ವೃತ್ತಿಯನ್ನಾಗಿ ಮಾಡಬೇಕಿದೆ. ಆ ಮೂಲಕ ನಗರ ಪ್ರದೇಶಕ್ಕೆ ವಲಸೆ ಹೋದವರನ್ನು ಮತ್ತೆ ಹಳ್ಳಿಗಳಿಗೆ ವಾಪಸ್ ಕರೆ ತರಬೇಕು. ಗ್ರಾಮೀಣ ಭಾರತವೇ ದೇಶದ ಆರ್ಥಿಕ ಅಭಿವೃದ್ಧಿಗೆ ಭದ್ರ ಬುನಾದಿ. ಕೃಷಿಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ಕೃಷಿ ಚಟುವಟಿಕೆಗಳನ್ನು ಹೆಚ್ಚಿಸಬೇಕು ಎಂದು ಹೇಳಿದರು.